

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಅಕ್ಟೋಬರ್ 16, 1988 ಸಂಪುಟ-10 ಸಂಚಿಕೆ-41-12 ರೂ. 1.50

ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಸಭೆ ಹದಿಮೂರನೇ ಮಹಾಧಿವೇಶನ: ಕರಡು ರಾಜಕೀಯ ವರದಿ ಸಿದ್ಧ

ಮುಂದಿನ ಸುಮಾರು ತಿಂಗಳು ಸಿ.ಪಿ.ಐ.(ಎಂ) ಸದಸ್ಯರು ಮತ್ತು ಹಿತೈಷಿಗಳಷ್ಟೇ ಅಲ್ಲ, ದೇಶದ ರಾಜಕೀಯ ವೀಕ್ಷಕರೆಲ್ಲಾ ಕೂಡಾ ಚರ್ಚಿಸಲಿರುವ ಸಿ.ಪಿಐ(ಎಂ)ನ ಹದಿಮೂರನೇ ಅಧಿವೇಶನದ ಎರಡು ರಾಜಕೀಯ ವರದಿಯನ್ನು ಅಂತಿಮಗೊಳಿಸಲಾಗಿದೆ. ನವದೆಹಲಿಯಲ್ಲಿ ಅಕ್ಟೋಬರ್ 2 ರಿಂದ 5 ದಿನ ಸಭೆ ಸೇರಿದ್ದ ಸಿ.ಪಿ.ಐ(ಎಂ)ನ ಕೇಂದ್ರ ಸಮಿತಿ ಈ ಕರಡನ್ನು ಚರ್ಚಿಸಿ ಅಂತಿಮಗೊಳಿಸಿದೆ. ಈ ಸಭೆ ಮೇಲೆ ದೀರ್ಘ ಚರ್ಚೆ ನಡೆಸಿದ್ದು ಮಾತ್ರವಲ್ಲದೆ ಕಳೆದ ಸಭೆಯ ನಂತರದ ಬೆಳವಣಿಗೆಗಳನ್ನು ಕೂಡಾ ಚರ್ಚಿಸಿತು.

ಅಂತರ್ರಾಷ್ಟ್ರೀಯ ರಂಗಗಳಲ್ಲಿ ಸಮಾಜವಾದೀ ಬಣದ, ಶಾಂತಿ, ಸ್ವಾತಂತ್ರ ಹಾಗೂ ಪ್ರಜಾಪ್ರಭುತ್ವ ಪರ ಶಕ್ತಿಗಳ ಬಲ ಪಕ್ಷದ ಕಳೆದ ಮಹಾಧಿವೇಶನದ ನಂತರದ ವರ್ಷಗಳಲ್ಲಿ ಹೆಚ್ಚಿದೆಯೆಂಬುದನ್ನು ಕರಡು ವರದಿ ಒತ್ತಿಹೇಳುತ್ತಾ ಇದರಿಂದಾಗಿ ಪರಮಾಣು ಯುದ್ಧ ತಡೆಯಲು, ವಿಶ್ವವನ್ನು ವಿನಾಶದಿಂದ ತಪ್ಪಿಸಲು ಸಾಧ್ಯವಾಗಿದೆ ಎಂದು ಹೇಳಿದೆ. ಮೂರನೇ ಜಗತ್ತಿನ ದೇಶಗಳ ಆರ್ಥಿಕ ವ್ಯವಸ್ಥೆಗಳನ್ನು ತಮ್ಮ ಅಡಿಯಾಳಾಗಿರುವ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳಿಗೆ ಆ ದೇಶಗಳಲ್ಲಿ ಪ್ರತಿರೋಧ ಹೆಚ್ಚುತ್ತಿದೆ. ಎಲ್ಲಾ ಸಮಾಜವಾದೀ ಸಾಧನೆಗಳನ್ನು ತುಚ್ಛೀಕರಿಸುವ, ಹಲವಾರು ಸಮಾಜವಾದೀ ದೇಶಗಳಲ್ಲಿ ಈಗ ಕಂಡುಬರುತ್ತಿರುವ ಹೊಸ ಬೆಳವಣಿಗೆಗಳನ್ನು ತಪ್ಪಾಗಿ ವಿಶ್ಲೇಷಿಸಿ ಜನರನ್ನು ದಾರಿ ತಪ್ಪಿಸಲು ಯತ್ನಿಸುತ್ತಿರುವ ಬಂಡವಾಳಶಾಹೀ ಅಪಪ್ರಚಾರದ ವಿರುದ್ಧ ಕರಡು ವರದಿ ಎಚ್ಚರಿಕೆ ನೀಡಿದೆಯೆಂದು ಕೇಂದ್ರ ಸಮಿತಿಯ ಸಭೆಯ ನಂತರ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮಾನನಷ್ಟ ಮಸೂದೆ ವಿರುದ್ಧ ಪ್ರಜಾಪ್ರಭುತ್ವ ಶಕ್ತಿಗಳ ವಿಜಯ

ಮಾನನಷ್ಟ ಮಸೂದೆಯ ವಿರುದ್ಧ ಸಮಸ್ತ ಜನತೆಯನ್ನು ಒಗ್ಗೂಡಿಸಿದ ರಾಜಕೀಯ ಪಕ್ಷಗಳನ್ನು, ಪತ್ರಿಕಾ ಮಾಧ್ಯಮ ಹಾಗೂ ಬುದ್ಧಿಜೀವಿಗಳನ್ನು ಕೇಂದ್ರ ಸಮಿತಿ ಅಭಿನಂದಿಸಿದೆ. ಈ ಮಸೂದೆ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಬಯಲಿಗೆಳೆಯುವ ಪತ್ರಿಕೆಗಳ ಹಾಗೂ, ಜನತೆಯ ಹಕ್ಕಿನ ಮೇಲೆ ನಡೆದ ಹಲ್ಲೆಯಾಗಿತ್ತು. ಎಲ್ಲಾ ಜನವಿಭಾಗಗಳೂ ತೋರಿದ ಐಕ್ಯ ಪ್ರತಿರೋಧದಿಂದಾಗಿ ಮಸೂದೆಯನ್ನು ವಾಪಸು ಪಡೆಯಲಾಯಿತು. ಇದು ಪ್ರಜಾಪ್ರಭುತ್ವ ಶಕ್ತಿಗಳ ಒಂದು ದೊಡ್ಡ ವಿಜಯ. ತಮ್ಮ ಮೂಲಭೂತ ಹಕ್ಕುಗಳ ಮೇಲೆ ಈ ರೀತಿಯ ಆಕ್ರಮಣಗಳನ್ನು ಜನತೆ ಸಹಿಸುವುದಿಲ್ಲವೆಂಬುದನ್ನು ಇದು ತೋರಿಸಿ ಕೊಟ್ಟಿದೆಯೆಂದಿರುವ ಕೇಂದ್ರ ಸಮಿತಿ ಕಾರ್ಮಿಕ ಸಂಘಗಳು ಮತ್ತು ಕೈಗಾರಿಕಾ ವಿವಾದ(ತಿದ್ದುಪಡಿ) ಮಸೂದೆ, ಆಸ್ಪತ್ರೆ ಮತ್ತಿತರ ಸಂಸ್ಥೆಗಳ ಮಸೂದೆ ಮುಂತಾದ ಇತರ ಪ್ರಜಾಪ್ರಭುತ್ವ ವಿರೋಧಿ ಮಸೂದೆಗಳ ವಿರುದ್ಧ ಹೋರಾಟ ಮುಂದುವರಿಸಬೇಕೆಂದು ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಕರೆನೀಡಿದೆ. (12ನೇ ಪುಟಕ್ಕೆ)





ಸಮಸ್ಯೆಗಳನ್ನು ಪರಿಹರಿಸಿಕೊಂಡು ಮುನ್ನಡೆ

ಇ.ಎಂ. ಎಸ್. ನಂಬೂದಿರಿ ಪಾಡ್

ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲೂ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯ ಜೊತೆಯಲ್ಲೇ ಹಲವು ವಿಷಮ ಸಮಸ್ಯೆಗಳನ್ನು ಕಮ್ಯುನಿಸ್ಟ್ ಚಳವಳಿ ಎದುರಿಸುತ್ತಿದೆ. ಅವುಗಳಲ್ಲಿ ಕೆಲವು ಚಳುವಳಿಯ ಮುನ್ನಡೆಯ ಫಲವಾಗಿ ಉದ್ಭವಿಸಿದುದಾಗಿದೆ.

ಕೇರಳದ ಪರಿಸ್ಥಿತಿಯನ್ನೇ ತೆಗೆದುಕೊಳ್ಳೋಣ. ಮುಸ್ಲಿಂಲೀಗ್ ಮತ್ತು ಕೇರಳ ಕಾಂಗ್ರೆಸ್‌ಗಳ ಸಹಾಯವಿಲ್ಲದೆಯೇ ಇಂದು ಎಡ ಪ್ರಜಾಸತ್ತಾತ್ಮಕ ರಂಗ ಕೇರಳದಲ್ಲಿ ಆಡಳಿತ ನಡೆಸುತ್ತಿದೆ. ಇಂತಹ ಪರಿಸ್ಥಿತಿಯ ಸಾಧ್ಯತೆಯ ಬಗ್ಗೆ ಯಾರೂ ಕನಸಿನಲ್ಲೂ ಎಣಿಸಿರಲಿಲ್ಲ. ಇಂದು ಇದು ಸಾಧ್ಯವಾಗಿರುವುದು ಕಮ್ಯುನಿಸ್ಟ್ ಚಳವಳಿಯ ಹೋರಾಟಗಳ ಫಲವೇ ಆಗಿದೆ.

ಆದರೆ ಆಡಳಿತ ನಡೆಸುತ್ತಿದ್ದರೂ ಕೂಡ ಸಿ.ಪಿ.ಐ(ಎಂ) ಒಳಗೊಂಡ ರಂಗ ಒಟ್ಟಾರೆಯಾಗಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ರಾಜ್ಯದ ವಿರೋಧ ಪಕ್ಷಗಳು ಗುತ್ತೇದಾರಿ ಪತ್ರಿಕೆಗಳ ಸಹಾಯದಿಂದ ಒಡ್ಡುತ್ತಿರುವ ಆತಂಕಗಳು ಮತ್ತು ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಅಸಹಕಾರವು ಉಂಟು ಮಾಡುತ್ತಿರುವ ಹಣಕಾಸಿನ ತೊಂದರೆಗಳನ್ನೆಲ್ಲಾ ಎದುರಿಸಿಯೂ ಆಡಳಿತ ನಡೆಸಲು ಸಾಧ್ಯವಾಗಿರುವುದಕ್ಕೆ ಎಡ ಮತ್ತು ಪ್ರಜಾಪ್ರಭುತ್ವ ರಂಗ ಅದರಲ್ಲೂ ರಂಗದ ಪ್ರತಿಯೊಂದು ಘಟಕ ಪಕ್ಷಗಳೂ ಅಭಿನಂದನಾರ್ಹವಾಗಿದೆ.

ಕೇರಳದ ವಿರೋಧಿ ಪಕ್ಷಗಳು ಮತ್ತು ಕೇಂದ್ರ ಸರ್ಕಾರ ಸೇರಿ ತೊಂದರೆಗಳನ್ನು ಒಡ್ಡಿದರೂ ಅವುಗಳನ್ನೆಲ್ಲಾ ಎದುರಿಸಿ ಮುಂದುವರಿಯುವುದಕ್ಕೆ ಸಹಾಯಕರವಾಗುವಂತಹ ಪರಿಸ್ಥಿತಿ ಕೇರಳದಲ್ಲೂ ಮತ್ತು ದೇಶದಲ್ಲೂ ಬೆಳೆದುಬರುತ್ತಿದೆ.

ಕೇಂದ್ರದಲ್ಲಾಗಲೀ ಕಾಂಗ್ರೆಸ್(ಐ) ಪಕ್ಷವೂ ಮತ್ತು ಸರ್ಕಾರವೂ ದಿನೇ ದಿನೇ ಜನತೆಯಿಂದ ದೂರ ಸರಿಯುತ್ತಿದೆ. ಇದಕ್ಕೆ ಒಂದು ದೊಡ್ಡ ನಿದರ್ಶನವೆಂದರೆ ಅಲಹಾಬಾದ್ ಒಳಗೊಂಡು ಹಲವಾರು ಕ್ಷೇತ್ರಗಳಲ್ಲಿ ಕಾಂಗ್ರೆ ಅನುಭವಿಸಿದ ಪರಿತಾಪಕರ ಸೋಲು. ಇದರ ನಂತರ ಬೋಫೋರ್ಸ್ ವ್ಯವಹಾರದಲ್ಲಿ ಪ್ರಧಾನಿ ಮತ್ತು ಸರ್ಕಾರೀ ಅಧಿಕಾರಿಗಳು ಹೇಳುತ್ತಾ ಬಂದ ವಿಷಯಗಳು ಹಸಿ ಸುಳ್ಳು ಎಂಬುದನ್ನು ಬಹಿರಂಗಪಡಿಸುವ ದಾಖಲೆಗಳು ಹೊರಬಿದ್ದಿವೆ.

ಈ ಪರಿಸ್ಥಿತಿಯಲ್ಲಿ ರಾಜೀವ್ ಸರ್ಕಾರವು ಎಷ್ಟು ಕಾಲ ಮುಂದುವರಿಯುತ್ತದೆ. ಅವಧಿಗೆ ಮೊದಲೇ ಚುನಾವಣೆಯನ್ನು ಎದುರಿಸ ಬೇಕಾದ ಸ್ಥಿತಿ ಬರಬಹುದು. ಚುನಾವಣೆ ಯಾವಾಗ ನಡೆದರೂ ಕೂಡ ಕಾಂಗ್ರೆ ಸೋಲುವುದು ಹೆಚ್ಚಿನ ಮಟ್ಟಿಗೆ ದೃಢಪಟ್ಟಿದೆ.

ಈ ಸನ್ನಿವೇಶದಲ್ಲಿ ಕಾಂಗ್ರೆಸ್(ಐ), ಮುಸ್ಲಿಂಲೀಗ್, ಕೇರಳ ಕಾಂಗ್ರೆಸ್, ಬಿ.ಜೆ.ಪಿ. ಪಕ್ಷಗಳಲ್ಲಿ ಅತೃಪ್ತಿ ತೀವ್ರವಾಗಿ ಬೆಳೆದು ಬರಲಿದೆ. ಈ ಪಕ್ಷಗಳ ಒಳಗೆ ಧೋರಣೆಗಳ ಬಗೆ ಪುನರ್ ಪರಿಶೀಲನೆ ನಡೆಸಬೇಕಾದ ಅವಶ್ಯಕತೆ ಉಂಟಾಗುತ್ತದೆ. ಈಗ ವಿರೋಧ ಪಕ್ಷಗಳಲ್ಲಿರುವ ಸಾವಿರಾರು ಜನರು ಎಡ ಮತ್ತು ಪ್ರಜಾಪ್ರಭುತ್ವ ರಂಗದ ಕಡೆಗೆ ಬರಲಿದ್ದಾರೆ.

ಹೀಗೆ ಬರಲಿರುವ ಜನರಿಗೆ ಯಾವ ರೀತಿಯಲ್ಲಿ ಪ್ರೋತ್ಸಾಹ ನೀಡಬೇಕೆಂಬುದು ಎಡ ಮತ್ತು ಪ್ರಜಾಪ್ರಭುತ್ವ ರಂಗದ ಮುಂದಿರುವ ಪ್ರಮುಖ ಪ್ರಶ್ನೆಯಾಗಿದೆ. (ವಿರೋಧ ಪಕ್ಷಗಳಲ್ಲಿರುವ ಹಲವು ವ್ಯಕ್ತಿಗಳು ಅಧಿಕಾರದ ಆಸೆಗಾಗಿ ಬರುವವರಾಗಿರಬಹುದು). ಆದರೆ ಬಹುಪಾಲು ಜನ ರಾಜಕೀಯ ಧೋರಣೆಯಲ್ಲಿನ ಭಿನ್ನತೆಯ ಆಧಾರದ ಮೇಲೆ ನಾಯಕತ್ವದ ವಿರುದ್ಧ ಹೋರಾಟ ನಡೆಸಿ ಆ ಪಕ್ಷಗಳಿಂದ ಹೊರಗೆ ಬರುವವರಾಗಿದ್ದಾರೆ. ಅಧಿಕಾರದ ಆಸೆಗಾಗಿ ಬರುವವರಿಗೆ ಪ್ರೋತ್ಸಾಹ ನೀಡದೆ ತಾತ್ವಿಕವಾಗಿ ನಮ್ಮ ರಂಗವನ್ನು ಒಪ್ಪಿಕೊಳ್ಳುವ ಜನರನ್ನು ಎಡ ಮತ್ತು ಪ್ರಜಾಪ್ರಭುತ್ವ ರಂಗದಲ್ಲಿ ಸೇರಿಸಿಕೊಳ್ಳುವ ಪ್ರಯತ್ನವನ್ನು ನಾವು ಮಾಡಬೇಕಾಗಿದೆ.

ಈ ಕಾರ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರದ ಕಾರ್ಯನಿರ್ವಹಣೆಯನ್ನು, ಧೋರಣೆ ಮತ್ತು ನಿಲುವುಗಳನ್ನು ರೂಪಿಸಬೇಕಾಗಿದೆ. ತೀರಾ ಕೇಂದ್ರೀಕೃತವಾದಂತಹ ಆಡಳಿತ ವ್ಯವಸ್ಥೆಯ ಅಡಿಯಲ್ಲಿರುವ ಒಂದು ರಾಜ್ಯ ಸರ್ಕಾರ ಎಂಬ ದೃಷ್ಟಿಯಲ್ಲೂ, ಆರ್ಥಿಕ ಪರಿಸ್ಥಿತಿಯಲ್ಲಿ ಗಂಭೀರವಾದ ಬಿಕ್ಕಟ್ಟನ್ನು ಎದುರಿಸುತ್ತಿರುವ ಒಂದು ದೇಶದ ಭಾಗ ಎಂಬ ನೆಲೆಯಲ್ಲೂ ಜನತೆಗೆ ಗರಿಷ್ಠ ಪ್ರಮಾಣದಲ್ಲಿ ಭರವಸೆಗಳನ್ನು ಕಾರ್ಯರೂಪಕ್ಕೆ ತರುವುದು ತುಂಬಾ ಪ್ರಯೋಜನಕರವಾಗಿದೆ. ಕೇರಳದ ವಿರೋಧ ಪಕ್ಷಗಳು ಮತ್ತು ಕೇಂದ್ರ ಸರ್ಕಾರ ಒಟ್ಟಾಗಿ ಸೇರಿ ಕೇರಳದ ಆಡಳಿತ ರಂಗಕ್ಕೆ ತೀವ್ರ ಅಡ್ಡಿ ಆತಂಕಗಳನ್ನು ಒಡ್ಡುತ್ತಿದ್ದಾರೆ. ಆದ್ದರಿಂದ ಎಲ್ಲಾ ಜನಹಿತ ಕಾರ್ಯಗಳನ್ನು ಮಾಡುವವೆಂಬ ಭರವಸೆಯನ್ನು ನಾವು ಕೊಡುವುದು ಜನರಲ್ಲಿ ಅಂತಹ ಪ್ರಚಾರ ನಡೆಸುವುದು ಅಪಾಯಕರವಾದ ವಿಷಯವಾಗಿದೆ.

ಆದರೆ ಎಷ್ಟೇ ಕಿರಿಯದಾದರೂ ಸತ್ವವುಳ್ಳ ಕೆಲವು ಕಾರ್ಯಗಳನ್ನು ಇವತ್ತಿನ ಪರಿಸ್ಥಿತಿಯಲ್ಲಿ ಮಾಡುವುದಕ್ಕೆ ಸಾಧ್ಯವೆಂಬುದು ಸತ್ಯ. ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರ್ಕಾರ, ಅದರ ವಿವಿಧ ಘಟಕ ಪಕ್ಷಗಳು, ಅವುಗಳ ನೇತೃತ್ವದಲ್ಲಿರುವ ಸಾಮೂಹಿಕ ಸಂಘಟನೆಗಳು ಈ ಸಂಘಟನೆಗಳಿಂದ ಹೊರಗಿರುವ ಲಕ್ಷಾಂತರ ಜನರ ಸಹಾಯ, ಸಹಕಾರಗಳನ್ನು ಪಡೆದುಕೊಂಡರೆ ಕೆಲವರು ಜನಹಿತ ಕಾರ್ಯಗಳನ್ನಾದರೂ ಸಾಧಿಸಬಹುದಾಗಿದೆ. ಆದರೆ ಈ ಜನರ ಸಹಾಯ ತೆಗೆದುಕೊಂಡರೆ ಮಾತ್ರ ಇದು ಸಾಧ್ಯ ಎಂಬುದನ್ನು ನಾವು ತಿಳಿಯಬೇಕಾಗಿದೆ.

ಅಖಿಲ ಭಾರತ ಮಟ್ಟದಲ್ಲಿ

ಕೇರಳದ ರೀತಿಯಲ್ಲೇ ಅಖಿಲ ಭಾರತ ಮಟ್ಟದಲ್ಲಿ ಸಿ.ಪಿ.ಐ.(ಎಂ) ಮತ್ತಿತರ ಎಡ ಪಕ್ಷಗಳು ಶಕ್ತಿಯುತವಾಗಿ ಬೆಳೆಯುತ್ತಿವೆ. ಆದರೆ ಎಡಪಕ್ಷಗಳು ತಮ್ಮ ಸ್ವಂತ ಶಕ್ತಿಯನ್ನು ಅವಲಂಬಿಸಿ ಸ್ವತಂತ್ರವಾಗಿ ಕಾಂಗ್ರೆಯನ್ನು ಸೋಲಿಸುವ ನಂಬಿಕೆ ನಮಗಿಲ್ಲ. ಎಡಪಕ್ಷಗಳಿಗಿಂತ ಹೆಚ್ಚು ಶಕ್ತಿ ವಿರೋಧ ಪಕ್ಷಗಳ ಒಕ್ಕೂಟಕ್ಕೆ ಇದೆ ಯೆಂಬುದು ನಿಜ. ಆದ್ದರಿಂದಲೇ ಹಿಂದಿ ಪ್ರದೇಶಗಳಲ್ಲಿ ಜನತಾ, ಲೋಕದಳ, ಜನಮೋರ್ಚಾ ಸೇರಿದಂತಹ ರಂಗ, ಆಂಧ್ರದಲ್ಲೂ ತಮಿಳುನಾಡಿನಲ್ಲೂ ತೆಲುಗುದೇಶಂ ಮತ್ತು ಡಿ.ಎಂ.ಕೆ. ಮುಂತಾದ ಪಕ್ಷಗಳು, ಕರ್ನಾಟಕದಲ್ಲಿ ಜನತಾ- ಈ ರಾಜಕೀಯ ವ್ಯವಸ್ಥೆಗೆ ಆಯಾ ಪ್ರದೇಶಗಳಲ್ಲಿರುವ ಎಡಪಕ್ಷಗಳು ಬೆಂಬಲ ಕೊಡುತ್ತಿವೆ. (ಇದರಲ್ಲಿ ಆಂಧ್ರದಲ್ಲಿ ತೆಲುಗು ದೇಶಂನ ವಿಷಯದಲ್ಲಿ ಸಿ.ಪಿ.ಐ.ಗೆ ಹೊಂದಾಣಿಕೆ ಇಲ್ಲದಿರುವುದು ದುರದೃಷ್ಟಕರ). (12ನೇ ಪುಟಕ್ಕೆ)

ಒಳಪುಟಗಳಲ್ಲಿ

ಸಮಾಜವಾದಿ ಪ್ರಜಾಸತ್ತೆಯ ಜೀವಂತ ಮಿಡಿತ
ಸೋಲ್ ಒಲಿಂಪಿಕ್ಸ್‌ನಲ್ಲಿ ಸಮಾಜವಾದಿ ಸುಗ್ಗಿ



ಇದು ಸೋಲ್ 1988ರ ಒಲಿಂಪಿಕ್ಸ್ ವಿಶ್ವ ರಾಜಧಾನಿ. 13000 ಸ್ಪರ್ಧಿಗಳ ಈ ಅಪ್ರತಿಮ ಕ್ರೀಡಾ ಜಗತ್ತಿನೆದುರು, 160 ದೇಶಗಳ ಎಲ್ಲಾ ಜನಸಮುದಾಯದೆದುರು 133 ಬಾರಿ ಸಮಾಜವಾದಿ ದೇಶಗಳ [illegible] ಗೀತೆ ಮೊಳಗಿತು. ಸಾಮ್ರಾಜ್ಯಶಾಹಿ ಆಳುವ ವರ್ಗಗಳು, [illegible] ಕಿವಿಗಳಿಗೆ ಕರ್ಕಶವಾದ ಈ ಸಂಗೀತ ವಿಶ್ವದ ಜನ [illegible]ದಲ್ಲಿ ಆನಂದದ ಅಲೆಗಳನ್ನೆಬ್ಬಿಸಿತು. ಎಲ್ಲ ಅಡೆತಡೆಗಳನ್ನೆಲ್ಲಾ [illegible] ಈ ಧ್ವನಿ ಮಾಧುರ್ಯ ಪಸರಿಸಿತು.

ಅಸತ್ಯದಿಂದ ಸತ್ಯದೆಡೆಗೆ
ಕತ್ತಲೆಯಿಂದ ಬೆಳಕಿನೆಡೆಗೆ
ಸಾಮ್ರಾಜ್ಯಶಾಹಿ ಪೀಡನೆಯಿಂದ
ಸಮಾಜವಾದಿ ಸ್ವಾತಂತ್ರ್ಯದ ಕಡೆಗೆ
ವಿಶ್ವದ ಕ್ರೀಡಾರಂಗ ಮತ್ತೊಂದು ಹೆಜ್ಜೆಯಿಟ್ಟಿತು

[illegible] ಸುಗ್ಗಿಗೆ ವಿಶ್ವದಾಖಲೆ [illegible] 'ಸೋವಿಯೆಟ್ ಪೈಲ್ವಾನರ ಅಟ್ಟ' 'Eastern Bloc-buster' ([illegible]ಜಗತ್ತಿನ ಸಾರ್ವಭೌಮತ್ವ) ಎಂಬ [illegible]ಗಳನ್ನು ಟಿ.ವಿ. ದೂರದರ್ಶನಗಳಲ್ಲಿ [illegible] ಜಗತ್ತಿನಾದ್ಯಂತ ಜನ ಬೆರಗು [illegible]ದ್ದಾರೆ. 12 ವರ್ಷಗಳ ನಂತರ ನಡೆ[illegible] ನಿಜವಾದ ಒಲಿಂಪಿಕ್ಸ್‌ನಲ್ಲಿ ಸಮಾಜವಾದಿ ದೇಶಗಳ ಮೇಲುಗೈ ಯಾವ ಸಂಶಯವೂ ಇಲ್ಲದಂತೆ ಮತ್ತೆ ಸ್ಥಾಪಿತವಾಗಿದೆ.

'ಕ್ರೀಡೆಗಳ ನಡುವೆ ರಾಜಕೀಯ ಬೇಡ.' ಸಮಾಜವಾದಿ ದೇಶಗಳ ಕ್ರೀಡಾಪಟುಗಳಿಗೆ ಕ್ರೀಡೆಗಳಲ್ಲಿ ಸ್ವರ್ಣಪದಕ ಪಡೆಯುವುದು ಒಂದು ರಾಜಕೀಯ ಕರ್ತವ್ಯ' ಎಂದು ಅಪವಾದ ಹೊರಿಸುವ ಸಾಮ್ರಾಜ್ಯವಾದಿ ದೇಶಗಳು [illegible] ಕ್ರಾಂತಿಯಾದ ತಕ್ಷಣವೇ [illegible] ಒಲಿಂಪಿಕ್ಸ್‌ನಿಂದ ಹೊರಹಾಕಿ [illegible]ವಾಗಿ ಕ್ರೀಡೆಯಲ್ಲಿ ರಾಜಕೀಯ[illegible] ರಾಜಕೀಯ ಆರಂಭಿಸಿದರು [illegible]ವುದನ್ನು ಮರೆಯುತ್ತಾರೆ. ಎಲ್ಲರಿಗೂ ಕ್ರೀಡೆಯ ಹಕ್ಕು ಎಂಬ ಅತ್ಯುನ್ನತ ಕ್ರೀಡೆ[illegible] ತತ್ವವನ್ನು ಪ್ರತಿಪಾದಿಸಿ[illegible] 15 ವರ್ಷಗಳ ಕಾಲ ಸೋವಿ[illegible] ಕ್ರೀಡೆಯಿಂದ ಹೊರಗಿ[illegible]. ಇವರ ವಿವರ [illegible] "ಐಕ್ಯರಂಗದಲ್ಲಿ" [illegible]

[illegible]ಂದಿನಿಂದ ಇಂದಿನವರೆಗೆ ಎಂದೂ ಒಂದಾಗಬೇಕಾದ ಪರಿಸ್ಥಿತಿ ಸಮಾಜವಾದೀ ದೇಶಗಳಿಗೆ ಬರಲಿಲ್ಲ. (ಪಟ್ಟಿ-1 ಸೋವಿಯೆತ್ ಸಾರ್ವಭೌಮತ್ವ ನೋಡಿ) 1952 ರ ಒಲಿಂಪಿಕ್ಸ್‌ನಲ್ಲಿ ಸೋವಿಯೆತ್ ದೇಶ ಮೊದಲ ಬಾರಿಗೆ ಮೇಲುಗೈ ಸ್ಥಾಪಿಸಿದಾಗ ಅದೊಂದು ಆಕ್ಸಿಡೆಂಟ್ ಎಂದು ಪ್ರಚಾರ ಮಾಡಿದರು. ಸಾಮ್ರಾಜ್ಯವಾದಿ ದೇಶಗಳು ಹಾಗೂ ಅವರ ಮುಖವಾಣಿಗಳು. ಆದರೆ 1952ರ ಒಲಿಂಪಿಕ್ಸ್‌ನಲ್ಲಿ ಅಮೇರಿಕದ ಸರಿಸಮವಾಗಿದ್ದ ಸೋವಿಯೆತ್ ಕ್ರೀಡೆ ಮುಂದಿನ 1956ರ ಒಲಿಂಪಿಕ್ಸ್‌ನಲ್ಲಿ ಅಮೇರಿಕವನ್ನು 125 ಪಾಯಿಂಟುಗಳಷ್ಟು ಹಿಂದೆ ಹಾಕಿ ತಾನೆ ಪ್ರಥಮ ಸ್ಥಾನ ಗಳಿಸಿದಾಗ ಈ ಅಪಶ್ರುತಿಗಳು ಪರಿಹಾಸ್ಯಕ್ಕೀಡಾದುವು.

ಮುಂದಿನ ಒಲಿಂಪಿಕ್ಸ್‌ಗಳಲ್ಲಿ ಈ ಮುನ್ನಡೆ 200-250 ಪಾಯಿಂಟ್‌ಗಳಷ್ಟು ಹೆಚ್ಚುತ್ತಲೇ ಹೋಯಿತು. 1968 ರಲ್ಲಿ ಛಮ್ಮೆ ಸೋವಿಯೆತ್ ದೇಶ ಎರಡನೇ ಸ್ಥಾನದಲ್ಲಿದ್ದರೆ ಅದೊಂದು ಹೆಮ್ಮೆಯ ಸ್ಥಾನವೇ ಸರಿ. ಏಕೆಂದರೆ ಪೂರ್ವಜರ್ಮನಿ ಮೊತ್ತ ಮೊದಲ ಬಾರಿಗೆ ಒಲಿಂಪಿಕ್ಸ್ ಪ್ರವೇಶಿಸಿದಾಗ ಜೊತೆಯ ಸಮಾಜವಾದಿ ದೇಶವೊಂದರ ಸ್ಪರ್ಧೆಯ ಫಲವಾದ ಹಮ್ಮೆಯ ಪರಾಭವ ಅದು.

ಕ್ರೀಡಾ ದಿಗಂತದಲ್ಲಿ ಹೊಸ ತಾರೆ

ಸೋಲ್‌ನಲ್ಲಿ 6 ಸ್ವರ್ಣಪದಕಗಳನ್ನು ಪಡೆದು ವಿಶ್ವದ ಈಜಿನ ರಾಣಿಯೆನಿಸಿದ ಕ್ರಿಸ್ಟೀನ್ ಒಟ್ಟೋ ವಿನಯದಿಂದ ಹೇಳುತ್ತಾಳೆ. 'ನಾನು ತಾರೆಯಲ್ಲ. ತಾರೆಯನ್ನಾಗಿ ಮಾಡುವ ಪ್ರಯತ್ನಿಸಬೇಡಿ. ಇದೀ ತಂಡಕ್ಕೆ ಸಂತೋಷವಾಗಿದೆ. ನಮ್ಮ ವೈಭವವೆಲ್ಲಾ ಸಾಮೂಹಿಕವಾದದ್ದು. ನಾವೆಲ್ಲರೂ ಅದನ್ನು ಹಂಚಿಕೊಳ್ಳುತ್ತೇವೆ.'

ಇದು ಸಮಾಜವಾದಿ ದೇಶಗಳ ಕ್ರೀಡಾ ಪರ್ಯಾಯ 'ತಾರಾಸಂಸ್ಕೃತಿ'ಯ ಉತ್ತೇಜಕ, ಸ್ವರ್ಣ ಗೆದ್ದೊಡನೆ ಅಟ್ಟಕ್ಕೆ ಹತ್ತಿಸುವ, ಅಹಂಕಾರ, ಸೊಕ್ಕು ಬೆಳೆಸುವ, ಅದರೊಡನೆ ಜಾಹಿರಾತಿಗಾಗಿ ಲಕ್ಷ ಡಾಲರುಗಳನ್ನು ಸುರಿಯುವ ಬಂಡವಾಳಶಾಹಿ ಕ್ರೀಡಾಸಂಸ್ಕೃತಿಗೆ [illegible] ಮಂಗಳಾರತಿ.

1968ರ ಮೆಕ್ಸಿಕೋ ಒಲಿಂಪಿಕ್ಸ್‌ನಲ್ಲಿ ಕ್ರೀಡಾಜಗತ್ತಿನಲ್ಲಿ ಒಂದು ಹೊಸ "ಸೂಪರ್ ಪವರ್"ನ ಉದಯ. ಒಂದೇ ಬಾರಿಗೆ ಅನೇಕ ಸಮಾಜವಾದಿ ಕ್ರೀಡಾ ತಾರೆಗಳ ಉದಯ. ಜಗತ್ತೇ ಬೆರಗುಗೊಂಡ ಘಟನೆ.

1948 ರಲ್ಲಿ ಉದಯವಾದ ಈ ಸಮಾಜವಾದಿ ದೇಶವನ್ನು ಎರಡು ದಶಕಗಳ ಕಾಲ ಕ್ರೀಡಾ ಜಗತ್ತಿನಿಂದ ಹೊರಗಿರಿಸಲು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಯಿತು. ಸಮಾಜವಾದಿ ಜರ್ಮನಿಯ ಸ್ವತಂತ್ರ ಅಸ್ತಿತ್ವವನ್ನು ನಿರಾಕರಿಸುವ ಈ ಪ್ರಯತ್ನದ ಹಿಂದಿನ ಕುತಂತ್ರಗಳು, ಅಪಪ್ರಚಾರಗಳು ಒಂದೇ ಬಾರಿ ಭೂಗತವಾದುವು.

ತಾನು ಸ್ವತಂತ್ರವಾಗಿ ಭಾಗವಹಿಸಿದ ಮೊದಲ ಒಲಿಂಪಿಕ್ಸ್‌ನಲ್ಲೇ ಕ್ರೀಡಾಜಗತ್ತಿನ ಎರಡನೆಯ ಶಕ್ತಿಯೆನಿಸಿತು. ಒಂದೂವರೆ ಕೋಟಿ ಜನರ ಈ ಪುಟ್ಟ ರಾಷ್ಟ್ರ. ತನ್ನದೇ ರಕ್ತದ ಮತ್ತೊಂದು ಭಾಗ ಸಾಮ್ರಾಜ್ಯಶಾಹಿ ಶಕ್ತಿ, ಬಲಭುಜ ಪ.ಜರ್ಮನಿ ಗಣನೆಗೇ ಬಾರದಾಯಿತು. ಅಂದಿನಿಂದ ಇಲ್ಲಿಯವರೆವಿಗೂ ಪೂರ್ವ ಜರ್ಮನಿಯ – ಪ. ಜರ್ಮನಿಗಳ ಸಾಧನೆಯ ಹೋಲಿಕೆ ಬಂಡವಾಳಶಾಹಿ ಮುಖಕ್ಕೆ ಹಿಡಿದ ಕನ್ನಡಿಯಾಗಿದೆ.

1976ರ ಕೆನಡಾದಲ್ಲಿ ನಡೆದ ಮಾಂಟ್ರಿಯಲ್ಲಿ ಒಲಿಂಪಿಕ್ಸ್‌ನಲ್ಲಿ ಸೋವಿಯೆತ್ ದೇಶ ನೂರು ಪದಕಗಳ ಗಡಿಯನ್ನು ಮೀರಿ, 125 ಪದಕಗಳನ್ನು ಗಳಿಸಿದಾಗ ಅದೊಂದು ಇತಿಹಾಸದ ಸೃಷ್ಟಿಯೇ ಆಗಿತ್ತು. ಅಂದು ಸೋವಿಯೆತ್ ದೇಶಕ್ಕೆ ಮಾತ್ರವೇ ಅಲ್ಲ ಇಡೀ ಸಮಾಜವಾದಿ ಬಣದ ಕ್ರೀಡಾ ಸಾಧನೆಗಳ ಪಾಶ್ಚಿಮಾತ್ಯ ಜಗತ್ತಿನ ಇತರ ದೇಶಗಳನ್ನು ಸಮ್ಮೋಹನಗೊಳಿಸಿದಾಗ ನಿತ್ಯವೂ "ಸಮಾಜವಾದಿ" ಗುಮ್ಮನ ಹೆದರಿಕೆಯನ್ನು ಹುಟ್ಟಿಸುತ್ತಿದ್ದ ಸಾಮ್ರಾಜ್ಯಶಾಹಿ ವರ್ಗಗಳಿಗೆ ಗಾಬರಿಯಾಗಿತ್ತು. ಮುಂದಿನೆರಡು ಒಲಿಂಪಿಕ್ಸ್‌ಗಳಲ್ಲಿ ಸಮಾಜವಾದಿ ದೇಶಗಳೊಡನೆ ಸ್ಪರ್ಧಿಸಲು ನಿರಾಕರಿಸುವುದು ಕೂಡ ಮಾಸ್ಕೋ ಒಲಿಂಪಿಕ್ಸ್ ಬಹಿಷ್ಕಾರಕ್ಕೆ ಕಾರಣವಾಯಿತು.

1976ರ ಒಲಿಂಪಿಕ್ಸ್‌ನಲ್ಲಿ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸೋವಿಯೆತ್ ರಷ್ಯಾ	47	43	35	125
ಜರ್ಮನ್ ಡೆಮಾಕ್ರಟಿಕ್ ರಿಪಬ್ಲಿಕ್	40	25	25	90
ಅಮೇರಿಕಾ	34	35	25	94
ಫೆಡರಲ್ ರಿಪಬ್ಲಿಕ್ ಜರ್ಮನಿ	10	12	17	39

ಈಗ 12 ವರ್ಷಗಳ ನಂತರ 1976ರ ಒಲಿಂಪಿಕ್ಸ್‌ಗಿಂತಲೂ 6 ಹೆಚ್ಚು ಚಿನ್ನದೊಡನೆ ಒಟ್ಟು 132 ಪದಕಗಳನ್ನು ಪಡೆದು ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಿದೆ. 160ಕ್ಕೂ ಹೆಚ್ಚು ದೇಶಗಳ 10,000ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದ ಸೋಲ್ ಒಲಿಂಪಿಕ್ಸ್‌ನಲ್ಲಿ ಶೇ. 55ರಷ್ಟು ಸ್ವರ್ಣ ಪದಕಗಳು, ಹಾಗೂ ಒಟ್ಟು ಪದಕಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪದಕಗಳನ್ನು ಸಮಾಜವಾದಿ ದೇಶಗಳು ಪಡೆದಿವೆ. ಮೂರನೆಯ ಜಗತ್ತಿನ ರಾಷ್ಟ್ರಗಳು ಕೂಡ ಮುನ್ನುಗ್ಗುತ್ತಾ ಸಾಮ್ರಾಜ್ಯಶಾಹಿಗಳ ಸ್ಪರ್ಧಿಗಳನ್ನು ಹಿಂದೆ ಹಾಕುತ್ತಿವೆ. ಅನೇಕ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳನ್ನು ದ.ಕೊರಿಯಾ ಹಾಗೂ ಕೆ[illegible] ದೇಶಗಳು ಹಿಂದೆ ಹಾಕಿವೆ. ದ.ಕೊರಿಯಾದ ಹಾಗೂ ಪಾಶ್ಚಿಮಾತ್ಯ ದೇಶಗಳ ನೀತಿಯಿಂದಾಗಿ ಉ. ಕೊರಿಯಾ, ಕ್ಯೂಬಾಗಳ ಭಾಗವಹಿಸತಾಂದ ದುದು ಒಂದು [illegible]ರತೆ. ಅವುಗಳೂ ಭಾಗವಹಿಸಿದ್ದರೆ ಸಮಾಜವಾದಿ ದೇಶಗಳ ಪಾಲು ಇನ್ನೂ ಹೆಚ್ಚಾಗುತ್ತಿತ್ತು. ಎಂಬುದರಲ್ಲಿ ಸಂಶಯವೇ ಇಲ್ಲ. ಅಮೇರಿಕ, ಕೆನಡಾಗಳಂತಹ ಸಾಮ್ರಾಜ್ಯಶಾಹಿ ದೇಶಗಳ ಕ್ರೀಡಾ ವಿಜಯಗಳಲ್ಲಿ ಹೆಚ್ಚಿನ ಪಾಲು ಅಲ್ಲಿನ ಕರಿಯ ಸ್ಪರ್ಧಿಗಳದು ಎಂಬುದು ಗಮನಾರ್ಹ.

"ಎಲ್ಲರಿಗೂ ಕ್ರೀಡಾವಕಾಶ"

ಸಮಾಜವಾದೀ ದೇಶಗಳ ಈ ಪ್ರಾಬಲ್ಯಕ್ಕೆ ಸಮಾಜವಾದಿ ದೇಶಗಳ ಸಮಾಜ ವ್ಯವಸ್ಥೆಯ ಮೇಲ್ಮೆಯೇ ಪ್ರಧಾನ. ಪ್ರಜಾಸತ್ತೆಗಳೆನಿಸಿಕೊಂಡ ದೇಶಗಳಿಗಿಂತಲೂ ಪಾಶ್ಚಿಮಾತ್ಯ ಹಾಗೂ ಮೂರನೆಯ ಜಗತ್ತಿನ ಪ್ರಜಾಸತ್ತೆಗಳೆನಿಸಿಕೊಂಡ[illegible] ಪ್ರಜಾಸತ್ತೆಯ ಸಮಾಜವಾದಿ ಪ್ರಜಾಸತ್ತೆಯ ವಿಜಯ ಅದು. ಶಿಕ್ಷಣದ ಹಕ್ಕು, ಆರೋಗ್ಯದ ಹಕ್ಕು, ವಸತಿಯ ಹಕ್ಕು, ಉದ್ಯೋಗದ ಹಕ್ಕಿನ ಜೊತೆಗೆ ಕ್ರೀಡೆಯೂ ಪ್ರತಿಯೊಬ್ಬ ಪ್ರಜೆಯ ಹಕ್ಕು ಎಂದು ಸಂವಿಧಾನಗಳಲ್ಲಿ [illegible] ಅದಕ್ಕೆ ಬದ್ಧರಾಗಿ ದುಡಿದ ಸರ್ಕಾರಗಳ ಪ್ರಜಾನಿಷ್ಠೆಗೆ, ಸಮಾಜ ನಿಷ್ಠೆಗೆ ಹೆಗ್ಗುರುತು ಇದು.

ಅಪಪ್ರಚಾರ

ಆದರೆ ಇದನ್ನು ಸಾಮ್ರಾಜ್ಯಶಾಹಿ ದೇಶಗಳು ಎಂದಿಗಾದರೂ ಒಪ್ಪಲು ಸಾಧ್ಯವೇ ? 'ಮುಕ್ತ ಮಾರುಕಟ್ಟೆಯ ಮುಕ್ತ ಸಮಾಜ'ವಾದ ತಮ್ಮ ಶೋಷಣಾತ್ಮಕ ವ್ಯವಸ್ಥೆಯನ್ನು ತಾವೇ ಹೀಗಳೆಯುವುದು ಸಾಧ್ಯವೇ ? ಅದಕ್ಕಾಗಿ ಈ ಸರ್ಕಾರಗಳು ತಮ್ಮ ದೇಶಗಳ ಸೋಲಿನ ಬಗ್ಗೆ ತಮ್ಮ ಜನಗಳಿಗೆ ವಿವರ [illegible] ಸೃಷ್ಟಿಸಿದ 'ದಂತಕಥೆಗಳು'. ಅನೇಕ. ಸಮಾಜವಾದಿ ದೇಶಗಳಲ್ಲಿ ಆಟಗಾರರ ಅತಿ ಶಿಸ್ತಿನ ಶೋಷಣೆ. ಅತಿ ಹೆಚ್ಚು ದುಡಿಮೆ ಇದಕ್ಕೆ ಕಾರಣ, ಅವರು ಉಪಯೋಗಿಸುವ ಕಾನೂನು ಬಾಹ್ಯ ಮದ್ದುಗಳ ಹಾಗೂ ಈ ಮದ್ದುಗಳನ್ನು ಕಂಡುಹಿಡಿಯಲಾಗದಂತೆ ಕಂಡು ಹಿಡಿದ ವಿಧಾನಗಳು ಕಾರಣ, ಅಮೇರಿಕದವರಿಂದ ಶಾಪ [illegible] ಮಿಲಿಟರಿಗೆ, ಬಂದ್ರನ ಬಳಿ ಹೋಗುವುದಕ್ಕೆ ಹೆಚ್ಚು ಗಮನ ನೀಡಿದರೆ ಫು.. ಜರ್ಮನಿ ಕ್ರೀಡೆಗಳಲ್ಲಿ ಮೇಲಾಟವಾಡಲು ತನ್ನ ಎಲ್ಲಾ ಸಂಪತ್ತನ್ನು ವ್ಯಯಿಸುತ್ತಿದೆ ಬೇರೆಲ್ಲಾ ರಂಗಗಳಲ್ಲಿ ಹಿಂದಿರುವ ಸಮಾಜವಾದಿ ದೇಶಗಳ ತಮ್ಮ ರಾಜಕೀಯ ಹೆಗ್ಗಳಿಕೆಯನ್ನು ಸ್ಥಾಪಿಸಲು ಕ್ರೀಡೆಗಳನ್ನು ಬಳಸಬೇಕಾಗಿದೆ ಇತ್ಯಾದಿ.

ಆದರೆ ಇಂತಹ ಎಲ್ಲಾ ಪ್ರಚಾರಗಳ ಪೊಳ್ಳುತನವೂ ಬಯಲಿಗೆ ಬಿದ್ದಿದೆ. ಜಗತ್ತಿನೆಲ್ಲಾ ಮಾಧ್ಯಮಗಳು ಸಮಾಜವಾದಿ ಕ್ರೀಡಾ ಜಗತ್ತಿನ ರಚನೆಯನ್ನು ಕೂಲಂಕಷವಾಗಿ ಪರಿಶೀಲಿಸಲು ಆರಂಭಿಸಿವೆ. ಈ ಮಾಧ್ಯಮಗಳೇ ನೀಡಿರುವ ಉತ್ತರವನ್ನು ನೋಡಿ.

[10ನೇ ಪುಟಕ್ಕೆ]

ಸೋಲ್ ಒಲಿಂಪಿಕ್ಸ್‌ನಲ್ಲಿ ವಿವಿಧ ಬಣಗಳು

	ಸ್ವರ್ಣ	ಒಟ್ಟು ಪದಕಗಳು
[illegible] ದೇಶಗಳು	133	380
ಸಾಮ್ರಾಜ್ಯಶಾಹಿ ದೇಶಗಳು	73	223
ಇತರ ಬಂಡವಾಳಶಾಹಿ ದೇಶಗಳು	14	62
ಮೂರನೇ ಜಗತ್ತಿನ ರಾಷ್ಟ್ರಗಳು	21	73
ಒಟ್ಟು	241	738

"ಕ್ರೀಡೆಯಲ್ಲಿ ಸಮಾಜವಾದಿ ಯುಗ"

1952 ರಲ್ಲಿ ಸೋವಿಯತ್ ದೇಶ ಪ್ರಪ್ರಥಮ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿ [illegible] ಬಾರಿಗೆ ಸ್ವರ್ಣಗಳ, ಇತರೆಲ್ಲಾ ಪದಕ[illegible] ಪಡೆದು 70-80 ವರ್ಷಗಳಿಂದ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದ. 'ಅರರೇ ! [illegible] ರಾಷ್ಟ್ರ' ಎಂದು ಮೆರೆಯುವ [illegible] ರಾಷ್ಟ್ರಗಳನ್ನೆಲ್ಲಾ ಹಿಂದೆ [illegible]ದಾಗ, ಈ ರಾಷ್ಟ್ರಗಳ ನಾಯಕ ಮಣಿ ಅಮೇರಿಕದ ಜೊತೆ ಜೊತೆಗೆ ಹೆಜ್ಜೆ ಹಾಕಿದಾಗ ಕ್ರೀಡಾ ಜಗತ್ತಿನಲ್ಲಿ ಹೊಸ ಯುಗವೊಂದು ಆರಂಭವಾಯಿತು. ಜಗತ್ತಿನ ಇತರ ಎಲ್ಲಾ ರಂಗಗಳಲ್ಲಿ ಆರಂಭವಾಗಿದ್ದ 'ಕತ್ತಲೆಯಿಂದ ಬೆಳಕಿನೆಡೆಗೆ, ಅಸತ್ಯದಿಂದ ಸತ್ಯದೆಡೆಗೆ, ಸಾಮ್ರಾಜ್ಯಶಾಹಿಯಿಂದ ಸಮಾಜವಾದದೆಡೆಗೆ' ಎಂಬ ಮಾತು ಕ್ರೀಡಾ ಜಗತ್ತಿನಲ್ಲಿಯೂ [illegible].

ಒಲಿಂಪಿಕ್ಸ್‌ನಲ್ಲಿ ಸೋವಿಯೆತ್ ಸಾರ್ವಭೌಮತೆ

ವರ್ಷ	ಸ್ಥಳ ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು	ಪಾಯಿಂಟುಗಳು	ಅಮೇರಿಕಕ್ಕೆ ಹೋಲಿಸಿದೆ
1952	ಹೆಲ್ಸಿಂಕಿ (ಫಿನ್ಲೆಂಡ್)	22	30	19	71	494 (ಅಮೇರಿಕಕ್ಕೆ ಸಮ)	
1956	ಮೆಲ್‌ಬೋರ್ನ್ (ಆಸ್ಟ್ರೇಲಿಯಾ)	37	29	32	98	622.5 (497.5)	
1960	ರೋಂ (ಇಟಲಿ)	43	29	31	103	682.5	ಅಮೇರಿಕಕ್ಕಿಂತ 200ಕ್ಕೂ ಹೆಚ್ಚು
1964	ಟೋಕಿಯೋ (ಜಪಾನ್)	30	31	35	96		
1968	ಮೆಕ್ಸಿಕೋನಗರ (ಮೆಕ್ಸಿಕೋ)	29	32	30	91	590.8 (2ನೇ ಸ್ಥಾನ)	
1972	ಮ್ಯೂನಿಚ್ (ಪ.ಜರ್ಮನಿ)	50	27	22	99	664.5	
1976	ಮಾಂಟ್ರಿಯಲ್ (ಕೆನಡಾ)	49	41	35	125	762.5	
1980	ಮಾಸ್ಕೋ (ಸೋವಿಯೆತ್ ರಷ್ಯಾ)	80	69	46	195		(ಪಾಶ್ಚಿಮಾತ್ಯ ದೇಶಗಳ ಬಹಿಷ್ಕಾರ)
1984	ಲಾಸ್ ಏಂಜಲಿಸ್ (ಅಮೇರಿ ಸಂಯುಕ್ತ ಸಂಸ್ಥಾನಗಳು)						ಸಮಾಜವಾದಿ ದೇಶಗಳ ಆಟಗಾರರಿಗೆ ರಕ್ಷಣೆಯಿಲ್ಲದುದರಿಂದ ಬಹಿಷ್ಕಾರ
1988	ಸೋಲ್ (ದ. ಕೊರಿಯಾ)	55	31	46	132		

ಪಕ್ಷದ ಕಾರ್ಯಕ್ರಮ ಅಂಗೀಕರಿಸಿ ಈಗ 22 ವರ್ಷಗಳಾಗಿವೆ. ನಮ್ಮನ್ನು ಕಾರ್ಮಿಕ ವರ್ಗದ ಸಾಮೂಹಿಕ ಕ್ರಾಂತಿಕಾರೀ ಪಕ್ಷವಾಗಿ ಬೆಳೆಸಿಕೊಳ್ಳಬೇಕಾದುದರ ಮಹತ್ವವನ್ನು ಸಾಲ್ಕಿಯಾ ಪ್ಲೀನಂ ಒತ್ತಿ ಹೇಳಿ ಹಲವು ವರ್ಷಗಳಾಗಿವೆ. ಮತ್ತು 11 ನೇ ಮಹಾಧಿವೇಶನ ಎಡ ಮತ್ತು ಪ್ರಜಾಪ್ರಭುತ್ವವಾದೀ ರಂಗ ಕಟ್ಟುವ ಕರ್ತವ್ಯವನ್ನು ರೂಪಿಸಿ ನಾಲ್ಕು ವರ್ಷಗಳಾಗಿವೆ. ಆಳುವ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರ ದೇಶವನ್ನು ಒಯ್ಯುತ್ತಿರುವ ಬಂಡವಾಳಶಾಹೀ ಪಥದ ಬಿಕ್ಕಟ್ಟು ದೇಶದ ಆರ್ಥಿಕತೆಯನ್ನು ಊನಗೊಳಿಸಿದೆ; ಅದರ ರಾಜಕೀಯ ಸಂಸ್ಥೆಗಳು. ದೇಶದಲ್ಲಿ ಎದ್ದು ಬರುತ್ತಿರುವ ಸಮಸ್ಯೆಗಳನ್ನು ಎದುರಿಸುವಲ್ಲಿ ತಮ್ಮ ಅಸಮರ್ಥತೆಯನ್ನು ತೋರ್ಪಡಿಸುತ್ತಿವೆ: ಆಳುವ ಪಕ್ಷ ತನ್ನ ಆಂತರಿಕ ಕಚ್ಚಾಟ, ಗುಂಪುಗಾರಿಕೆ ಮುಂತಾದವುಗಳಿಂದ ಕುಂಬಿ ಹೋಗಿದೆ. ಡಿಸೆಂಬರ್ 1984ರಲ್ಲಿ ರಾಜೀವಗಾಂಧಿಯ ಚುನಾವಣಾ ವಿಜಯದ ಅತಿರಂಜಿತ ಉತ್ಸಾಹದ ಅಲೆ ತಣ್ಣಗಾಗಿ ಅವರ ಪಕ್ಷದೊಳಗೇ ನಿರಾಶಾಭಂಗ ಮೂಡುತ್ತಿದೆ. ಆ ಪಕ್ಷ ಹಿಂದೆ ಯಾವಾಗಲೂ ಇದ್ದಂತೆ ಈಗಲೂ ಒಂದು ಬಿರುಕುಬಿಟ್ಟ ಮನೆಯಾಗಿದೆ.

ಆಳುವ ಪಕ್ಷದೊಳಗಿನ ಭ್ರಮನಿರಸಗೊಂಡ ಜನಗಳನ್ನು ದುಡಿಯುವ ಜನಗಳ ಜೀವನ ರಕ್ಷಣೆಯ, ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆಯ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟದತ್ತ ಸೆಳೆಯುವುದು ಸಾಧ್ಯ.

ಕಳೆದ ನಾಲ್ಕು ವರ್ಷಗಳ ಒಂದು ಉತ್ಸಾಹದಾಯಕ ಬೆಳವಣಿಗೆಯೆಂದರೆ ಎಡ ಪಕ್ಷಗಳು ಹೆಚ್ಚೆಚ್ಚಾಗಿ ನಿಕಟ ಬರುತ್ತಿವೆ, ಎಡ ಮತ್ತು ಇತರ ಜಾತ್ಯತೀತ ಶಕ್ತಿಗಳ ನಡುವಿನ ಸಹಕಾರವೂ ಹೆಚ್ಚುತ್ತಿದೆ. ಆದರೆ ಇನ್ನೊಂದೆಡೆ ಎಡ ಪಕ್ಷಗಳನಡುವೆಯೆ ಮತ್ತು ಎಡಪಕ್ಷಗಳು ಹಾಗೂ ಇತರ ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಸೈದ್ಧಾಂತಿಕ, ರಾಜಕೀಯ ಮತ್ತು ಪ್ರಾಯೋಗಿಕವಾದ ಗಂಭೀರ ಭಿನ್ನಾಭಿಪ್ರಾಯಗಳಿವೆ. ಇವುಗಳಲ್ಲಿ ಸಿ.ಪಿ.ಐ.(ಎಂ) ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪ್ರಶ್ನೆಗಳನ್ನು ಕುರಿತಂತೆ ನಿಶ್ಚಿತ ನಿಲುವುಗಳನ್ನು ಪಡೆದ ಅತ್ಯಂತ ಸ್ಪಷ್ಟ ದೃಷ್ಟಿಕೋನವುಳ್ಳ ಪಕ್ಷ. ಅದರ ಸಂಘಟಿತಶಕ್ತಿ ಕೆಲವೆ ಪ್ರದೇಶಗಳಿಗೆ ಸೀಮಿತವಾಗಿದ್ದರೂ ಅದು ದೇಶದ ಅತ್ಯಂತ ಚಲನಶೀಲ ಎಡಶಕ್ತಿಯಾಗಿ

ಅನ್ವಯಿಸಬಹುದಾದ ಒಂದು ಸರಿಯಾದ ಸೈದ್ಧಾಂತಿಕ-ರಾಜಕೀಯ ದೃಷ್ಟಿಕೋನ ಹೊಂದಿದ್ದರೂ ಕೂಡಾ ಅದರ ಜಾರಿಯಲ್ಲಿ ಹಲವಾರು ಕಾರಣಗಳಿಂದ ಅಡ್ಡಿಯುಂಟಾಗುತ್ತಿದೆ. ಇವುಗಳಿಗೆ ಒಂದು ಮುಖ್ಯ ಕಾರಣ ಪಕ್ಷದ ನೀತಿಯನ್ನು ಸರಿಯಾಗಿ ಅರ್ಥಮಾಡಿಕೊಂಡು, ವಾಸ್ತವ ಸಂದರ್ಭಕ್ಕೆ ತಕ್ಕಂತೆ ಅನ್ವಯಿಸಲಾಗುತ್ತಿಲ್ಲ. ಒಂದು ಪೂರ್ಣ ಪ್ರಮಾಣದ ಆಂತರಿಕ ಚರ್ಚೆಗಳ ಮೂಲಕ ಪಕ್ಷ ಅಂತಿಮ ತೀರ್ಮಾನಕ್ಕೆ ಬಂದ ಹಲವಾರು ವಿಷಯಗಳಲ್ಲೂ ಸಾಕಷ್ಟು ಗೊಂದಲ ಕಾಣಬರುತ್ತಿವೆ. ಯಾಕೆಂದರೆ ಪಕ್ಷದ ಮಹಾಧಿವೇಶನದ ಮತ್ತು ಕೇಂದ್ರ ಸಮಿತಿಯ ಅಧಿಕೃತ ದಸ್ತಾವೇಜುಗಳನ್ನು ಸೈದ್ಧಾಂತಿಕ ಕೆಲಸಗಳಲ್ಲಿ ಬಳಸಲಾಗುತ್ತಿಲ್ಲ. ಸಾಲ್ಕಿಯಾ ಪ್ಲೀನಂ ಮತ್ತು ನಂತರದ ದಸ್ತಾವೇಜುಗಳಲ್ಲಿ ಇತರ ಮಹತ್ವವನ್ನು ಒತ್ತಿ ಹೇಳಲಾಗಿತ್ತು. ಶಾಲೆಗಳನ್ನು ನಡೆಸುವುದು. ಮೇಲಿನಿಂದ ಕೆಳಗೆ. ಕೆಳಗಿನಿಂದ ಮೇಲಕ್ಕೆ ವ್ಯವಸ್ಥಿತ ವರದಿ ಸಲ್ಲಿಸಿಕೆ. ಪತ್ರಿಕೆಗಳು. ಕರಪತ್ರಗಳ ಪ್ರಕಟಣೆ ಮುಂತಾದವುಗಳ ಮೂಲಕ ಕೇಂದ್ರ ಸಮಿತಿ ಮತ್ತು ರಾಜ್ಯ ಸಮಿತಿಗಳು ಮಾಡುವ ಕೆಲಸ ಸನ್ನಿವೇಶದ ಅಗತ್ಯ ಪೂರೈಸಲು ಸಾಲದಾಗಿದೆ.

ಉಳಿದ ಹಲವಾರು ರಾಜ್ಯಗಳಲ್ಲಿ ಇಂತಹ ತೊಂದರೆಗಳಿರಲಿಲ್ಲ. ವರ್ಷಾನುಗಟ್ಟಲೆ ಪಕ್ಷದ ಬೆಳವಣಿಗೆ ಸ್ಥಗಿತಗೊಂಡಿರುವ ರಾಜ್ಯಗಳಲ್ಲಿ ಪಾಲಿಟ್‌ಬ್ಯೂರೋ ರಾಜ್ಯ ಸಮಿತಿಗಳ ಜತೆ ಕೂರಬೇಕು. ಒಂದು ವರ್ಷ ಅಥವಾ ನಿಶ್ಚಿತ ಅವಧಿಯಲ್ಲಿ ಪೂರೈಸಬೇಕಾದ ಸ್ಪಷ್ಟಗುರಿಯನ್ನು ಇಡ್ಡು. ಅದರ ಜಾರಿಯ ಮೇಲೆ ಕಣ್ಣಿಡಬೇಕು. ಕೆಲವು ಸಂಘಟನಾತ್ಮಕ ಪುನರ್ರಚನೆ ಆಗಬೇಕಾದ ಅಗತ್ಯವಿದ್ದರೆ ಅದಕ್ಕೆ ಹಿಂಜರಿಯಬಾರದು.

ಪಕ್ಷದ ಮಹಾಧಿವೇಶನ. ಅವರ ಮೊದಲು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಸಮ್ಮೇಳನಗಳು ಆಗುವಾಗ ಮಾತ್ರವೇ ರಾಜಕೀಯ ಮತ್ತು ಸಂಘಟನಾತ್ಮಕ ವಿಮರ್ಶೆ ಮಾಡುವ ಈಗಿನ ಪದ್ಧತಿಯನ್ನು ನಿಲ್ಲಿಸಲೇಬೇಕು. ಯಾಕೆಂದರೆ ಆಗ ಮೂರು–ನಾಲ್ಕು ವರ್ಷ-ಕೆಲವೊಮ್ಮೆ ಇನ್ನೂ ದೀರ್ಘ ಅವಧಿಯವರೆಗೆ [9ನೇ ಮತ್ತು ಹತ್ತನೇ ಮಹಾಧಿವೇಶನಗಳ ನಡುವೆ ಆರು ವರ್ಷಗಳ ಅಂತರವಿತ್ತು] ಯಾವ ವಿಮರ್ಶೆಯೂ ನಡೆಯುವುದಿಲ್ಲ [illegible]. ರಾಜ್ಯ ಸಮಿತಿಗಳು ಮತ್ತು ಕೇಂದ್ರ ಸಮಿತಿ ಸಾಮಾನ್ಯವಾಗಿ ಆಗಾಗ ಪ್ರಸ್ತುತಪರಿಸ್ಥಿತಿಗಳ ವಿಮರ್ಶೆ ನಡೆಸಿದರೂ

ಪಕ್ಷದ ಮುಖಪತ್ರಿಕೆಗಳದ್ದು ಮಹತ್ವದ ಪಾತ್ರ. ದುರದೃಷ್ಟವಶಾತ್, ಇದು ನಮ್ಮ ಅತೀ ದುರ್ಬಲ ಅಂಶಗಳಲ್ಲೊಂದು. ಈಗ ಹೊರಬರುತ್ತಿರುವ ನಮ್ಮ ಪತ್ರಿಕೆಗಳು ಸಾಮಾನ್ಯವಾಗಿ ಕೆಲವೇ ರಾಜಕೀಯ ಪಂಡಿತರನ್ನು ಉದ್ದೇಶಿಸಿದಂತಿರುತ್ತವೆ. ಜನಸಾಮಾನ್ಯರನ್ನಲ್ಲ. ಅದ್ದರಿಂದಲೇ ಪಕ್ಷ ದೈನಿಕರನ್ನು ನಡೆಸುವ ರಾಜ್ಯಗಳಲ್ಲಿ ಕೂಡಾ ಅವುಗಳ ಪ್ರಸಾರ ಬೂರ್ಜ್ವಾ ಪತ್ರಿಕೆಗಳಿಗಿಂತ ಬಹಳಷ್ಟು ಹಿಂದೆ ಇದೆ. ಪಕ್ಷ ಲಕ್ಷಗಟ್ಟಲೆಯಲ್ಲಿ ಮಿಲಿಯ ಗಟ್ಟಲೆ ಮತಗಳಿಸುವ, ಸಾಮೂಹಿಕ ಸಂಘಟನೆಗಳ ಜತೆಗೂಡಿ ಜನಗಳ ಜ್ವಲಂತ ಪ್ರಶ್ನೆಗಳ ಮೇಲೆ ಮಿಲಿಯ ಗಟ್ಟಲೆ ಜನಗಳನ್ನು ಬೀದಿಗಿಳಿಸಲು ಶಕ್ಯವಿರುವ ರಾಜ್ಯಗಳಲ್ಲಿ ಕೂಡಾ ನಮ್ಮ ದೈನಿಕಗಳ ಪ್ರಸಾರವನ್ನು ಸಾವಿರಗಳಲ್ಲಿ ಎಣಿಸಬಹುದಷ್ಟೆ. ಇನ್ನೊಂದೆಡೆ ರಾಜಕೀಯ ಬೆಂಬಲದ ನೆಲೆ ನಮಗಿಂತ ಎಷ್ಟೋ ಚಿಕ್ಕದಿರುವ ಬೂರ್ಜ್ವಾ ಪತ್ರಿಕೆಗಳ ಪ್ರಸಾರ ನಮಗಿಂತ ಹಲವು ಪಟ್ಟು ಹೆಚ್ಚಿದೆ. ಇದು ನಮ್ಮ ಅತೀ ಶಕ್ತಿಶಾಲಿ ಪ್ರದೇಶಗಳಲ್ಲೂ ಕಂಡುಬರುತ್ತಿರುವ ಮೂಲಭೂತ ದೌರ್ಬಲ್ಯ. ನಾವು ದುರ್ಬಲರಾಗಿರುವ ರಾಜ್ಯಗಳಲ್ಲಿ ಇದು ಇನ್ನೂ ಹೆಚ್ಚು. ಅಲ್ಲಿ ವಾರಪತ್ರಿಕೆಗಳು ಮತ್ತು ಇತರ

1985 ಡಿಸೆಂಬರ್ 25 ರಿಂದ ಕಲ್ಕತ್ತೆಯಲ್ಲಿ ನಾಲ್ಕು ದಿನಗಳ ಕಾಲ ರಾಜಕೀಯ ವರದಿಯನ್ನು ಚರ್ಚಿಸಿ, ರಾಜ್ಯಗಳ, ಸಾಮೂಹಿಕ ಸಂಘಟನೆಗಳ ವರದಿಗಳನ್ನು ಚರ್ಚಿಸಿ ಮುಂದೆ ನಿರ್ವಹಿಸಬೇಕಾದ ತುರ್ತು ಕರ್ತವ್ಯಗಳ ಬಗ್ಗೆ ತೀರ್ಮಾನಿಸಲಾಯಿತು. ಈ ತೀರ್ಮಾನಗಳನ್ನು ಇಲ್ಲಿ ನೆನಪಿಸಲಾಗಿದೆ. ಇದು ಹನ್ನೊಂದನೆಯ ಮಹಾಧಿವೇಶನದ ರಾಜಕೀಯ ಸಂಘಟನಾ ವರದಿಯ ಕೊನೆಯ ಅಧ್ಯಾಯ.

ಕಲ್ಕತ್ತಾ ಮಹಾಧಿವೇಶನ ತೀರ್ಮಾನಿಸಿದ ತುರ್ತು ಕರ್ತವ್ಯಗಳು

ಬೂರ್ಜ್ವಾ ವಿರೋಧ ಪಕ್ಷಗಳು ಕೂಡಾ ಆಳುವ ಪಕ್ಷ ತನ್ನ ಜನ-ವಿರೋಧಿ, ದೇಶ-ವಿರೋಧಿ ಧೋರಣೆಗಳಾದ ದೇಶವನ್ನು ಸದಾ ಆಳವಾಗುತ್ತಿರುವ ಬಿಕ್ಕಟ್ಟಿನೆಡೆಗೆ ತಳ್ಳುತ್ತಿರುವುದನ್ನು ತಡೆದು ಅದನ್ನು ರಕ್ಷಿಸುವಲ್ಲಿ ತಾವು ಅಸಮರ್ಥರು ಎಂದು ತೋರಿಸಿಕೊಟ್ಟಿವೆ. ವಾಸ್ತವವಾಗಿ ಆಳುವ ಪಕ್ಷದ ಕಾರ್ಯಕ್ರಮಕ್ಕೆ ಪರ್ಯಾಯವಾದ ಒಂದು ಸಾಮಾಜಿಕ-ಆರ್ಥಿಕ ಕಾರ್ಯಕ್ರಮ ಇಲ್ಲಿದೆ ಎಂದು ಪ್ರಚಾರಪಡಿಸಬಹುದಾದದ್ದೇನನ್ನೂ ಯಾವುದೇ ಬೂರ್ಜ್ವಾ ವಿರೋಧ ಪಕ್ಷ ಹೊಂದಿಲ್ಲ. ಅವುಗಳಲ್ಲಿ ಕೆಲವು ಜಾತಿವಾದ, ಕೋಮುವಾದ ಪ್ರಾದೇಶಿಕ ಪ್ರತ್ಯೇಕತೆ ಮುಂತಾದ ದೇಶ-ವಿರೋಧಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳನ್ನು ಬೆಂಬಲಿಸುವ ನಿಲುವನ್ನು ಕಾರ್ಯತಃ ತಳೆಯುತ್ತಿವೆ. ಇತರರೊಡನೆ ಹೋಲಿಸಿದಾಗ ಜಾತ್ಯತೀತ [illegible]ದಾದ ಬಹಳಷ್ಟು ಪಕ್ಷಗಳಿಗೆ ಕೂಡಾ ಆಳುವ ಪಕ್ಷದ ಮೂಲಭೂತ ಸಾಮಾಜಿಕ ಆರ್ಥಿಕ ಧೋರಣೆಗಳಿಗೆ ಸವಾಲೆಸೆಯಲು ಸಾಧ್ಯವಾಗಿಲ್ಲ. ದೇಶದ ಯೋಜನಾಬದ್ಧ ಅಭಿವೃದ್ಧಿಯ ಬಗ್ಗೆ ಅವರ ದೃಷ್ಟಿಕೋನ ಕೂಡಾ ಸುಮಾರಾಗಿ ಆಳುವ ಪಕ್ಷದ ದೃಷ್ಟಿಕೋನದಂತೆಯೇ ಇದೆ.

ಈ ಹಿನ್ನೆಲೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ಪಕ್ಷ ಕೊಟ್ಟ ಕರೆ ನಿರ್ಣಾಯಕ ಮಹತ್ವದ್ದು. ಎಡ ಪಕ್ಷಗಳು ದುಡಿಯುವ ಜನಗಳ ದೈನಂದಿನ ಹೋರಾಟಗಳಿಗೆ ಧುಮುಕುವುದರಿಂದ ಮಾತ್ರವೇ, ಈ ಹೋರಾಟಗಳನ್ನು ಇತರೆಲ್ಲರ ಸಹಕಾರದಿಂದ ಬಲಗೊಳಿಸುವುದರ, ಆಳುವ ಕಾಂಗ್ರೆಸ್ ಪಕ್ಷ ಹಾಗೂ ಬೂರ್ಜ್ವಾ ವಿರೋಧ ಪಕ್ಷಗಳ ನಿಲುವಿಗೆ ಒಂದು ತೀವ್ರಗಾಮೀ ಪರ್ಯಾಯ ಕಾರ್ಯಕ್ರಮದ ಸುತ್ತ ಈ ಹೋರಾಟಗಳಲ್ಲಿ ನಿರತವಾದ ಹೋರಾಟಶೀಲ ಜನಸಮೂಹಗಳನ್ನು ಒಗ್ಗಟ್ಟಾಗಿಸುವುದರ ಮೂಲಕ ಮಾತ್ರವೇ ಬೂರ್ಜ್ವಾ ವಿರೋಧ ಪಕ್ಷಗಳು ಮತ್ತು

ಮೂಡಿಬಂದಿರುವುದು ವಾಸ್ತವ ಸಂಗತಿ. ರಾಜಕೀಯ ಪ್ರಶ್ನೆಗಳನ್ನು ಮುಂದಾಗಿ ಕೈಗೆತ್ತಿಕೊಂಡ ರೀತಿಯನ್ನು ಇತರ ಹಲವು ಪಕ್ಷಗಳು ಸಂಘಟನೆಗಳು. ಗುಂಪುಗಳು ಸ್ವಾಗತಿಸಿವೆ. ಸದಸ್ಯತ್ವ ಸಂಖ್ಯೆಯ ದೃಷ್ಟಿಯಿಂದ ಪಕ್ಷ ವಿಸ್ತರಣೆ. ಸದಸ್ಯತ್ವದ ವರ್ಗ ಮತ್ತು ವಯೋರಚನೆಯಲ್ಲಿ ಸುಧಾರಣೆ, ಅದರ ಸೈದ್ಧಾಂತಿಕ ಮತ್ತು ರಾಜಕೀಯ ತಿಳುವಳಿಕೆಯ ಮಟ್ಟ. ಜನರೆಡೆಗೆ ಹೋಗಿ ಅವರ ಆಂದೋಲನಗಳಿಗೆ. ಹೋರಾಟಗಳಿಗೆ ನೇತೃತ್ವ ನೀಡುವ ಅದರ ಸಾಮರ್ಥ್ಯ. ಎಲ್ಲಕ್ಕೂ ಮಿಗಿಲಾಗಿ ಅದು ಪಡೆದಿರುವ ಒಂದು ಶಿಸ್ತುಬದ್ಧ ಕ್ರಾಂತಿಕಾರೀ ಪಕ್ಷದ ಸ್ವರೂಪ ಇವೆಲ್ಲಾ ದೇಶದ ರಾಜಕೀಯವನ್ನು ಪರಿವರ್ತಿಸುವ ಪ್ರಮುಖ ಅಂಶಗಳಾಗಿವೆ.

ನಮ್ಮ ಮುಂದಿರುವ ಪ್ರಶ್ನೆ-ನಾವು ಇಂತಹ ಒಂದು ಪಕ್ಷವನ್ನು ಪಡೆದಿದ್ದೇವೆಯೇ ? ಎರಡು ದಶಕಗಳಲ್ಲಿ ನಾವು ಕಟ್ಟಿದ ಪಕ್ಷ ತನ್ನ ಮೇಲೆ ಬಂದಿರುವ ಮೇಲೆ ಹೇಳಿದ ಜವಾಬ್ದಾರಿಗಳನ್ನು ನಿರ್ವಹಿಸುವ ಸಾಮರ್ಥ್ಯ ಪಡೆದಿದೆಯೇ ? ರಾಜ್ಯ ಸಮ್ಮೇಳನಗಳಲ್ಲಿ ಹಾಗೂ ಕಳೆದ ನಾಲ್ಕು ದಿನಗಳ ಕಾಲ ಈ ಮಹಾಧಿವೇಶನದಲ್ಲಿ ಮಂಡಿಸಿದ ವರದಿಗಳು ಮತ್ತು ಚರ್ಚೆಗಳು ಪಕ್ಷದ ರಾಜಕೀಯ ಸಂಘಟನಾತ್ಮಕ ಐಕ್ಯತೆ ಬೆಳೆಯುತ್ತಿದೆ ಎಂದು ತೋರಿಸಿಕೊಟ್ಟಿದೆ ಪಕ್ಷದ ಮುಖಂಡತ್ವದಲ್ಲಿರುವ ಘಟಕಗಳು ಮೇಲಿನಲ್ಲಿ ಪಾಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿ. ಕೆಳಗಡೆ ರಾಜ್ಯ ಕಾರ್ಯದರ್ಶಿ ಮಂಡಳಿಗಳು ಮತ್ತು ರಾಜ್ಯ ಸಮಿತಿಗಳು ಸಮಸ್ಯೆ[illegible] ಪರಿಹಾರ ಕಂಡು ಹಿಡಿಯಲು [illegible]ಮುಂಕೈಗೊಂಡರೆ ಮಾತ್ರವೇ ಪಕ್ಷ ತನ್ನ ಸಾಧನೆಗಳನ್ನು ಕ್ರೋಢೀಕರಿಸಲು ಮತ್ತು ಕಂಡು ಬಂದ ದೌರ್ಬಲ್ಯಗಳನ್ನು ನಿವಾರಿಸುವುದು ಸಾಧ್ಯ.

ಈಗ ಕಂಡುಬಂದಿರುವ ಪ್ರಮುಖ ಸಮಸ್ಯೆಯೆಂದರೆ ನಾವು ಇಡೀ ದೇಶಕ್ಕೆ

ಸ್ಥಗಿತತೆ ನಿವಾರಣೆ ಮತ್ತು ಪಕ್ಷದ ಪತ್ರಿಕೆಗಳು

ಅದ್ದರಿಂದ ಈ ದಿಸೆಯಲ್ಲಿ ತಮ್ಮ ಕೆಲಸವನ್ನು ಸುಧಾರಿಸಿಕೊಳ್ಳುವ ಯೋಜನೆಯನ್ನು ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ. ರಾಜ್ಯ ಸೆಕ್ರೆಟರಿಯೆಟ್ ಮತ್ತು ರಾಜ್ಯ ಸಮಿತಿಗಳು ಹಾಕಿಕೊಳ್ಳಬೇಕು. ಇದನ್ನು ಸರಿಯಾಗಿ ಮಾಡಿದರೆ ತಮ್ಮ ಸಂಘಟನೆಗಳ. ಮುಖಂಡರ ಧೋರಣೆಗಳಿಂದ. ಕೆಲಸಗಳಿಂದ ಭ್ರಮನಿರಸನಗೊಂಡಿರುವ ಆಳುವ ಮತ್ತು ಬೂರ್ಜ್ವಾ ವಿರೋಧ ಪಕ್ಷಗಳ ಕಾರ್ಯಕರ್ತರನ್ನು ಬಹಳಷ್ಟು ಸಂಖ್ಯೆಯಲ್ಲಿ ನಮ್ಮತ್ತ ಆಕರ್ಷಿಸುವ ಅಪಾರ ಅವಕಾಶವಿದೆ. ಹಾಗೆ ಮಾಡದೆ ಈ ಕರ್ತವ್ಯವನ್ನು ನಿರ್ಲಕ್ಷಿಸಿದರೆ ನಮ್ಮದೇ ಕಾರ್ಯಕರ್ತರು ಬೂರ್ಜ್ವಾ-ಭೂಮಾಲಕ ವರ್ಗಗಳಿಂದ ಬರುವ ಅನ್ಯವರ್ಗದ ವಿಚಾರಗಳಿಂದ ಬಾಧಿತರಾಗುವ ಭಯವಿದೆ.

ಈ ಮಹಾಧಿವೇಶನದ ಮೊದಲು ನಡೆದ ರಾಜ್ಯಸಮ್ಮೇಳನಗಳ ವರದಿಗಳನ್ನು ದಸ್ತಾವೇಜುಗಳನ್ನು ನೋಡಿದರೆ ದೇಶದ ಕೆಲವು ಭಾಗಗಳಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಬೆಳೆಯುತ್ತಿರುವುದು ಕಾಣುತ್ತದೆ. ಆದರೆ ಸ್ಥಗಿತತೆ ತೋರುತ್ತಿರುವ ಹಲವು ರಾಜ್ಯಗಳು ಇವೆ-ಜನರ ಮಧ್ಯೆ ಸಿ.ಪಿ.ಐ.(ಎಂ)ನ ಬೆಳೆಯುತ್ತಿರುವ ಪ್ರಭಾವಕ್ಕೂ, ಈ ಅನುಕೂಲ ಪರಿಸ್ಥಿತಿಯನ್ನು ಬಳಸಿಕೊಳ್ಳುವ ಪಕ್ಷದ ಪ್ರಯತ್ನಗಳಿಗೂ ಸಂಬಂಧವಿಲ್ಲದಂತಾಗಿದೆ.

ಸ್ಥಗಿತತೆ ಕಂಡು ಬರುತ್ತಿರುವುದು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಕಟ್ಟುವಲ್ಲಿ ಮಾತ್ರವೇ ಅಲ್ಲ. ಪಕ್ಷದ ವಾರಪತ್ರಿಕೆಗಳ, ದಿನಪತ್ರಿಕೆಗಳ, ಪ್ರಚಾರ ಸಾಹಿತ್ಯದ ಮಾರಾಟದಲ್ಲಿಯೂ ಕಣ್ಣಿಗೆ ಹೊಡೆಯುವಂತೆ ಅದು ಕಾಣುತ್ತಿದೆ. ಅಸ್ಸಾಂ ಮತ್ತು ಪಂಜಾಬ್ ನಂತಹ ರಾಜ್ಯಗಳಲ್ಲಿ ಕಳೆದ ನಾಲ್ಕು ವರ್ಷ ಕೆಲವು ವಿಶೇಷ ತೊಂದರೆಗಳಿದ್ದವು. ಆದರೆ

ಮುಂದಿನ ಕೆಲಸದ [illegible] ಯೋಜನೆಯಾಗಲಿ ಈ ಯೋಜನೆಯ ಜಾರಿಯ ವಿಮರ್ಶೆಯಾಗಲಿ ಇರುವುದೇ ಇಲ್ಲ. ಅದ್ದರಿಂದ ವರ್ಷಕ್ಕೊಮ್ಮೆಯಾದರೂ ಕೇಂದ್ರ ಸಮಿತಿ ನಿರ್ದಿಷ್ಟ ರಾಜ್ಯದ ರಾಜಕೀಯ ಬೆಳವಣಿಗೆಗಳನ್ನು ತಿಳಿದುಕೊಂಡು, ರಾಜ್ಯ ಸಮಿತಿಗೆ ಆ ಬಗ್ಗೆ ಮಾರ್ಗದರ್ಶನ ನೀಡಬೇಕು. ಹೊಸ ಸದಸ್ಯರ ಭರ್ತಿ, ಸದಸ್ಯರ ಕೆಲಸ ಅವರ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಶಿಕ್ಷಣ. ಸಾಮೂಹಿಕ ಸಂಘಟನೆಗಳಲ್ಲಿ ಅವರ ಸಂಘಟಿತ ಪಾತ್ರ. ಸತತವಾಗಿ ನಡೆಯುತ್ತಿರುವ ವಿಚಾರಗಳ ತಾಕಲಾಟದಲ್ಲಿ ಅವರ ಪಾತ್ರ ಮುಂತಾದವುಗಳ ತಪಾಸಣೆಯಂತಹ ಸಂಘಟನಾ ಪ್ರಶ್ನೆಗಳನ್ನು ಎದುರಿಸುವಲ್ಲಿ ನೆರವಾಗಬೇಕು ಎಂದು ಸೂಚಿಸುತ್ತೇವೆ. ಅಂದರೆ ರಾಜ್ಯ ಸಮಿತಿಗೆ ಸಂಬಂಧಪಟ್ಟಂತಹ ಎಲ್ಲಾ ಸಮಸ್ಯೆಗಳನ್ನು, ಗುರುತಿಸುವಲ್ಲಿ. ಅವನ್ನು ಪರಿಹರಿಸುವಲ್ಲಿ ಕೇಂದ್ರ ಸಮಿತಿ ಸಕ್ರಿಯವಾಗಿ ಪಾಲುಗೊಳ್ಳಬೇಕು. ಇದೇ ರೀತಿ ರಾಜ್ಯ ಸಮಿತಿಗಳು ಜಿಲ್ಲಾ ಸಮಿತಿಗಳ ಸಮಸ್ಯೆಗಳನ್ನು ಗುರುತಿಸಿ, ಪರಿಹರಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಹೀಗೆ ಪ್ರತಿಯೊಂದು ಹಂತದಲ್ಲೂ ಸಮಿತಿಗಳು. ತಮ್ಮ ಕೆಳಗಿನ ಸಮಿತಿಗಳ ಕಾರ್ಯಾಚರಣೆಯ ಯೋಜನೆಗಳನ್ನು ರೂಪಿಸುವಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬೇಕು. ಪ್ರಜಾಸತ್ತಾತ್ಮಕ ಕೇಂದ್ರನಾದವನ್ನು ಆಚರಣೆಗೆ ತರುವ ಮೂರ್ತ ವಿಧಾನವಿದು.

ಪ್ರಸಕ್ತ ಸಮಸ್ಯೆಗಳ ಮೇಲೆ ಜನತೆಯ ಚಳುವಳಿ ಎಲ್ಲಾ ಬೂರ್ಜ್ವಾ ಪಕ್ಷಗಳ ಅನುಯಾಯಿಗಳ ಮತ್ತು ಯಾವ ಪಕ್ಷಕ್ಕೂ ಸೇರದ ಜನರ ಹೆಚ್ಚುತ್ತಿರುವ ಅಸಂತೃಪ್ತಿಗಳನ್ನು ಜಾಗೃತಗೊಳಿಸುವ ಒಂದು ಮಹತ್ವದ ಚಟುವಟಿಕೆ. ಈ ಮೂಲಕ ಅವರು ಎಡ ಮತ್ತು ಪ್ರಜಾಪ್ರಭುತ್ವ ರಂಗ ಕಟ್ಟುವ ಅಗತ್ಯವನ್ನು ಅರಿಯುವಂತೆ ಮಾಡಬೇಕು. ಇದರಲ್ಲಿ

ನಿಯತಕಾಲಿಕಗಳಿಂದಲೆ ನಾವು ತೃಪ್ತಿಪಡಬೇಕಾಗಿದೆ. ಅದ್ದರಿಂದ, ಪತ್ರಿಕೆಯ ಸಂಪಾದನೆಯಿಂದ. ಹಿಡಿದು ಆರ್ಥಿಕ ನಿರ್ವಹಣೆಯವರೆಗೆ ಪತ್ರಿಕೆ ನಡೆಸುವಲ್ಲಿನ ಪ್ರತಿಯೊಂದು ಅಂಶವನ್ನು ಅತ್ಯಂತ ತುರ್ತು ಗಮನನೀಡಿ ತೀವ್ರವಾಗಿ ಪರೀಕ್ಷಿಸಬೇಕು.

ಸೈದ್ಧಾಂತಿಕ ಶಿಕ್ಷಣ

ಪತ್ರಿಕೆ ನಡೆಸುವುದು ಜನಾ[illegible]ವಳಿಯ ಒಂದು ಮಹತ್ವದ ಘ[illegible]ದರೂ, ಅದು ಕೇವಲ ಒಂದು ಭಾಗವಷ್ಟೆ. ಸಾರ್ವಜನಿಕ ಸಭೆಗಳು, ಮತ ಪ್ರದರ್ಶನಗಳು, ಪಾದಯಾತ್ರೆಗಳು ಇತ್ಯಾದಿ ಇತರ ವಿಧಾನಗಳ ಪಟ್ಟಿಯನ್ನೇನೂ ಇಲ್ಲಿ ಮಾಡಬೇಕಾಗಿಲ್ಲ. ಜನಗಳ ನಡುವೆ ಹೋಗುವ ಪಕ್ಷದ ವಕ್ತಾರರು ಅವರ ಜತೆ ಅವರನ್ನು ಕಾಡಿಸುತ್ತಿರುವ ಸಮಸ್ಯೆಗಳ ಮೇಲೆ ಅವರ ಸದ್ಯದ ರಾಜಕೀಯ ತಿಳುವಳಿಕೆಯ ಮಟ್ಟದಲ್ಲಿ ಮಾತನಾಡಬೇಕು. ಆದರೆ ಹಾಗೆ ಮಾಡುವಾಗ ಅವರನ್ನು ಸದ್ಯ ಕಾಡುತ್ತಿರುವ ಒಂದು ಮೂರ್ತ ಸಮಸ್ಯೆಯನ್ನು ಇನ್ನೂ ಹೆಚ್ಚು ಸಾರ್ವತ್ರಿಕ ಸಮಸ್ಯೆಗಳೊಡನೆ ಜೋಡಿಸಿ ಹಾಕುವುದರ ಬಗ್ಗೆ ಗಮನಹರಿಸಬೇಕು. ಅವರ ಮೂರ್ತ ಸಮಸ್ಯೆಯನ್ನು ಸಾರ್ವತ್ರಿಕ ಸಮಸ್ಯೆಗಳೊಂದಿಗೆ ಸಂಬಂಧಿಸಿದ್ದೇ ಇರುತ್ತದೆ. ಅದು ಅವರಿಗೆ ಹಾಗೆಂದು ಕಾಣಿಸಲಿಕ್ಕಿಲ್ಲ. ತಾನು ಯಾರನ್ನು ಉದ್ದೇಶಿಸಿ ಮಾತನಾಡುತ್ತಿದ್ದೇನೋ ಅವರ ಸದ್ಯದ ತಿಳುವಳಿಕೆಯಿಂದ ಆರಂಭಿಸಿ ಅದನ್ನು ಪಕ್ಷದ ತಿಳುವಳಿಕೆಯ ಮಟ್ಟಕ್ಕೆ ಏರಿಸುವುದು ಪಕ್ಷದ ವಕ್ತಾರನ ಅಥವಾ ಚಳುವಳಿಗಾರನ ಕರ್ತವ್ಯ. ಹೀಗೆ ಪಕ್ಷದ ವಕ್ತಾರರು ಅಥವಾ ಚಳುವಳಿಗಾರರು ಸದ್ಯದ ಸಮಸ್ಯೆಗಳ ಕುರಿತಾದ ಚಳುವಳಿಗಳನ್ನು ಈ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಪಕ್ಷದ ತಿಳುವಳಿಕೆಯ ಶಿಕ್ಷಣವನ್ನು ಜನತೆಗೆ ನೀಡುವ ಕರ್ತವ್ಯದೊಂದಿಗೆ ಜೋಡಿಸಲು

[4ನೇ ಪುಟಕ್ಕೆ]

ತುರ್ತು ಕರ್ತವ್ಯಗಳು

-[3ನೇ ಪುಟದಿಂದ]

ಕಲ್ಪವಾಗಿರಬೇಕು.

ಇದಕ್ಕೂ ಪಕ್ಷದ ಸದಸ್ಯರ ಶಿಕ್ಷಣದ ಸಮಸ್ಯೆಗಳಿಗೂ ಸಂಬಂಧವಿದೆಯೆಂಬುದು ಸ್ವಯಂವೇದ್ಯ. ಅದೇ ರೀತಿ ಜನರೆದುರು ಇರುವ ಪ್ರತಿಯೊಂದು ಪ್ರಶ್ನೆಯ ಬಗ್ಗೆಯೂ ನಿಯಮಿತವಾಗಿ ಪ್ರಚಾರ ಕರಪತ್ರಗಳನ್ನು ಹೊರತರುವುದಕ್ಕೂ ಇದಕ್ಕೂ ಸಂಬಂಧವಿದೆ. ದುರದೃಷ್ಟವಶಾತ್ ಈ ಎರಡೂ ಕರ್ತವ್ಯಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಪಕ್ಷದ ಕೆಲಸಗಳ ಪಟ್ಟಿಯಲ್ಲಿ ಕೇಂದ್ರದಲ್ಲಾಗಲೀ ರಾಜ್ಯದಲ್ಲಾಗಲೀ ಇಂಗ್ಲೀಷ್, ಹಿಂದಿ ಮತ್ತು ಇತರ ಭಾಷೆಗಳಲ್ಲಿ ಪಕ್ಷದ ಶಾಲೆಯನ್ನು ನಿಯಮಿತವಾಗಿ ಸಂಘಟಿಸುವ ವಿಚಾರಕ್ಕೆ ಯಾವ ಪ್ರಾಧಾನ್ಯತೆಯೂ ಸಿಗುತ್ತಿಲ್ಲ. ಸದ್ಯದ ಸಮಸ್ಯೆಗಳ ಬಗ್ಗೆ ಪ್ರಚಾರ ಕರಪತ್ರಗಳನ್ನು (ಕೇಂದ್ರ ಸಮಿತಿ ಮತ್ತು ರಾಜ್ಯ ಸಮಿತಿಗಳಿಂದ) ಹೊರತರುವುದಂತೂ ಇಲ್ಲವೇ ಇಲ್ಲವೆನ್ನಬಹುದು.

1986ಕ್ಕೆ ಕೇಂದ್ರ ಶಾಲೆಯನ್ನು ಯೋಜಿಸಬೇಕು. ಇಂತಹ ಕೇಂದ್ರ ಶಾಲೆಗಳಿಗೆ ನಿರ್ದಿಷ್ಟ ಪಾಠಪಟ್ಟಿ ರಚಿಸಬೇಕು. ಇದರಲ್ಲಿ ಪಶ್ಚಿಮ ಬಂಗಾಳದ ಕೈಗಾರಿಕಾ ನೀತಿ, ಜಾತಿ ಮತ್ತು ಕೋಮು ಮಿತ್ರರೊಂದಿಗೆ ಒಂದು ರಂಗ ಮತ್ತು ಸರಕಾರ ರಚಿಸಬೇಕೆಂಬ ಕೇರಳದ ಭಿನ್ನಮತೀಯರ ಒತ್ತಾಯ, ಜಾತೀಯ ಸಮಸ್ಯೆ. ಭಾಷೆ ಮತ್ತು ದೇಶೀಯತೆ ಪ್ರಶ್ನೆ ಇವನ್ನೂ ಸೇರಿಸಬೇಕು. ಪಕ್ಷದ ಸಂವಿಧಾನದ ಮೇಲೂ ಒಂದು ತರಗತಿಯಿರಬೇಕು. ಇದನ್ನಾಧರಿಸಿ ಸಂಘಟನೆಯ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ನೀತಿಗಳನ್ನು ಕಲಿಸಬೇಕು. ಒಂದು ಕ್ರಾಂತಿಕಾರಿ ಕಾರ್ಮಿಕ ವರ್ಗದ ಪಕ್ಷ ಮತ್ತು ಬೂರ್ಜ್ವಾ, ಭೂಮಾಲಕ, ಕಿರು-ಬೂರ್ಜ್ವಾ ಮತ್ತಿತರ ವರ್ಗಗಳ ಪಕ್ಷಗಳ ನಡುವಿನ ವ್ಯತ್ಯಾಸವನ್ನು ತಿಳಿಯದ ಅಥವಾ ಹಿಂದೆ ತಿಳಿದಿದ್ದು ಈಗ ಮರೆತುಬಿಟ್ಟಿರುವ ಸಂಗಾತಿಗಳ ಸಂಖ್ಯೆ ಸಾಕಷ್ಟು ಇದೆಯೆಂಬುದನ್ನು ಗಮನಿಸಬೇಕು.

ಪಕ್ಷದ ಮುಖ್ಯಪತ್ರಿಕೆಗಳು. ಪ್ರಕಟನಾ ಸಂಸ್ಥೆಗಳು ಮುಂತಾದವುಗಳಿಗೆ ಕ್ರಮಬದ್ಧವಾಗಿ ರಚಿಸಿದ ಮತ್ತು ಕಾರ್ಯನಿರ್ವಹಿಸುವ ಸಂಪಾದಕೀಯ ಮತ್ತು ವ್ಯವಸ್ಥಾಪಕ ತಂಡಗಳಿರಬೇಕು. ಕೇಂದ್ರದಲ್ಲಿ ಪಾಲಿಟ್‌ಬ್ಯೂರೋ ಕೇಂದ್ರ ಸಮಿತಿ ಮತ್ತು ರಾಜ್ಯಗಳಲ್ಲಿ ಕಾರ್ಯದರ್ಶಿ ಮಂಡಳಿ ರಾಜ್ಯ ಸಮಿತಿಗಳು ಈ ತಂಡಗಳ ಕೆಲಸದ ವ್ಯವಸ್ಥಿತ ತಪಾಸಣೆ ನಡೆಸಬೇಕು. ಈ ಸಂಸ್ಥೆಗಳ ಮತ್ತು ಪಕ್ಷದ ಘಟಕಗಳ ಲೆಕ್ಕ ಪತ್ರಗಳನ್ನು ಇಂತಹ ಅಧಿಕಾರ ನೀಡಲಾದ ಸಂಗಾತಿಗಳು ಪರಿಶೋಧಿಸಬೇಕು (ಆಡಿಟ್ ಮಾಡಬೇಕು).

ಎಲ್ಲಕ್ಕೂ ಮಿಗಿಲಾಗಿ, ಸುಮಾರು 4 ಲಕ್ಷ ಪಕ್ಷದ ಸದಸ್ಯರನ್ನೊಳಗೊಂಡ ಒಂದು ಲಕ್ಷದಷ್ಟು ಘಟಕಗಳ ನಿಯಮಿತ ಹಾಗೂ ವ್ಯವಸ್ಥಿತ ಕಾರ್ಯನಿರ್ವಹಣೆ ಒಂದು ಅಗಾಧ ಕೆಲಸ. ದುರದೃಷ್ಟವಶಾತ್ ಇದನ್ನು ಸ್ವಯಂಸ್ಫೂರ್ತಿಗೆ ಬಿಟ್ಟು ಬಿಡಲಾಗಿದೆ. ನಮಗೆ ಈಗಾಗಲೇ ತಿಳಿದಿರುವಂತೆ ಇದು ಪಕ್ಷದ ಸಂಘಟನೆಯ ತತ್ವಕ್ಕೆ ತದ್ವಿರುದ್ಧವಾದ ಸಂಗತಿ.

ಪಕ್ಷದ ಪ್ರತಿಯೊಬ್ಬ ಸದಸ್ಯನ [illegible] ಶಿಸ್ತು. ಆತನ ಆಕೆಯ ಸಮಸ್ತ ಜೀವನ ಮತ್ತು ಚಟುವಟಿಕೆಗಳು ಆತ ಆಕೆ ಸದಸ್ಯರಾಗಿರುವ ಘಟಕದ ಪೂರ್ಣ ಹತೋಟಿಯಲ್ಲಿರಬೇಕಾದದ್ದು ಕಾರ್ಮಿಕ ವರ್ಗದ ಕ್ರಾಂತಿಕಾರೀ ಪಕ್ಷದ ಸಾರವಾಗಿದ್ದರೂ, ಇದು ಆಚರಣೆಯಲ್ಲಿಲ್ಲ. ಘಟಕಗಳ ಸಭೆಗಳು ನಿಯಮಿತವಾಗಿ ನಡೆಯುವುದಿಲ್ಲ. ನಡೆದರೂ ಸರಿಯಾದ ರಾಜಕೀಯ, ಸಂಘಟನಾತ್ಮಕ ತಯಾರಿ ಇರುವುದಿಲ್ಲ. ಆದ್ದರಿಂದ ಘಟಕ ಸಭೆಗಳಲ್ಲಿ ಭಾಗವಹಿಸುವವರು ಪಕ್ಷದ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅಶಕ್ತರಾಗುತ್ತಾರೆ. ಪ್ರತಿಯೊಬ್ಬ ಸದಸ್ಯನೂ ಮಾಡುವ ಕೆಲಸದ ನಕಾರಾತ್ಮಕ ಮತ್ತು ಸಕಾರಾತ್ಮಕ ಅಂಶಗಳನ್ನು ಸಭೆಯಲ್ಲಿ ಭಾಗವಹಿಸುವವರು ವಿಶ್ಲೇಷಿಸಲು ಸಾಧ್ಯವಾಗುವಂಥ ಸಂಘಟನಾ ವರದಿಗಳನ್ನು ನೀಡುತ್ತಿಲ್ಲ. ಇದರ ಮೇಲಿನ ಸಮಿತಿಗಳು ತಮ್ಮ ಕೈ ಕೆಳಗಿರುವ ಸಮಿತಿಗಳ ಕಾರ್ಯನಿರ್ವಹಣೆಯನ್ನು ವಿಮರ್ಶಿಸಿ, ಸರಿಪಡಿಸುವ ಅನಿವಾರ್ಯ ಜವಾಬ್ದಾರಿ ತಮ್ಮದು ಎಂದು ಪರಿಗಣಿಸುವುದಿಲ್ಲ.

ಪಕ್ಷದ ಸಂಘಟನೆ ಒಂದು ಪ್ರತ್ಯೇಕ ಕೆಲಸ. ಸಮಿತಿ ಒಟ್ಟಾಗಿ ನಡೆಸಬೇಕಾದ, ಕೆಲವು ಸದಸ್ಯರಿಗೆ ಸಮಿತಿಯ ನಿರ್ಣಯಗಳನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ವಹಿಸಬೇಕಾದ ಕೆಲಸ ಎಂದು ಪ್ರತಿಯೊಂದು ಹಂತದಲ್ಲೂ ಪಕ್ಷದ ಸಮಿತಿಗಳು ಪರಿಗಣಿಸುವವರೆಗೆ ಪಕ್ಷದ ಘಟಕಗಳ ಕಾರ್ಯನಿರ್ವಹಣೆಯ ಈ ದೌರ್ಬಲ್ಯಗಳನ್ನು ನಿವಾರಿಸುವುದು ಸಾಧ್ಯವಿಲ್ಲ. ಸಮಿತಿಯ ಸದಸ್ಯರಲ್ಲಿ ಸೂಕ್ತ ಶ್ರಮ ವಿಭಜನೆ, ಸಾಮೂಹಿಕ ನಿರ್ಣಯ ಮತ್ತು ಜಾರಿಗೆ ತರುವ ವೈಯಕ್ತಿಕ ಜವಾಬ್ದಾರಿಯ ಆಧಾರದ ಮೇಲೆ ಸಮಿತಿ ಸದಸ್ಯರ ವರದಿಗಳನ್ನು ಸಮಿತಿ ಒಟ್ಟಾಗಿ ತಪಾಸಣೆ ಮಾಡುವುದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪಕ್ಷದ ಶಾಖೆಗಳ ಮತ್ತು ಮೇಲಿನ ಘಟನೆಗಳ ಸಭೆಗಳು ರಾಜಕೀಯ ಬೆಳವಣಿಗೆಗಳನ್ನು ಚರ್ಚಿಸಿ ಐಕ್ಯ ತಿಳುವಳಿಕೆಗೆ ಬರುವ ವೇದಿಕೆಗಳು ಮಾತ್ರವಲ್ಲ. ಪ್ರತಿಯೊಬ್ಬ ಸದಸ್ಯ ನಿರ್ಣಯಗಳನ್ನು ಜಾರಿಗೊಳಿಸಿ ಮಾಡುವ ಕೆಲಸವನ್ನು ಟೀಕೆ, ಸ್ವಯಂಟೀಕೆಯ ವಿಧಾನದಲ್ಲಿ ವಿಮರ್ಶಿಸುವ ವೇದಿಕೆಗಳು ಕೂಡಾ.

ಇದು ಸ್ಥೂಲವಾಗಿ ಹೇಳಿದ ಕರ್ತವ್ಯಗಳು ಜನಗಳ ಜೀವನದ ಹೋರಾಟಗಳನ್ನು, ಸಾಮೂಹಿಕ ಆಂದೋಲನಗಳನ್ನು ಬೆಳೆಸಿ, ಕೆಲಸ ಮಾಡುವ ಜ್ವಲಂತ ರಾಜಕೀಯ ಪ್ರಶ್ನೆಗಳ ಮೇಲೆ ಜನರ ಚಳುವಳಿಗಳನ್ನು ನಡೆಸುವ, ಈ ಆಂದೋಲನಗಳು ಹಾಗೂ ಹೋರಾಟಗಳಲ್ಲಿ ಭಾಗವಹಿಸಿದವರನ್ನು ಪಕ್ಷದ ಮಹಾಧಿವೇಶನದ ರಾಜಕೀಯ ನಿರ್ಣಯ ಮುಂಗಾಣುವಂತಹ ಒಂದು ಶಕ್ತಿಶಾಲೀ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದಲ್ಲಿ ಐಕ್ಯಗೊಳಿಸುವ ಒಂದು ಸಂಘಟನೆಯಾಗಿ ಪಕ್ಷವನ್ನು ಮತ್ತಷ್ಟು ಬೆಳೆಸುವಲ್ಲಿ ಅತ್ಯಂತ ನಿರ್ಣಾಯಕ ಕರ್ತವ್ಯಗಳು.

ಈ ಸಾರ್ವತ್ರಿಕ ಮಾರ್ಗನಿರ್ದೇಶನದೊಂದಿಗೆ ರಾಜ್ಯ ಸಮಿತಿಗಳಿಗೆ ಪಾಲಿಟ್ ಬ್ಯೂರೋ ನಿರ್ದೇಶನದಲ್ಲಿ ಮೂರ್ತ ಕಾರ್ಯಾಚರಣೆಯ ಯೋಜನೆಗಳನ್ನು ರೂಪಿಸಬೇಕು.

"ಪ್ರಜಾಸತ್ತಾತ್ಮಕ ಕೇಂದ್ರವಾದ"

ಒಂದು ಚಿಂತನೆ

ಪಕ್ಷಕ್ಕೆ ಬಲಶಾಲೀ ಕೇಂದ್ರ

ಭೂಮಾಲಕ—ಬಂಡವಾಳಶಾಹಿ ಪ್ರಭುತ್ವ ಒಂದು ಅತ್ಯಂತ ಕೇಂದ್ರೀಕೃತವಾದ ಪ್ರಭುತ್ವ ಶಕ್ತಿ. ಈ ಕೇಂದ್ರೀಕರಣ ಕ್ರಿಯೆ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಪ್ರಭುತ್ವ ಮತ್ತಷ್ಟು ಕೇಂದ್ರೀಕರಣಗೊಳ್ಳುತ್ತಲೇ ಇರುತ್ತದೆ. ಇದನ್ನು ಎದುರಿಸಿ ಹೋರಾಡುವ, ಪ್ರಭುತ್ವವನ್ನು ಜನಸಮುದಾಯದ, ಕಾರ್ಮಿಕ ವರ್ಗದ ನೇತಾರರಾಗಿ ಮುಂಚೂಣಿಯಾಗಿ ವಶಪಡಿಸಿಕೊಳ್ಳುವುದೇ ಒಂದು ಮಾರ್ಕ್ಸ್‌ವಾದಿ ಲೆನಿನ್‌ವಾದಿ ಕಮ್ಯುನಿಸ್ಟ್ ಪಕ್ಷದ ಉದ್ದೇಶ.

ಕೇಂದ್ರೀಕೃತವಾದ ಹಾಗೂ ದಿನೇ ದಿನೇ ಮತ್ತಷ್ಟು ಕೇಂದ್ರೀಕೃತವಾದ ಪ್ರಭುತ್ವವನ್ನು ವಶಪಡಿಸಿಕೊಳ್ಳಬೇಕಾದರೆ ಕೇಂದ್ರಿತವಾದ ಪ್ರಜಾಪ್ರಭುತ್ವದ ಆಧಾರದ ಮೇಲೆ ನಿರ್ಮಿತವಾದ ಬಲಶಾಲಿ ಕೇಂದ್ರದಿಂದಲೇ ಸಾಧ್ಯ. ಆದುದರಿಂದಲೇ ಕಮ್ಯುನಿಸ್ಟ್ ಪಕ್ಷ ಮೇಲಿನಿಂದ ಕಟ್ಟಲ್ಪಡುವುದು ಎನ್ನುವುದು. ಬಲಶಾಲಿ ಕೇಂದ್ರವೆಂದರೆ ಇಡೀ ಪಕ್ಷದ ಅನುಭವವನ್ನು ಜರಡಿ ಹಿಡಿದು ಸಾಂದ್ರಗೊಳಿಸುವ ಹಾಗೂ ಈ ಅನುಭವಸಾರದ ತಿಳುವಳಿಕೆಯ ಕಣ್ಣೋಟದ, ಇಡೀ ಜಗತ್ತಿನ ಮಾರ್ಕ್ಸ್‌ವಾದದ ಎಲ್ಲ ಅನುಭವದ ಬೆಳಕಿನಲ್ಲಿ ಪಕ್ಷವನ್ನು ಮುನ್ನಡೆಸುವ ಕೇಂದ್ರ.

ಪ್ರಜಾಸತ್ತಾತ್ಮಕ-ಕೇಂದ್ರವಾದದ ಉಗಮ

ಪ್ರಜಾಸತ್ತಾತ್ಮಕ ಕೇಂದ್ರವಾದವೆಂಬುದು ಮಾರ್ಕ್ಸ್‌ವಾದದ ಆರಂಭದ ದಿನಗಳಿಂದಲೇ ಮಾರ್ಕ್ಸ್‌ವಾದದ ಜೊತೆ ಜೊತೆಯಲ್ಲಿಯೇ ಬೆಳೆದು ಬಂದ ಸಂಘಟನಾ ಸಿದ್ಧಾಂತ. ಗತಿತಾರ್ಕಿಕ ಭೌತವಾದವನ್ನು ಸಂಘಟನೆಯ ನಿಯಮಗಳಿಗೆ ಅಳವಡಿಸಿದರೆ ದೊರಕುವ ತತ್ವವೇ ಪ್ರಜಾಸತ್ತಾತ್ಮಕ ಕೇಂದ್ರವಾದ.

ಈ ಪ್ರಜಾಸತ್ತಾತ್ಮಕ ಕೇಂದ್ರವಾದವೆಂಬುದು ಮೊಟ್ಟ ಮೊದಲ ಕಮ್ಯುನಿಸ್ಟ್ ಸಂಘಟನೆಯಾದ ಕಮ್ಯುನಿಸ್ಟ್ ಲೀಗ್‌ನಿಂದಲೇ ಆರಂಭವಾಗಿ ಅನೇಕ ಪರಕೀಯ ಬಂಡವಾಳಶಾಹಿ, ಪುಟ್ಟ ಬಂಡವಾಳಶಾಹಿ, ಎಡ ಸಾಹಸವಾದಿ ಸಂಘಟನಾ ತತ್ವಗಳೊಂದಿಗೆ ಹೋರಾಡುತ್ತಲೇ ಗಟ್ಟಿಯಾಗುತ್ತಾ ಬಂದಿದೆ. ಕಮ್ಯುನಿಸ್ಟ್ ಲೀಗ್, ಪ್ರಥಮ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ದಿನಗಳಲ್ಲಿ ಮಾರ್ಕ್ಸ್ ಹಾಗೂ ಎಂಗೆಲ್ಸರು ನೇತೃತ್ವ ವಹಿಸಿ ಪಂಥವಾದಿ ಬ್ಲಾಂಕ್ವಿಸ್ಟರ ಪಂಥವಾದಿ ಬಕುನಿನ್ನರ ಸಂಘಟನಾ ಸಿದ್ಧಾಂತಗಳೊಂದಿಗೆ ಹೋರಾಡುತ್ತಾ ಈ ತತ್ವವನ್ನು ರೂಪಿಸಿದರು.

[[illegible]ನೇ ಪುಟಕ್ಕೆ]

ಲೆನಿನ್ ಕಂಡರಿಸಿದಂತೆ ಪ್ರಜಾಸತ್ತಾತ್ಮಕ ಕೇಂದ್ರವಾದ

ಅವರು ರೂಪಿಸಿದ "ಪ್ರಜಾಸತ್ತಾತ್ಮಕ ಕೇಂದ್ರವಾದ"ದ ಸಾರವೆಲ್ಲಾ, ಅಕ್ಟೋಬರ್ ಕ್ರಾಂತಿಯ ನಂತರ ಅವರ ನಾಯಕತ್ವದಲ್ಲಿ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಅಂತರರಾಷ್ಟ್ರೀಯ 1921ರಲ್ಲಿ ಅಂಗೀಕರಿಸಿದ "ಪಕ್ಷದ ಸಂಘಟನೆಯ ತತ್ವಗಳು" ಎಂಬ ದಾಖಲೆಯಲ್ಲಿ ಅಡಕವಾಗಿದೆ. ಸಂಘಟನೆಯ ತತ್ವಗಳು ವಿಶ್ವದ ಎಲ್ಲಾ ಕಮ್ಯುನಿಸ್ಟ್ ಪಕ್ಷಗಳಿಗೆ ರಷ್ಯನ್ ಕ್ರಾಂತಿ ಹರಿಸಿದ ಬೆಳಕಿನ ಹೊನಲು.

ವಿಶ್ವದಾದ್ಯಂತ ಬಂಡವಾಳಶಾಹಿ ತನ್ನ ಸ್ಪರ್ಧಾತ್ಮಕ ಕಾಲ ಘಟ್ಟವನ್ನು ದಾಟಿ ಗುತ್ತೇದಾರಿ ಕಾಲಘಟ್ಟಕ್ಕೆ ಕಾಲಿರಿಸಿದ ಸಮಯದಲ್ಲಿ ಹಿಂದುಳಿದ ರಾಷ್ಟ್ರವೊಂದರಲ್ಲಿ ಪಕ್ಷವನ್ನು ಕಟ್ಟುವ ಕೆಲಸ ಲೆನಿನರ ಪಾಲಿಗೆ ಬಂತು. ಗುತ್ತೇದಾರಿ ಬೆಳವಣಿಗೆಯಿಂದ ಕಾರ್ಮಿಕರ ಒಂದು ದೊಡ್ಡ ವಿಭಾಗದಲ್ಲಿ, ಅದರಲ್ಲಿಯೂ ಗುತ್ತೇದಾರಿಗಳ ಬೆಳವಣಿಗೆ ತೀವ್ರವಾಗಿದ್ದ ವಸಾಹತುಶಾಹಿ, ಸಾಮ್ರಾಜ್ಯಶಾಹಿ ದೇಶಗಳಲ್ಲಿ ಪಕ್ಷದ ಸಂಘಟನೆಯನ್ನು ದುರ್ಬಲಗೊಳಿಸುವ ಅದರ ಕ್ರಾಂತಿಕಾರಿ ಗುಣವನ್ನು ನಾಶಮಾಡುವ ಪರಿಷ್ಕರಣವಾದಿ ಪ್ರವೃತ್ತಿ ಎರಡನೆ ಅಂತರರಾಷ್ಟ್ರೀಯದಲ್ಲಿ ಬೆಳೆದು ನಿಂತಾಗ ಅದರ ವಿರುದ್ಧ ಹೋರಾಡುತ್ತ ಕಮ್ಯುನಿಸ್ಟ್ ಸಂಘಟನೆಯ ಕ್ರಾಂತಿಕಾರಿ ಗುಣವನ್ನು ಪುನರೂಪಿಸಿದರು. ಕ್ರಾಂತಿಕಾರಿ ಸಿದ್ಧಾಂತದ ಪ್ರಚಾರದ ಕಾಲ ಘಟ್ಟದಿಂದ ಕ್ರಾಂತಿಯನ್ನು ಮಾಡುವ ಕಾಲಘಟ್ಟಕ್ಕೆ ಅವಶ್ಯಕವಾದಂತೆ ಪಕ್ಷಕ್ಕೆ ಉಕ್ಕಿನ ಘಟ್ಟಿತನವನ್ನು ನೀಡುವಂತೆ ಸಂಘಟನಾ ಸೂತ್ರಗಳನ್ನು ರೂಪಿಸಿದರು. ಇದಕ್ಕಾಗಿ ಮೆನ್ಶೆವಿಕ್‌ರೊಡನೆ ನಿರಂತರ ಹೋರಾಟ ನಡೆಸಿದರು.

ಕಮ್ಯೂನಿಸ್ಟ್ ಪಕ್ಷದಲ್ಲಿ "ಪ್ರಜಾಸತ್ತಾತ್ಮಕ ಕೇಂದ್ರೀಕರಣ"ವೆಂಬುದು ಕೇಂದ್ರೀಕರಣ ಹಾಗೂ ಕಾರ್ಮಿಕ ಪ್ರಜಾಸತ್ತೆಯ ಬೆಸುಗೆ. ಒಂದು ನಿಜವಾದ ಸಂಯೋಜನೆ. ಇಡೀ ಪಕ್ಷದ ಸಂಘಟನೆಯೆಲ್ಲಾ ಒಂದಾಗಿ ಸರ್ವಸಾಮಾನ್ಯಹೋರಾಟದಲ್ಲಿ ತೀವ್ರವಾಗಿ ತೊಡಗುವುದೇ ಈ ಬೆಸುಗೆಗೆ ಆಧಾರ.

ಈ ಕೇಂದ್ರೀಕರಣ ಕೇವಲ ಕಾಟಾಚಾರದ, ಯಾಂತ್ರಿಕ ಕೇಂದ್ರೀಕರಣವಲ್ಲ ಕಮ್ಯುನಿಸ್ಟ್ ಚಟುವಟಿಕೆಗಳ ಕೇಂದ್ರೀಕರಣ ಅಂದರೆ ಸಮರ್ಥವಾದ ನಾಯಕತ್ವದ ರೂಪೀಕರಣ. ಸಮರಕ್ಕೆ ಸಿದ್ಧವಾದ, ಆದರೆ ಅದೇ ಸಮಯದಲ್ಲಿ ಪರಿಸ್ಥಿತಿಗಳನ್ನು ಗುಣವಾಗಿ ಪ್ರತಿಕ್ರಿಯಿಸಲು ಸಿದ್ಧವಿರುವ ನಾಯಕತ್ವ. ಕಮ್ಯುನಿಸ್ಟ್ ಅಂತರರಾಷ್ಟ್ರೀಯ ಅಂಗೀಕರಿಸಿದ ಪ್ರಜಾಸತ್ತಾತ್ಮಕ ಕೇಂದ್ರವಾದದ ಮೂಲತತ್ವಗಳಿಗೆ ಅಧಿಕಾರಕ್ಕಾಗಿ ಕಿತ್ತಾಟವಾಗಲೀ, ಪಕ್ಷದೊಳಗೆ ಪ್ರಾಧಾನ್ಯಕ್ಕಾಗಿ ಸ್ಪರ್ಧೆಯಾಗಲೀ ಸಲ್ಲದ್ದು, ಸಗ್ಗದ್ದು.

ಬಂಡವಾಳಶಾಹಿ ಪ್ರಭಾವ

ಹಿಂದಿನ ಕ್ರಾಂತಿಕಾರಿ ಗುಣ ಕಳೆದುಕೊಂಡ ಕಾರ್ಮಿಕ ಚಳುವಳಿಯ (ಸಮಾಜವಾದಿಗಳು ಪರಿಷ್ಕರಣವಾದಿಗಳ) ಸಂಘಟನೆಯಲ್ಲಿ ಬಂಡವಾಳಶಾಹಿ ಪ್ರಭುತ್ವದಲ್ಲಿರುವಂತೆಯೆ ಸರ್ವವ್ಯಾಪಿ ದ್ವೈತ ಅಧಿಕಾರಶಾಹಿ, ಹಾಗೂ ಜನರ ನಡುವೆ ಪರಸ್ಪರ ವಿರುದ್ಧವಾದ ಇಬ್ಬಗೆಯ ಭೇದ-ಬೆಳೆದಿದೆ. ಬಂಡವಾಳಶಾಹಿ ಪರಿಸರದಲ್ಲಿ ಒಟ್ಟಾಗಿ ಕೆಲಸ ಮಾಡುವ ಜೀವಂತ ಸಂಘಕ್ಕೆ ಬದಲಾಗಿ ಕಾಟಾಚಾರದ, ಬಂಜೆಯಾದ ಪ್ರಜಾಸತ್ತಾತ್ಮಕತೆ. ಸಂಘಟನೆಯಲ್ಲಿ ಕ್ರಿಯಾಶೀಲ ಪದಾಧಿಕಾರಿಗಳು, ಹಾಗೂ ನಿಷ್ಕ್ರಿಯ ಸದಸ್ಯರು ಎಂಬ ಒಡಕು ವ್ಯಾಪಿಸಿದೆ. ಕ್ರಾಂತಿಕಾರಿ ಕಾರ್ಮಿಕ ಚಳುವಳಿ ಕೂಡ ಬಂಡವಾಳಶಾಹಿ ಪ್ರಭಾವದಿಂದ ಈ ಕಾಟಾಚಾರದ ಇಬ್ಬಗೆಯಭೇದದ ಪ್ರವೃತ್ತಿಯನ್ನು ಸ್ವಲ್ಪ ಮಟ್ಟಿಗೆ ಹಳೆಯ ಸಮಾಜವಾದಿ ಸಾಮೂಹಿಕ ಪಕ್ಷವನ್ನು ಪಡೆದುಕೊಂಡಿದೆ. ಕಮ್ಯುನಿಸ್ಟ್ ಚಳುವಳಿಯನ್ನಾಗಿ ಪರಿವರ್ತಿಸುವಾಗ ಕೇವಲ ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳುವುದು ಮಾತ್ರ ಆಗದೆ ಹಳೆಯ ವ್ಯವಸ್ಥೆಯನ್ನೇ ಬದಲಾಯಿಸಬೇಕು. ಕೇಂದ್ರೀಕರಣ ಕೇವಲ ಕಾಗದ ಮೇಲೆ ಉಳಿಯದೆ ಕಾರ್ಯರೂಪದಲ್ಲಿ ಬರಬೇಕು. ಎಲ್ಲಾ ಸದಸ್ಯರೂ ಕೇಂದ್ರದ ಅಧಿಕಾರ ತಮ್ಮ ಒಗ್ಗಟ್ಟಿನ ಹೋರಾಟದಲ್ಲಿ ಒಂದು ಸಮರ್ಥ ಆಯುಧ ಎಂದು ಪರಿಗಣಿಸಿದಾಗಲೆ ಇದು ಕಾರ್ಯರೂಪಕ್ಕೆ ಬರಲು ಸಾಧ್ಯ. ಇಲ್ಲದಿದ್ದರೆ ಜನ ಸಮೂಹಗಳಿಗೆ ಇದು ಪಕ್ಷದೊಳಗೆ ಅಧಿಕಾರಶಾಹಿಯಾಗಿ ಕಾಣಬರುತ್ತದೆ ಮತ್ತು ಇದರಿಂದ ಎಲ್ಲಾ ಕೇಂದ್ರೀಕರಣ ಪ್ರವೃತ್ತಿಗೆ ಕಠಿಣಶಿಸ್ತಿಗೆ ವಿರೋಧ ಬೆಳೆಯುತ್ತದೆ. ಅರಾಜಕತೆ ಎಂಬುದು ಅಧಿಕಾರಶಾಹಿಯ ವಿರುದ್ಧ ಧ್ರುವ (ಒಂದರಿಂದ ಮತ್ತೊಂದು ಜೊತೆ ಜೊತೆಯಾಗಿ ಬೆಳೆಯುತ್ತದೆ.)

ಜೀವಂತ ಒಡನಾಟ, ಸಂಬಂಧಗಳು

ಕೇವಲ ಬಾಹ್ಯಾಕಾರದ, ಕಾಟಾಚಾರದ ಪ್ರಜಾಸತ್ತೆಯಿಂದ ಅಧಿಕಾರಶಾಹಿ ಪ್ರವೃತ್ತಿಯನ್ನಾಗಲೀ ಅರಾಜಕ ಪ್ರವೃತ್ತಿಯನ್ನಾಗಲೀ ಕೊಡೆದುಹಾಕಲು ಸಾಧ್ಯವಿಲ್ಲ. ಏಕೆಂದರೆ ಇಂತಹ ಕಾಟಚಾರದ ಹೊರರೂಪದ ಪ್ರಜಾಸತ್ತೆಯೇ ಈ ಪ್ರವೃತ್ತಿಗಳು ಹಬ್ಬುವುದಕ್ಕೆ ಫಲವತ್ತಾದ ನೆಲ. ಆದುದರಿಂದ ಈ ಕಾಟಾಚಾರದ ಪ್ರಜಾಸತ್ತೆಯ ಆಧಾರದ ಮೇಲೆ ಬಲವಾದ ನಾಯಕತ್ವವನ್ನು ಕಟ್ಟುವ ಗುರಿ ಸಿದ್ಧಿಸುವುದಿಲ್ಲ. ಅದಕ್ಕೆ ಪರಸ್ಪರ ಜೀವಂತ ಒಡನಾಟದ ಸಂಬಂಧಗಳು. ಪಕ್ಷದೊಳಗೆ ನಿರ್ದೇಶನ ನೀಡುವ ಸಮಿತಿಗಳು ಹಾಗೂ ಸದಸ್ಯರ ನಡುವೆ ಹಾಗೂ ಪಕ್ಷ ಹಾಗೂ ಕಾರ್ಮಿಕ ಸಮೂಹದ ನಡುವೆ ಜೀವಂತ ಸಂಬಂಧ ಮತ್ತು ಪರಸ್ಪರ ಒಡನಾಟ ಕೇಂದ್ರೀಕರಣಕ್ಕೆ ಅತ್ಯಂತ ಅವಶ್ಯಕ.

ನಮ್ಮ ಪಕ್ಷದ 13 ನೇ ಸಮ್ಮೇಳನಕ್ಕಾಗಿ ದೇಶಾದ್ಯಂತ ಘಟಕಗಳು ಸಜ್ಜುಗೊಳ್ಳುತ್ತಿವೆ. ಶಾಖಾ ಸಮ್ಮೇಳನಗಳಿಂದ ಆರಂಭವಾಗಿ ರಾಜ್ಯ ಸಮ್ಮೇಳನಗಳತ್ತ ಮುನ್ನಡೆಯುತ್ತಿವೆ. ನಮ್ಮ ರಾಜ್ಯ ಸಮ್ಮೇಳನವು ನಡೆಯಲಿರುವ ಸಂದರ್ಭದಲ್ಲಿ, "ಸಾಮೂಹಿಕ ಕ್ರಾಂತಿಕಾರಿ ಪಕ್ಷ"ವನ್ನು ಕಟ್ಟುವುದರಲ್ಲಿ ನಿರತರಾದ ನಾವು, ಈ ಸಾಮೂಹಿಕ ಕ್ರಾಂತಿಕಾರಿ ಪಕ್ಷದ ಮೂಲಾಧಾರ ತತ್ವವಾದ "ಪ್ರಜಾಸತ್ತಾತ್ಮಕ ಕೇಂದ್ರವಾದದ" ಬಗ್ಗೆ ಚಿಂತಿಸಬೇಕಾಗಿದೆ. ಮಥಿಸಬೇಕಾಗಿದೆ, ನಮ್ಮ ನಮ್ಮ ಸಂದರ್ಭಕ್ಕೆ ಅರ್ಥೈಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಸಹಾಯವಾಗುವಂತೆ ಸಾಲ್ಕಿಯಾ ಪ್ಲೀನಂ ವರದಿ ಹಾಗೂ ನಿರ್ಣಯಗಳು ಮತ್ತು ವಿಜಯವಾಡ ರಾಜಕೀಯ ಸಂಘಟನಾತ್ಮಕ ವರದಿಯಿಂದ ಆಯ್ದ ಕೆಲವು ಭಾಗಗಳನ್ನು ಪೋಣಿಸಿ ನಿಮ್ಮ ಮುಂದಿಡಲಾಗಿದೆ.

ಮುಂದೆ ಲೆನಿನ್ನರು. ಜಗತ್ತಿನ ಮೊದಲ ಕ್ರಾಂತಿಯನ್ನು ಸಂಘಟಿಸಿದ ಕ್ರಾಂತಿಕಾರಿ ಪಕ್ಷ-ಬೊಲ್ಷೆವಿಕ್ ಪಕ್ಷವನ್ನು ಮೆನ್ಷೆವಿಕ್ಕರೊಡನೆ ಸೈದ್ಧಾಂತಿಕವಾಗಿ ರಾಜಕೀಯವಾಗಿ, ಸಂಘಟನಾತ್ಮಕವಾಗಿ ಸೆಣಸುತ್ತಾ ರೂಪಿಸಿದಾಗ ಅರಳಿದ ತತ್ವ ಪ್ರಜಾಸತ್ತಾತ್ಮಕ ಕೇಂದ್ರವಾದ.

ನಮ್ಮ ಪಕ್ಷ ಹಾಗೂ ಪ್ರಜಾಸತ್ತಾತ್ಮಕ ಕೇಂದ್ರವಾದ

ನಮ್ಮ ಪಕ್ಷದ ಸಂವಿಧಾನದಲ್ಲಿಯೇ ಸ್ಪಷ್ಟವಾಗಿ ಅಡಕವಾಗಿರುವ ಪ್ರಜಾಸತ್ತಾತ್ಮಕ ಕೇಂದ್ರವಾದದ ತತ್ವವನ್ನು ಪಕ್ಷ ಅನೇಕ ಪರಕೀಯ ಸಂಘಟನಾ ವಿಕಾರಗಳ ವಿರುದ್ಧ ಹೋರಾಡುತ್ತಾ, ನಿವಾರಿಸುತ್ತಾ ಬಂದಿದೆ. 1967 ರ ಪಾರ್ಟಿ ಸಂಘಟನೆಯಲ್ಲಿ ನಮ್ಮ ಕರ್ತವ್ಯಗಳು (ಕನ್ನಡಕ್ಕೆ ಅನುವಾದವಾಗಿದೆ) ಸಂಘಟನೆಯ ಬಗ್ಗೆ 1976ರ ಕೇಂದ್ರ ಸಮಿತಿಯ ನಿರ್ಣಯ, 1978 ರ ಸಾಲ್ಕಿಯಾ ಪ್ಲೀನಂ ಹಾಗೂ (ನಿರ್ಣಯಗಳು ಕನ್ನಡದಲ್ಲಿ ಅನುವಾದವಾಗಿವೆ) ವಿಜಯವಾಡದ 11 ನೇ ಸಮ್ಮೇಳನದ ರಾಜಕೀಯ-ಸಂಘಟನಾ ವರದಿ (ಕರ್ನಾಟಕಕ್ಕೆ ಸಂಬಂಧಪಟ್ಟ ಭಾಗ ಅನುವಾಗಿದೆ) ಈ ದಸ್ತಾವೇಜುಗಳು ಅಧ್ಯಯನ, ಚರ್ಚೆ, ಪುನರಧ್ಯಯನ, ಹಾಗೂ ನಮ್ಮ ಅನುಭವದ ಜೊತೆಗೆ ಹೋಲಿಕೆ, ಪಕ್ಷದ ನಾಯಕರ ಮಾರ್ಗದರ್ಶನ ಇವು ಈ ಸಂಘಟನಾ ತತ್ವವನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

"ಸಾಮೂಹಿಕ ಕ್ರಾಂತಿಕಾರಿ ಪಕ್ಷ"

ಜಲಂಧರ್‌ನ ರಾಜಕೀಯ ನಿರ್ಣಯ ಹಾಗೂ ವಿಮರ್ಶಾ ವರದಿ ನಮಗೆ ನೀಡಿದ ಕರೆಯಂತೆ ದೇಶದಲ್ಲಿ ಬಂಡವಾಳಶಾಹಿ ಭೂಮಾಲಕ ಪ್ರಭುತ್ವಕ್ಕೆ ದಿಟ್ಟ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಬೆಸೆಯುವ ಕೆಲಸದ ಒಂದು ಭಾಗ ನಮ್ಮ ಪಕ್ಷ ಸಮರ್ಥವಾಗಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವುದು. ಜಲಂಧರ್‌ನ ರಾಜಕೀಯ ಧೋರಣೆ ಹಾಗೂ ಸಾಲ್ಕಿಯಾದಲ್ಲಿನ ಸಂಘಟನಾ ಕಣ್ಣೋಟ ನಮ್ಮ ಪಕ್ಷದ ಬೆಳವಣಿಗೆಯಲ್ಲಿ ಒಂದು ಪ್ರಮುಖ ತಿರುವು. ಈ ದೃಷ್ಟಿಕೋನವನ್ನು ಎಷ್ಟರಮಟ್ಟಿಗೆ ರಾಜ್ಯಸಮಿತಿಗಳು ಅನುಸರಿಸಲು, ಜಾರಿಗೊಳಿಸಲು ಪ್ರಯತ್ನಿಸಿದ್ದಾವೆಯೊ ಅಷ್ಟರಮಟ್ಟಿಗೆ ನಮಗೆ ಉತ್ತಮ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗಿದೆ. ಆದುದರಿಂದ ನಮ್ಮ ಸಮ್ಮೇಳನಗಳಲ್ಲಿ ಈ ಕಣ್ಣೋಟವನ್ನು ನಾವು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಳ್ಳಲು, ಜಾರಿಗೊಳಿಸಲು ಸಾಧ್ಯವಾಗಿದೆಯೆಂಬುದರ ವಿಮರ್ಶೆಯಾಗಬೇಕು.

ಬೆಳವಣಿಗೆಯ ಸಮಸ್ಯೆ

ಜನ ಸಮುದಾಯದ ಮಧ್ಯೆ ಪ್ರತಿ ರಾಜ್ಯದಲ್ಲಿಯೂ ನಮ್ಮ ಪಕ್ಷದ ಪ್ರಭಾವ ವಿಸ್ತರಿಸುತ್ತಿದೆ. ನಮ್ಮ ನೇತೃತ್ವದ ಸಾಮೂಹಿಕ ಸಂಘಟನೆಗಳು ಬಲಗೊಳ್ಳುತ್ತಿವೆ. ಆದರೆ ಅದೇ ಸಮಯದಲ್ಲಿ ಪಕ್ಷದ ಪ್ರಭಾವಕ್ಕೆ ಅನುಗುಣವಾಗಿ ಸಾಮೂಹಿಕ ಸಂಘಟನೆಗಳು ಬೆಳೆಯುತ್ತಿಲ್ಲ ಹಾಗೆಯೇ ಪಕ್ಷವೂ ಬೆಳೆಯುತ್ತಿಲ್ಲ.

ಆದುದರಿಂದ ನಮ್ಮ ಪಕ್ಷ ಎದುರಿಸುತ್ತಿರುವ ಸಮಸ್ಯೆಗಳು ಭಾಗಶಃವಾಗಿಯಾದರು ಬೆಳವಣಿಗೆಯ ಸಮಸ್ಯೆ ನಮ್ಮನ್ನು ಅನುಸರಿಸಲು ಸಿದ್ಧವಿರುವ, ನಮ್ಮ ಸಾಮೂಹಿಕ ಸಂಘಟನೆಗಳ ನಾಯಕತ್ವದಲ್ಲಿ ದಿನನಿತ್ಯದ ಹೋರಾಟಗಳಲ್ಲಿ ತೊಡಗಿರುವ ಸಾವಿರಾರು ಜನರನ್ನು ಆಕರ್ಷಿಸಿ ಪಕ್ಷದ ಸದಸ್ಯರನ್ನಾಗಿ ಮಾಡುವುದು ಹೇಗೆಂಬ ಸಮಸ್ಯೆಗಳು.

ಈ ಪ್ರಭಾವದ, ಸಾಮೂಹಿಕ ಸಂಘಟನೆಯ ಬಲವನ್ನು ಪಕ್ಷಕ್ಕೆ ಸೆಳೆದು ಪಕ್ಷವನ್ನು ವಿಸ್ತರಿಸುವುದು. ಅದೇ ರೀತಿಯಲ್ಲಿ ವಿಸ್ತಾರಗೊಂಡ ಪಕ್ಷಕ್ಕೆ ಸೈದ್ಧಾಂತಿಕ ರಾಜಕೀಯ ಶಿಕ್ಷಣ ನೀಡಿ ದೃಢಗೊಳಿಸುವುದು ಹೇಗೆಂಬ ಪ್ರಶ್ನೆಯನ್ನು ಪರಿಹರಿಸುವ ಮಾರ್ಗದಲ್ಲಿ ಸಾಲ್ಕಿಯಾ ಪ್ಲೀನಂ ಒಂದು ಮೈಲಿಗಲ್ಲು. ಸಾಲ್ಕಿಯಾ ಪ್ಲೀನಂ ವರದಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ವಿಸ್ತರಣೆ ಹಾಗೂ ದೃಢೀಕರಣದ ಮಾರ್ಗದಲ್ಲಿ ಹಿಂದಿನಿಂದ ಬಂದ ಪರಿಷ್ಕರಣವಾದಿ ಸಂಘಟನಾ ಧೋರಣೆಗಳು ಹಾಗೆಯೇ ಎಡಪಂಥವಾದಿ ಸಂಘಟನಾ ಧೋರಣೆಗಳು ದೊಡ್ಡ ಅಡ್ಡಿಯಾಗಿವೆ.

ಈ ಭೂತ ಕಾಲ ನಮ್ಮನ್ನು ಈಗಲೂ ಕಾಡಿಸುತ್ತಿದೆ. ಪ್ರಜಾಸತ್ತಾತ್ಮಕ ಕೇಂದ್ರೀಕರಣದ ಕ್ರಾಂತಿಕಾರಿ ಸಂಘಟನಾ ತತ್ವಗಳಿಗೆ ಪರಕೀಯವಾದ ಪರಿಷ್ಕರಣವಾದೀ ವಿರೂಪಗಳ ವಿರುದ್ಧ, ಕಾರ್ಯಾಚರಣೆಯ ವಿರುದ್ಧ ನಮ್ಮ ಹೋರಾಟ ಇನ್ನೂ ಮುಗಿದಿಲ್ಲ." ಎಂದು ಹೇಳಿತು ಮತ್ತು ಆರೋಪಗಳನ್ನು ಪಟ್ಟಿ ಮಾಡಿತು.

1. ಪಕ್ಷದ ಸಂಘಟನೆಯ ಮೂಲಾಧಾರತತ್ವವಾದ ಪ್ರಜಾಸತ್ತಾತ್ಮಕ ಕೇಂದ್ರವಾದಕ್ಕೆ ವಿರುದ್ಧವಾದ ಫೆಡರಲಿಸಂ ಒಕ್ಕೂಟವಾದ ವಿವಿಧ ಪ್ರದೇಶಗಳ ಅಥವಾ ಸಂಘಟನೆಗಳ (ಒಕ್ಕೂಟವೆಂದು ಪಕ್ಷವನ್ನು ಪರಿಗಣಿಸುವುದು (ಮುಂದೆ ಇದನ್ನು ದೀರ್ಘವಾಗಿ ವಿವರಿಸಲಾಗಿದೆ)

2. ಎಲ್ಲಾ ವಿಭಿನ್ನ, ಪರಕೀಯ ಸಿದ್ಧಾಂತಗಳ ವಿರುದ್ಧ ನಿರಂತರ ಹೋರಾಟ ನಡೆಸಲು ಪಕ್ಷ ಕೇಂದ್ರದ ವೈಫಲ್ಯತೆ. ಪಕ್ಷವನ್ನು ವಿಸ್ತರಿಸಲು ಪ್ರಾಥಮಿಕವಾದ ವರ್ಗ ಸಂಘರ್ಷಗಳಲ್ಲಿ ಪಕ್ಷದ ಶಾಲೆಗಳಲ್ಲಿ ಹಾಗೂ ಕಠಿಣ ವಿಷಯಗಳ ಮೇಲಿನ ಪಕ್ಷದ ಪ್ರಕಟಣೆಗಳು ಮೂಡಿಸಿದ ಪ್ರಜ್ಞೆಯ ಆಧಾರದ ಮೇಲೆ ಮಾತ್ರವೇ ಅವಲಂಬಿತವಾಗಿದೆ.

ಪಕ್ಷದ ರಾಜಕೀಯ ಧೋರಣೆಗಳನ್ನು ರೂಪಿಸುವುದರಲ್ಲಿ ಹಾಗೂ ಅದನ್ನು ಜಾರಿಗೊಳಿಸುವುದರಲ್ಲಿ ಪಕ್ಷದ ಬಹುಭಾಗ ಸದಸ್ಯರನ್ನು ಒಳಗೊಳ್ಳಲು ಯೋಜಿತವಾದ ಯಾವುದೇ ಕಾರ್ಯಕ್ರಮವಿಲ್ಲ. ಈ ಪ್ರವೃತ್ತಿ ವರ್ಷದಿಂದ ವರ್ಷಕ್ಕೆ ಸದಸ್ಯರು ನವೀಕರಣ ಮಾಡದಿರಲು ಕಾರಣವಾಗಿದೆ.

3. ಅನೇಕ ರಾಜ್ಯಗಳಲ್ಲಿ ಪಕ್ಷದ ಕೆಳ ಘಟಕಗಳಿಗೆ ವರದಿ ನೀಡುವುದು ಹಾಗೂ ಘಟಕದಿಂದ ವರದಿಯನ್ನು ಪಡೆಯುವುದು ಇಲ್ಲವೇ ಇಲ್ಲ. ಜನ ಸಮುದಾಯದ ಹೋರಾಟಗಳ, ಚಳುವಳಿಗಳನ್ನು ವಿಮರ್ಶಿಸುವುದು ಹಾಗೂ ಪಕ್ಷಕ್ಕೆ ತನ್ನದೇ ಚಟುವಟಿಕೆ ಅನುಭವದ ಮೂಲಕವೇ ಕಲಿಸುವುದನ್ನು ಕೂಡ ಕೈಬಿಡಲಾಗಿದೆ.

ಇದು ಪಕ್ಷದ ಒಳಗೆ ಟೀಕೆ ಹಾಗೂ ಸ್ವಯಂ ಟೀಕೆಯನ್ನು ಕೈಬಿಡುವುದಕ್ಕೆ, ಆ ಮೂಲಕ ತನ್ನನ್ನು ತಾನೇ ನಿರಂತರವಾಗಿ ತಿದ್ದಿಕೊಳ್ಳುವ, ತನ್ನ ತಿಳುವಳಿಕೆಯನ್ನು ಹಾಗೂ ಕೆಲಸವನ್ನೇ ಉತ್ತಮಗೊಳಿಸಿಕೊಳ್ಳುವ ಒಂದು ಮುಖ್ಯ ಸಾಧನವೇ ಇಲ್ಲದಂತಾಗುತ್ತದೆ. ನಿರಂತರವಾದ ವಿಮರ್ಶೆ ಹಾಗೂ ಸ್ವಯಂಟೀಕೆಯ ಅಭಾವದಿಂದ ಪಕ್ಷದ ಚಟುವಟಿಕೆಗಳನ್ನು ಹಾಗೂ ವರದಿಗಳನ್ನು ಅವಶ್ಯ ಎಚ್ಚರವಿಲ್ಲದೆ ತಯಾರಿಸುವ ಹಾಗೂ ನಾಯಕತ್ವ ಮಾಡಿದ್ದೆಲ್ಲವನ್ನೂ ಸಮರ್ಥಿಸುವ ಪದ್ಧತಿ ಬೆಳೆಯುತ್ತದೆ.

ಟೀಕಾರಹಿತವಾದ ಸಾಧನೆಗಳ ಏಮುಖದ ವರದಿ ಪಕ್ಷದ ಪ್ರಗತಿಗೆ ಅಡ್ಡಿಯಾಗುತ್ತದೆ. ಸಾಮೂಹಿಕ ತೀರ್ಮಾನಕ್ಕೆ ಹಾಗೂ ಐಕ್ಯತೆಗೆ ಬಾಧಕವಾಗುತ್ತದೆ. ಆದುದರಿಂದ ಪಕ್ಷದ ಒಳಗೆ ಟೀಕೆ ಹಾಗೂ ಸ್ವಯಂ ಟೀಕೆಗಳನ್ನು ಪುನಃ ಸ್ಥಾಪಿಸಬೇಕಾಗಿದೆ.

4. ಬಹಳಷ್ಟು ರಾಜ್ಯ ಸಮಿತಿಗಳಲ್ಲಿ ಸಾಮೂಹಿಕ ಕಾರ್ಯಾಚರಣೆಯ, ಕೆಲಸದ ವಿಭಜನೆಯ ಅಭಾವ ವೈಯುಕ್ತಿಕ ಕಾರ್ಯ ನಿರ್ವಹಣೆಗೆ ಎಡೆಕೊಟ್ಟಿದೆ. ಸಮಿತಿಗೆ ಬದಲಾಗಿ ಕಾರ್ಯದರ್ಶಿ ಕೆಲಸ ಮಾಡುತ್ತದೆ ಇದರಿಂದ ಅಧಿಕಾರದ ಕೇಂದ್ರೀಕರಣ. ಕೆಲಸದಲ್ಲಿ ಅದಕ್ಷತೆ ಹಾಗೂ ಅಧಿಕಾರಶಾಹಿಗೆ ಕಾರಣವಾಗುತ್ತದೆ.

5 ಪಕ್ಷದ ಸದಸ್ಯರು, ಕಾರ್ಯಕರ್ತರಿಗೆ ನಮ್ಮ ಪಕ್ಷದ ಧೋರಣೆ ಹಾಗೂ ನಿಲುವುಗಳನ್ನು ರೂಪಿಸುವುದರಲ್ಲಿ ನಮ್ಮ ಪಾತ್ರವೂ ಇದೆ ಎಂದು ಭಾವಿಸಿಲ್ಲ. ಅವರ ತಿಳುವಳಿಕೆ, ಅನುಭವ ಹಾಗೂ ಕೆಲಸಗಳಿಗೆ ಸರಿಯಾದ ಮನ್ನಣೆ ಸಿಗುತ್ತಿದೆ ಎಂದೆನಿಸಿಲ್ಲ ಇದು ಪಕ್ಷದ ಐಕ್ಯತೆಗೆ ಅಡ್ಡಿಯಾಗಿದೆ. ಹಾಗೂ ನಾಯಕತ್ವವು ಜನಸಮುದಾಯದ ಅನುಭವದಿಂದ ಪಾಠ ಕಲಿಯಲು ಅಡ್ಡಿಯಾಗಿದೆ. ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು, ಪಕ್ಷದ ಆಂತರಿಕ ಪ್ರಜಾಪ್ರಭುತ್ವವನ್ನು ಕೇವಲ ಆಚಾರವೆಂಬ ಮಟ್ಟಕ್ಕೆ ಇಳಿಸುತ್ತದೆ.

ಮೇಲೆ ತಿಳಿಸಿದ ವಿವರಗಳ ಜೊತೆಗೆ ಪಕ್ಷದ ವರ್ಗರಚನೆ ಕಾರ್ಮಿಕವರ್ಗದಿಂದ. ಹೆಚ್ಚು ಜನ ಸದಸ್ಯರನ್ನು ನೋಂದಾಯಿಸದಿರುವುದನ್ನು, ಹೊಸ ಸದಸ್ಯರನ್ನು ನೋಂದಾಯಿಸಿದಾಗ ಅವರೊಡನೆ ಹಿಂದಿನ ಅನುಭವವನ್ನು ಹಂಚಿಕೊಳ್ಳಲಾಗದಿರುವುದನ್ನು, ಬಲವಾದ ಸೈದ್ಧಾಂತಿಕ-ರಾಜಕೀಯ ತರಬೇತಿ ನೀಡದಿರುವುದನ್ನು ಸಾಲ್ಕಿಯಾ ಪ್ಲೀನಂ ಗುರುತಿಸಿದೆ.

ಪಕ್ಷದ ಘಟಕಗಳ ಕೆಲಸ ಅದರಲ್ಲಿಯೂ ಶಾಖೆಗಳ ಕೆಲಸದಲ್ಲಿ ತೀವ್ರ ಬದಲಾವಣೆಯಾಗಬೇಕಾಗಿರುವುದನ್ನು, ಪಕ್ಷದ ಪತ್ರಿಕೆಗಳಲ್ಲಿ ನಾಯಕತ್ವದಲ್ಲಿರುವ ಸಂಗಾತಿಗಳು ಬರೆಯದಿರುವುದನ್ನು. ಸಂಪಾದಕೀಯ ಕೆಲವೇ ಸಂಗಾತಿಗಳ ಜವಾಬ್ದಾರಿಯಾಗುವುದನ್ನು, ಪಕ್ಷದ ಸರ್ವಸದಸ್ಯರ ಸಭೆಯಲ್ಲಿ ವರದಿ ಮಾಡುವ ಕೆಲಸವೂ ಕೆಲವೇ ಸಂಗಾತಿಗಳಿಗೆ ಸೀಮಿತವಾಗುವುದನ್ನೂ ಗುರುತಿಸಿದೆ.

ಈ ತಪ್ಪುಗಳನ್ನು ತಿದ್ದಿಕೊಳ್ಳುವ ದಾರಿಯನ್ನು ನಿರ್ಮಿಸಿ ತೋರಿಸಿದೆ.

ಪಕ್ಷದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ

"ಪ್ರಜಾಸತ್ತಾತ್ಮಕ ಕೇಂದ್ರವಾದ"ವೆಂಬ ನಮ್ಮ ಪಕ್ಷದ ಸಂಘಟನೆಯ ಸಾರಸರ್ವಸ್ವಕ್ಕೂ ಪಕ್ಷದ ಪತ್ರಿಕೆಗಳಿಗೂ ಏನುಸಂಬಂಧ ? ಎಂದು ಕೇಳಬಹುದು. ಪಕ್ಷದಲ್ಲಿ ಪ್ರಜಾಸತ್ತೆ ಹಾಗೂ ಈ ಜೀವಂತ ಪ್ರಜಾಸತ್ತೆಯ ಮೇಲೆ ಆಧಾರಗೊಂಡ ಕೇಂದ್ರವಾದದ ಬೆಳವಣಿಗೆಯಲ್ಲಿ ಒಟ್ಟಿನಲ್ಲಿ ಸಂಘಟನೆಯ ಜೀವಂತಿಕೆಯಲ್ಲಿ ಪತ್ರಿಕೆಗಳ ಪಾತ್ರ ಎಷ್ಟು ಮಹತ್ವದ್ದೆಂಬುದನ್ನು ಲೆನಿನ್ ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ. ಜಗತ್ತಿನಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸುವುದಕ್ಕಾಗಿ ಅವರಿಂದಲೇ ರೂಪುಗೊಂಡ "ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯ"ದ ಮೂಲಕ ಈ ಎಲ್ಲಾ ಅನುಭವವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಈ ದಾಖಲೆಯಲ್ಲಿ ಅವರು ಹೇಳುತ್ತಾರೆ.

"ಕಮ್ಯುನಿಸ್ಟ್ ಪತ್ರಿಕೆಗಳ ಅದರಲ್ಲಿಯೂ ನಮ್ಮ ಪ್ರಧಾನ ಪ್ರತಿಕೆಯ ಸರ್ವವ್ಯಾಪೀ ಸಂಘಟನಾ ಕೆಲಸವನ್ನು ಕ್ರಾಂತಿಕಾರಿ ದೃಷ್ಟಿಕೋನದಿಂದ ನಿರ್ವಹಿಸುವುದರ ಮೂಲಕವೇ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಸ್ಥಾಪಿಸಲು ಸಾಧ್ಯ, ಮತ್ತು ಕಮ್ಯುನಿಸ್ಟ್ ಪಕ್ಷದಲ್ಲಿ ಸರಿಯಾಗಿ ಕೆಲಸಗಳನ್ನು ಹಂಚಿಕೊಳ್ಳಲು ಸಾಧ್ಯ, ಹಾಗೂ ಆ ಮೂಲಕ ಪಕ್ಷದ ಐತಿಹಾಸಿಕ ಪಾತ್ರವನ್ನು ನಿರ್ವಹಿಸಲು ಸಾಧ್ಯ."

ಪಕ್ಷದ ಸದಸ್ಯರ ಕೆಲಸದಲ್ಲಿ ಬೆಳೆಯುಳ್ಳ ಅನುಭವವನ್ನೂ ಸಂಗ್ರಹಿಸುವುದೇ ಪತ್ರಿಕೆಯ ಉದ್ದೇಶ.

ಪಕ್ಷದ ಸದಸ್ಯರ ಕಮ್ಯುನಿಸ್ಟ್ ಕಾರ್ಯವಿಧಾನಗಳನ್ನು ನಿರಂತರವಾಗಿ ಪುನರ್ವಿಮರ್ಶಿಸುವುದು ಹಾಗೂ ಉತ್ತಮಗೊಳಿಸುವ ಹಾದಿಯಲ್ಲಿ ಮಾರ್ಗದರ್ಶಿಯಾಗಿ ಈ ಅನುಭವದ ನಿರೂಪಣೆಯನ್ನು ಸದಸ್ಯರ ಮುಂದಿಡುವುದೇ ಪತ್ರಿಕೆಯ ಉದ್ದೇಶ. ನಮ್ಮ ಕ್ರಾಂತಿಕಾರಿ ಕೆಲಸದ ಅತ್ಯುತ್ತಮ ಸಂಘಟಕನಾಗಿ ಕೆಲಸ ನಿರ್ವಹಿಸುವುದೆಂದರೆ ಇದೆ.

ಕಮ್ಯುನಿಸ್ಟ್ ಪತ್ರಿಕೆ ಒಂದು ಕಮ್ಯುನಿಸ್ಟ್ ಉದ್ಯಮವಾಗಲು ಯತ್ನಿಸಬೇಕು. ಅದೊಂದು ಕಾರ್ಮಿಕ ವರ್ಗದ ಹೋರಾಟದ ಸಂಘಟನೆಯಾಗಿ, ಕ್ರಾಂತಿಕಾರಿ ಕಾರ್ಮಿಕರ ಪತ್ರಿಕೆಗಾಗಿ ಬರೆಯುವ ಎಲ್ಲಾ ಬರಹಗಾರರ, ಸಂಪಾದಕರ ಕಂಪೋಸಿಟರ್‌ಗಳ, ಮುದ್ರಕರ, ಹಾಗೂ ಹಂಚಿಕೆದಾರರ, ವರದಿಗಾರರ, ದಿನನಿತ್ಯವೂ ಪತ್ರಿಕೆಯ ಪ್ರಚಾರ ಮಾಡುತ್ತಿರುವವರ ಕಾರ್ಯಕಾರಿ ಸಮೂಹವಾಗಿ ರೂಪುಗೊಳ್ಳಬೇಕು. ಕಮ್ಯೂನಿಸ್ಟ್ ಒಂದು ಕಾರ್ಯಶಾಲಿ ಸಮೂಹವಾಗಿ ಪತ್ರಿಕೆ ರೂಪುಗೊಳ್ಳಬೇಕಾದರೆ, ಹೋರಾಟದ ಸಾಧನವಾಗಬೇಕಾದರೆ, ಅನೇಕ ವಾಸ್ತವಿಕ ಕ್ರಮಗಳು ಅಗತ್ಯ.

ಪತ್ರಿಕೆಗಾಗಿ ದುಡಿಯುವಾಗ ಹಾಗೂ ತ್ಯಾಗ ಮಾಡುವಾಗ ಒಬ್ಬ ಕಮ್ಯುನಿಸ್ಟನು ಪತ್ರಿಕೆಯೊಂದಿಗೆ ಅತ್ಯಂತ ಹತ್ತಿರದ ಸಂಬಂಧವನ್ನು ಹೊಂದಿರಬೇಕು.

ಕಾನೂನು ಬದ್ಧ ಸಾಮೂಹಿಕ ಕ್ರಾಂತಿಕಾರಿ ಪಕ್ಷದಲ್ಲಿ ವಿಸ್ತಾರವಾದ ಪ್ರಸಾರವನ್ನು ಹಾಗೂ ದೃಢವಾದ ಸಂಘಟನೆಯನ್ನು ಪಡೆಯುವ ಹಂತದವರೆಗೆ, ಸ್ವತಃ ತಾನೇ ಕಮ್ಯೂನಿಸ್ಟ್ ಚಳುವಳಿಯ ಬಲವಾದ ಆಧಾರ ಸ್ತಂಭವಾಗುವವರೆಗೆ, ಅದರ ಅಭಿವೃದ್ಧಿಗೆ ಹಾಗೂ ಆಂತರಿಕ ಸುಧಾರಣೆಗೆ ಅಗತ್ಯವಾದ ಅನುಕೂಲಗಳು ಪಕ್ಷದ ಸದಸ್ಯ ಸಮೂಹದಿಂದ ನಿರಂತರವಾಗಿ ದೊರೆಯುತ್ತಿರಬೇಕು.

ಕಾರ್ಖಾನೆಯಲ್ಲಿ, ಅದರೊಳಗಿನ ನಿಮ್ಮ ವಿಭಾಗದಲ್ಲಿ ನಡೆಯುವ ಯಾವುದೇ ಸಾಮಾಜಿಕ-ಆರ್ಥಿಕ ಸಂಗತಿಯನ್ನು-ಒಂದು ಆಕ್ಸಿಡೆಂಟ್‌ನಿಂದ ಹಿಡಿದು ಕಾರ್ಖಾನೆಯ ಸರ್ವಸದಸ್ಯರ ಸಭೆಯವರೆಗೂ. ಒಬ್ಬ ಅಪ್ರೆಂಟಿಸ್‌ಗೆ ಹೀನವಾಗಿ ನಡೆಸಿಕೊಂಡಿದ್ದರಿಂದ ಹಿಡಿದು ಕಾರ್ಖಾನೆಯ ಬ್ಯಾಲೆನ್ಸ್‌ಶೀಟ್‌ವರೆಗೂ ಎಲ್ಲವನ್ನು ತಕ್ಷಣವೇ ಪತ್ರಿಕೆಗೆ ಬರೆದು ಕಳುಹಿಸಬೇಕು. ಕಾರ್ಮಿಕ ಸಂಘದಲ್ಲಿರುವ ಪಕ್ಷದ ಫ್ರಾಕ್ಷನ್ ತನ್ನ ಎಲ್ಲಾ ನಿರ್ಣಯಗಳನ್ನು, ಕಾರ್ಮಿಕ ಸಂಘದ ಪದಾಧಿಕಾರಿಗಳ ನಿರ್ಣಯಗಳನ್ನೂ, ಹಾಗೂ ತಮ್ಮ ಶತ್ರುಗಳ ರೂಪವನ್ನು ಬಯಲಿಗೆಳೆಯುವ ಅವರ ಚಟುವಟಿಕೆಗಳನ್ನು ವರದಿ ಮಾಡಬೇಕು.

ಪತ್ರಿಕೆಗಾಗಿ ಚಂದಾದಾರರನ್ನು ಪಡೆಯುವುದನ್ನು ಒಂದು ನಿರಂತರ ವ್ಯವಸ್ಥೆಯನ್ನಾಗಿ ಮಾಡಬೇಕು.

ಮೊದಲನೆಯದಾಗಿ, ಕಾರ್ಮಿಕರ ಮನಸ್ಸನ್ನು ಕಲಕುವ ಪ್ರತಿ ಸಂದರ್ಭವನ್ನೂ, ವಿಶೇಷ ಘಟನೆಯೊಂದರಿಂದ ಕಾರ್ಮಿಕರ ರಾಜಕೀಯ, ಸಾಮಾಜಿಕ ಪ್ರಜ್ಞೆ ಎಚ್ಚರಗೊಂಡ ಪ್ರತಿಸಂದರ್ಭವನ್ನು ಉಪಯೋಗಿಸಬೇಕು.

ಪ್ರತಿ ದೊಡ್ಡ ಮುಷ್ಕರ, ಲಾಕೌಟ್‌ಗಳ ನಂತರವೂ, ಆ ಬಗ್ಗೆ ಪಕ್ಷದ ಪತ್ರಿಕೆಯಲ್ಲಿ ಕಾರ್ಮಿಕರ ಹಿತಗಳನ್ನು ಬಹಿರಂಗವಾಗಿ ಶಕ್ತಿಶಾಲಿಯಾಗಿ ಉಪಯೋಗಿಸಿದುದನ್ನು ಬಳಸಿಕೊಂಡು ಈ ಮುಷ್ಕರದಲ್ಲಿ ಭಾಗವಹಿಸಿದವರ ನಡುವೆ ಪ್ರಚಾರ ಕೈಗೊಳ್ಳಬೇಕು. ಕಮ್ಯುನಿಸ್ಟರು ಕೆಲಸ ಮಾಡುತ್ತಿರುವ ಕಾರ್ಮಿಕ ಸಂಘಗಳಲ್ಲಿ ಪಕ್ಷದ ಘಟಕಗಳು ಕೆಲಸ ಮಾಡುತ್ತಿರುವ ಕೈಗಾರಿಕೆಗಳಲ್ಲಿ ಮಾತ್ರವಲ್ಲದೇ ಕಾರ್ಮಿಕರ ತಂಡಗಳು ಮುಷ್ಕರದಲ್ಲಿ ತೊಡಗಿದ ಕಾರ್ಮಿಕರ ಮನೆಯಿಂದ ಮನೆಗೆ ಹೋಗಿ ಪತ್ರಿಕೆಗಾಗಿ ಪ್ರಚಾರ ನಡೆಸಬೇಕು.

ಎರಡನೆಯದಾಗಿ ಪ್ರತಿ ಚುನಾವಣಾ ಸಂದರ್ಭದ ಪ್ರಚಾರ ಪ್ರಕ್ಷೋಭೆಯ ಸಮಯದಲ್ಲಿ ಹಾಗೂ ನಂತರ, ಪತ್ರಿಕೆಯ ಪ್ರಚಾರಕ್ಕಾಗಿ ಸಂಘಟಿಸಿದ ತಂಡಗಳು ಕಾರ್ಮಿಕರ ಮನೆಯಿಂದ ಮನೆಗೆ ಹೋಗುತ್ತಾ ವ್ಯವಸ್ಥಿತ ಪ್ರಚಾರ ನಡೆಸಬೇಕು.

ಮೂರನೆಯದಾಗಿ, ಪ್ರತಿ ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಬೆಲೆಏರಿಕೆ, ನಿರುದ್ಯೋಗ ಮತ್ತಿತರ ಕಷ್ಟಗಳು ಬಹು ಸಂಖ್ಯೆಯ ಜನರನ್ನೂ ಬಾಧಿಸುತ್ತಿದ್ದಾಗ ವಿವಿಧ ಕಾರ್ಖಾನೆಗಳ ಕಾರ್ಮಿಕರನ್ನು ತಂಡಗಳಾಗಿ ಸಂಘಟಿಸಿ ಮನೆಯಿಂದ ಮನೆಗೆ ಪ್ರಚಾರ ನಡೆಸಬೇಕು. ಪ್ರತಿ ತಿಂಗಳ ಕೊನೆಯ ವಾರ ಇಂತಹ ಪ್ರಚಾರಕ್ಕೆ ಅತ್ಯಂತ ಸೂಕ್ತವೆಂದು ಅನುಭವದಿಂದ ತಿಳಿದು ಬಂದಿದೆ.

ಯಾವುದೇ ಸ್ಥಳೀಯ ಗುಂಪು, ಇಂತಹ ಒಂದು ಅವಕಾಶವನ್ನು -ತಿಂಗಳಕೊನೆಯನ್ನು- ಪತ್ರಿಕೆಗಾಗಿ ಪ್ರಚಾರ ನಡೆಸುವುದಕ್ಕಾಗಿ ಉಪಯೋಗಿಸುವುದರಲ್ಲಿ ವಿಫಲರಾದರೂ ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆಯಲ್ಲಿ ಒಂದು ದೊಡ್ಡ ತಪ್ಪು ಸಗಿದಂತೆಯೇ ಸರಿ.

ಲೆನಿನ್ನರ ಅಕ್ಟೋಬರ್ ಕ್ರಾಂತಿಯನ್ನು ನಿರ್ವಹಿಸಿದ ಬೊಲ್ಷೆವಿಕ್ ಪಕ್ಷದ, ನಂತರದ ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಈ ಮಾರ್ಗದರ್ಶನಗಳನ್ನು ದಿನನಿತ್ಯದ ಚಳುವಳಿಯಲ್ಲಿ ಚಟುವಟಿಕೆಯಲ್ಲಿ ಅಳವಡಿಸಿದರೆ ಮಾತ್ರ ಪಕ್ಷ ಬೆಳೆಯಲು ಸಾಧ್ಯ.

ಕರ್ನಾಟಕದಲ್ಲಿ ಸಿ.ಪಿ.ಐ.(ಎಂ):

ಕರ್ನಾಟಕ ಆಂಧ್ರಪ್ರದೇಶದಂತೆಯೇ ಅಖಿಲ ಕಾಂಗ್ರೆಸ್ ಆಳ್ವಿಕೆ ಪಡೆದ ಹೆಗ್ಗಳಿಕೆಯನ್ನು ಪಡೆದಿದೆ. 1979-80 ರಲ್ಲಿ ಕೆಲವು ತಿಂಗಳಷ್ಟೇ ಸರ್ವಾಧಿಕಾರಿ ಕಾಂಗ್ರೆಸ್ (ಐ) 'ಹೈಕಮಾಂಡ'ಗೆ ಸವಾಲೆಸೆದ ಒಂದು ಪಕ್ಷದ ಮುಖಂಡರು ಮುಖ್ಯಮಂತ್ರಿಯಾಗಿದ್ದರು (ದೇವರಾಜ ಅರಸು). 1980 ರ ಲೋಕಸಭಾ ಚುನಾವಣೆಯ ನಂತರ ಅವರೂ ಬಿಟ್ಟುಕೊಡಬೇಕಾಯಿತು.

ರಾಜಕೀಯದ ಹೊರಗೆ ಕೂಡಾ ಕರ್ನಾಟಕ ದಕ್ಷಿಣಭಾರತದ ಇತರ ಪ್ರತಿಯೊಂದು ರಾಜ್ಯಕ್ಕೆ ಹೋಲಿಸಿದರೂ ಹಿಂದುಳಿದಿದೆ. ದೀರ್ಘ ಕಾಲ ತೀವ್ರಗಾಮೀ ಸಾಮಾಜಿಕ-ಸಾಂಸ್ಕೃತಿಕ ಆಂದೋಲನಗಳನ್ನು ಕಂಡ ಆಂಧ್ರಪ್ರದೇಶ, ಕೇರಳದ ಮಾತಂತೂ ದೂರವಿರಲಿ, ತಮಿಳುನಾಡು ಕಂಡಂತಹ ಶಕ್ತಿಶಾಲೀ ಜಾತಿ ವಿರೋಧಿ ಮೊದಲಾದ ತೀವ್ರಗಾಮೀ ಸಾಮಾಜಿಕ-ಆರ್ಥಿಕ ಆಂದೋಲನಗಳನ್ನೂ ಅದು ಕಾಣಲೇ ಇಲ್ಲ.

ಆಳುವ ಪಕ್ಷಕ್ಕೆ ರಾಜಕೀಯ ವಿರೋಧ ಸಹಜವಾಗಿಯೇ ಕುರುಡು ಪ್ರವೃತ್ತಿಗಳ ಬಣ್ಣ ಪಡೆದಿದೆ. ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ತೀವ್ರಗಾಮಿತ್ವ ಕೂಡಾ ಹಿಂದುಳಿದ ಜಾತಿಗಳ ಬೇಡಿಕೆಗಳ ಸ್ವರೂಪ ಪಡೆಯುತ್ತದೆ. ದೇವರಾಜ ಅರಸುರಂಥ ಒಬ್ಬ ಮುಖಂಡರು ಕೂಡಾ ತಾನು ತೀವ್ರಗಾಮಿ ಎಂದು ಹೇಳಿಕೊಂಡು 'ವರ್ಗ ಹೋರಾಟ'ದ ಮಾತಾಡುತ್ತಾರೆ ಹಾಗೂ ಹಿಂದುಳಿದ ಜಾತಿಗಳ ಚಳುವಳಿ ಮತ್ತು ಬೇಡಿಕೆಗಳನ್ನು 'ವರ್ಗಹೋರಾಟ'ವೆಂದು ಸಮೀಕರಿಸುತ್ತಾರೆ.

ಇದು ಕ್ರಿಶ್ಚಿಯನ್ ಎಡ ಹಾಗೂ ದಲಿತ ಆಂದೋಲನ ಮುಂತಾದ 'ಎಡ' ತೋರಿಕೆಯ ಚಳುವಳಿಗಳು ಮೊಳಕೆಯೊಡೆದು ಬೆಳೆಯಲು ಫಲವತ್ತಾದ ಮಣ್ಣು ಒದಗಿಸಿದೆ. ಹೆಚ್ಚೆಚ್ಚಾಗಿ 'ಮಾರ್ಕ್ಸ್‌ವಾದದತ್ತ ಆಕರ್ಷಿತರಾಗುತ್ತಿರುವ ಯುವಕರನ್ನು ಗೆದ್ದುಕೊಳ್ಳಲು ಪ್ರತ್ಯೇಕವಾಗಿ ಹಾಗೂ ಒಟ್ಟಾಗಿ ಕ್ರಿಶ್ಚಿಯನ್ ಎಡ, ದಲಿತರು ಹಾಗೂ ನಕ್ಸಲ್‌ವಾದಿಗಳು ಪ್ರಯತ್ನ ನಡೆಸುತ್ತಿರುವುದರ ಲಕ್ಷಣ ಇತ್ತೀಚೆಗೆ ಕಂಡು ಬಂದಿದೆ. ಈ ಗುಂಪುಗಳ ಹಲ್ಲೆಯ ಗುರಿ ಅವರೆನ್ನುವ 'ಕಮ್ಯುನಿಸ್ಟ್ ಸಂಸ್ಥೆ'. ವಿಶೇಷವಾಗಿ 'ಮಾರ್ಕ್ಸ್‌ವಾದ-ಲೆನಿನ್‌ವಾದದ ಕ್ರಾಂತಿಕಾರೀ ಸಿದ್ಧಾಂತಕ್ಕೆ ವಿಶ್ವಾಸ ದ್ರೋಹ ಬಗೆಯುವ' ಮಂದಿಯೆಂದು ಅವರು ಆಪಾದಿಸುವ ಸಿ.ಪಿ.ಐ.(ಎಂ).

ಅನುಕೂಲ ಸನ್ನಿವೇಶ

ಬೂರ್ಜ್ವಾ-ಭೂಮಾಲಕ ರಾಜಕೀಯ ಪಕ್ಷಗಳ ಬಹಿರಂಗ ಕುರುಡು ಕಂದಾಚಾರಿ ತತ್ವಗಳನ್ನು ಮತ್ತು ಕೆಲವು ಕ್ರಿಶ್ಚಿಯನ್ ಗುಂಪುಗಳು, ದಲಿತರು ಹಾಗೂ ನಕ್ಸಲ್‌ವಾದಿಗಳ 'ಎಡಪಂಥೀಯ'ವೆಂಬಂತೆ ಕಾಣುವ ತತ್ವ ವಿಚಾರಗಳನ್ನು ಬಯಲಿಗೆಳೆಯದೆ ಎಡ ಮತ್ತು ಪ್ರಜಾಪ್ರಭುತ್ವವಾದೀ ಐಕ್ಯತೆ ಮತ್ತು ಸಾಮೂಹಿಕ ಕ್ರಾಂತಿಕಾರೀ ಪಕ್ಷ ಕಟ್ಟುವ ಜಾಲಂಧರ್ ಮತ್ತು ಸಾಲ್ಕಿಯಾ ಮಾರ್ಗವನ್ನು ಈ ರಾಜ್ಯಕ್ಕೆ ಅನ್ವಯಿಸಿ ಜಾರಿಗೊಳಿಸಲು ಸಾಧ್ಯವಿಲ್ಲ.



ಜನವರಿ 26-31-1982

ಪಕ್ಷದ 11ನೇ ವಿಜಯವಾಡ ಮಹಾಧಿವೇಶನ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸ್ಥಿತಿಯ ಬಗ್ಗೆ ಅದು ಎದುರಿಸಬೇಕಾದ ಸವಾಲುಗಳ ಬಗ್ಗೆ ಸ್ಪಷ್ಟ ಉಲ್ಲೇಖ ಮಾಡಿದ ಮಹಾಧಿವೇಶನಗಳಲ್ಲೆ ಪ್ರಮುಖವಾದುದು.

ರಾಜ್ಯದ ಸಾಮಾಜಿಕ-ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪಕ್ಷದ ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾ ಸ್ಥಿತಿಯ ಬಗ್ಗೆ ಕ್ಷ-ಕಿರಣ ಬೀರಿದೆ- ಪಕ್ಷದ ಬೆಳವಣಿಗೆಗೆ ಮಾರ್ಗದರ್ಶಕ ಸೂತ್ರಗಳನ್ನು ನೀಡಿದೆ.

ರಾಜ್ಯದ 13ನೇ ಸಮ್ಮೇಳನ ನಡೆಯುವ ಸಂದರ್ಭದಲ್ಲಿ ಇದರಲ್ಲಿ ಬೊಟ್ಟು ಮಾಡಿ ತೋರಿಸಿದ ದೋಷಗಳ ನಿವಾರಣೆಯ ಬಗ್ಗೆ, ಎದುರಿಸಬೇಕಾದ ಸವಾಲುಗಳ ಬಗ್ಗೆ ಗಂಭೀರ ಗಮನ ಹರಿಸಬೇಕಾಗಿದೆ.

1982ರ ಜನವರಿ 26 ರಿಂದ 31ರವರೆಗೆ ಜರುಗಿದ

11 ನೇ ಮಹಾಧಿವೇಶನದ

ರಾಜಕೀಯ-ಸಂಘಟನಾ ವರದಿಯ

ಕರ್ನಾಟಕ ಕುರಿತಾದ ವರದಿ

ಆದರೆ ಇತ್ತೀಚಿನ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬೆಳವಣಿಗೆಗಳು, ಈ ತತ್ವ ವಿಚಾರಗಳ ವಿರುದ್ಧ ಯಶಸ್ವೀ ಹೋರಾಟಕ್ಕೆ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಕ್ರೋಢೀಕರಣದ ಕೆಲಸಕ್ಕೆ ಹಾಗೂ ಸಿಪಿಐ(ಎಂ)ನ್ನು ಒಂದು ಸಾಮೂಹಿಕ ಕ್ರಾಂತಿಕಾರೀ ಪಕ್ಷವಾಗಿ ಬೆಳೆಸಲು ಅನುಕೂಲಕರವಾದ ಒಂದು ಸನ್ನಿವೇಶವನ್ನು ನಿರ್ಮಿಸಿವೆ. ವಿವಿಧ ಎಡ ಇತರ ಸರ್ವಾಧಿಕಾರ-ವಿರೋಧೀ ಶಕ್ತಿಗಳ ಐಕ್ಯತೆ ಬೆಸೆಯುವ, ಕಾರ್ಮಿಕ ವರ್ಗ, ರೈತಾಪಿ ವರ್ಗ ಇತರ ದುಡಿಮೆಗಾರ ಜನ ವಿಭಾಗಗಳ ಐಕ್ಯ ಸಾಮೂಹಿಕ ಹೋರಾಟಗಳನ್ನು ಮತ್ತು ಆಂದೋಲನಗಳನ್ನು ಸಂಘಟಿಸುವ ಅದರ ಪ್ರಯತ್ನಗಳಿಗೆ ಕಂಡು ಬಂದ ಅನುಕೂಲ ಪ್ರತಿಕ್ರಿಯೆಯಲ್ಲಿ ಇದನ್ನು ನೋಡಬಹುದು. ಅದು 40 ವರ್ಷಗಳ ಹಿಂದೆ ರಾಜ್ಯದಲ್ಲಿ ಪಕ್ಷ ಸ್ಥಾಪನೆಯಾದಂದಿನಿಂದ ಇದುವರೆಗೆ ಎಂದೂ ಕೂಡಾ ರಾಜ್ಯದ ರಾಜಕೀಯದ ಮೇಲೆ ಪ್ರಭಾವ ಬೀರಬಲ್ಲ ಇಂತಹದೊಂದು ಅನುಕೂಲಕರ ಸ್ಥಿತಿಯಲ್ಲಿರಲಿಲ್ಲ.

ಈ ಸಂದರ್ಭದಲ್ಲಿ, ಮೂವತ್ತರ ದಶಕದ ಉತ್ತರಾರ್ಧ ಹಾಗೂ ನಲವತ್ತರ ದಶಕದ ಆರಂಭದಲ್ಲಿ ರಾಜ್ಯದಲ್ಲಿ ಕಮ್ಯುನಿಸ್ಟ್ ಆಂದೋಲನ ಆರಂಭವಾದರೂ ಅದೆಂದೂ ರಾಜ್ಯದ ರಾಜಕೀಯದ ಮೇಲೆ ಪ್ರಭಾವ ಬೀರಿಲ್ಲ ಎಂಬುದನ್ನು ಗಮನಿಸಬೇಕು. ದಕ್ಷಿಣ ಕನ್ನಡ, ಕೋಲಾರ ಮತ್ತು ಬೆಂಗಳೂರು, ಮೈಸೂರು, ಕೊಡಗು ಹಾಗೂ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳ ಸಣ್ಣ ವಿಭಾಗಗಳಲ್ಲಿ ಅಲ್ಲಲ್ಲಿ ಮಾತ್ರವೇ ಪಕ್ಷ ಹೇಳಿಕೊಳ್ಳಬಹುದಾದ ಯಾವುದೇ ಕಾರ್ಮಿಕ ಸಂಘ, ರೈತಸಂಘ ಅಥವಾ ಇತರ ಸಾಮೂಹಿಕ ಸಂಘಟನೆಗಳಿಗೆ ನೇತೃತ್ವ ನೀಡಿತ್ತು. ಅವಿಭಜಿತ ಕಮ್ಯುನಿಸ್ಟ್ ಪಕ್ಷ ದ.ಕ. ಮತ್ತು ಕೋಲಾರದಿಂದ ಮಾತ್ರವೇ ತನ್ನ ಅಭ್ಯರ್ಥಿಗಳನ್ನು ರಾಜ್ಯ ವಿಧಾನಸಭೆಗೆ ಕಳುಹಿಸುವುದು ಸಾಧ್ಯವಾಗಿತ್ತು. ಅವಿಭಜಿತ ಸಿ.ಪಿ.ಐ. ರಾಜ್ಯದ ದೊಡ್ಡ ಕೈಗಾರಿಕಾ ಹಾಗೂ ಶೈಕ್ಷಣಿಕ ಕೇಂದ್ರಗಳನ್ನು ನಿರ್ಲಕ್ಷಿಸಿತ್ತೆಂದೇ ಹೇಳಬೇಕು. ಸಿಪಿಐ(ಎಂ) ಪರಿಷ್ಕರಣವಾದಿಗಳಿಂದ ಪ್ರತ್ಯೇಕವಾದಾಗ ಈ ಪರಿಸ್ಥಿತಿ ಸಿಪಿಐ(ಎಂ) ಪಾಲಿಗೆ ಬಂತು.

ತಪ್ಪು ದೃಷ್ಟಿಕೋನ-ವರ್ತನೆ

ಸಂಘಟನೆ ಕುರಿತು ಸಿಪಿಐ(ಎಂ) 1967 ಹಾಗೂ 1973 ರಲ್ಲಿ ನಿರ್ಣಯಗಳನ್ನು ಅಂಗೀಕರಿಸಿದ ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಅನುಸರಿಸಿದ ಸಂಘಟನಾ ಮಾರ್ಗವನ್ನು ಕರ್ನಾಟಕಕ್ಕೆ ಅನ್ವಯಿಸಲಾಗುತ್ತಿದೆ ಎಂಬ ಹೆಸರಿನಲ್ಲಿ ಈ ಪರಿಸ್ಥಿತಿಯನ್ನು ಸಮರ್ಥಿಸಿಕೊಳ್ಳಲಾಯಿತು. ಕ್ರಾಂತಿಕಾರೀ ದೃಷ್ಟಿಕೋನ ಹಾಗೂ ಪಕ್ಷದ ಸಂಘಟನೆಯ ನೀತಿಗಳ ವೇಷ ತೊಟ್ಟ ಆತ್ಮ ಸಂತೃಪ್ತ ಮನೋಭಾವದಿಂದಾಗಿ ಪಕ್ಷದ ರಾಜ್ಯ ಮುಖಂಡತ್ವ ತನ್ನ ರಾಜಕೀಯ ಹಾಗೂ ಸಂಘಟನಾತ್ಮಕ ಕೆಲಸವನ್ನು ರಾಜ್ಯದ ದೊಡ್ಡ ಕೈಗಾರಿಕಾ ಹಾಗೂ ಸಾಂಸ್ಕೃತಿಕ ಕೇಂದ್ರಗಳಿಗೆ ವಿಸ್ತರಿಸುವ ಸಾಧ್ಯತೆಗಳಿದ್ದ ಸಮಯದಲ್ಲೇ ಹೆಚ್ಚೆಚ್ಚು ತನ್ನದೇ ಚಿಪ್ಪಿನೊಳಗೆ ಮುದುಡಿಕೊಳ್ಳುವಂತಾಯಿತು.

ಈ ತಪ್ಪು ರಾಜಕೀಯ-ಸಂಘಟನಾತ್ಮಕ ದೃಷ್ಟಿಕೋನ, ಇದರ ಜತೆಗೆ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ನಿರಾಕರಿಸುವ ಸಂಘಟನಾ ವರ್ತನೆಗಳು ಪಕ್ಷದೊಳಗೆ ಒಂದು ಗಂಭೀರ ಸ್ಥಿತಿಯನ್ನು ಸೃಷ್ಟಿಸಿದವು. ಸಾಲ್ಕಿಯಾ ದಸ್ತಾವೇಜುಗಳಲ್ಲಿ ತೀವ್ರವಾಗಿ ಟೀಕಿಸಿದ ಒಳಕೂಟ ಪ್ರವೃತ್ತಿ ಮತ್ತು ಅಧಿಕಾರಶಾಹಿ ಪಕ್ಷದ ರಾಜ್ಯ ಮುಖಂಡತ್ವದಲ್ಲಿ ತಾನೇ ತಾನಾಗಿ ರಾರಾಜಿಸುತ್ತಿತ್ತು. ಜಾಲಂಧರ್ ಮಹಾಧಿವೇಶನ ಮೊದಲು ನಡೆದ ಕಳೆದ ರಾಜ್ಯ ಸಮ್ಮೇಳನದಲ್ಲಿ ಹೊಸ ರಾಜ್ಯ ಸಮಿತಿ ಹಾಗೂ ಕಾರ್ಯದರ್ಶಿ ಮಂಡಳಿಯ ರಚನೆಗೆ ಸಂಬಂಧಪಟ್ಟಂತೆ ಸಮ್ಮೇಳನದಲ್ಲಿ ಹಾಜರಿದ್ದ ಪ್ರಧಾನ ಕಾರ್ಯದರ್ಶಿ ಹಾಗೂ ಕಾಂ. ಪಿ. ರಾಮಮೂರ್ತಿಯವರ ಸಲಹೆಯನ್ನು ರಾಜ್ಯ ಸಮಿತಿಯ ಆಗಿನ ಕಾರ್ಯದರ್ಶಿಗಳು ತಿರಸ್ಕರಿಸಿದರು. ಪಕ್ಷದ ಸಂಘಟನೆಯ ಎಲ್ಲಾ ನೀತಿ-ನಿಯಮ ಹಾಗೂ ಸ್ವರೂಪಗಳನ್ನು ಸತತವಾಗಿ ಉಲ್ಲಂಘಿಸುತ್ತಾ ಬಂದಿದ್ದ ಹಿನ್ನೆಲೆಯಲ್ಲಿ ಮತ್ತು ಪಕ್ಷದ ಸಮ್ಮೇಳನದ ನಂತರವೂ ಈ ಪಕ್ಷ ವಿರೋಧಿ ವರ್ತನೆಗಳನ್ನು ಮುಂದುವರಿಸಿದ್ದರಿಂದ ಪಾಲಿಟ್‌ಬ್ಯೂರೋಗೆ ಆ ಸಮ್ಮೇಳನದಲ್ಲಿ ಚುನಾಯಿಸಿದ ರಾಜ್ಯ ಸಮಿತಿಯನ್ನು ಪುನರ್ರಚಿಸಿ, ಈ ಸಂಪೂರ್ಣ ಪ್ರಕ್ರಿಯನ್ನೇ ಕೇಂದ್ರ ಸಮಿತಿಯ ಮುಂದಿಡುವುದಲ್ಲದೆ ಬೇರೆ ಮಾರ್ಗವೇ ಇರಲಿಲ್ಲ. ಸಂಘಟನೆ ಕುರಿತ ಸಾಲ್ಕಿಯಾ ವರದಿಯಲ್ಲಿ ಈ ಪುನರ್ರಚನೆ ಬಗ್ಗೆ ಹೇಳಲಾಗಿದೆ.

ತಮ್ಮ ತಮ್ಮ ಸ್ಥಾನಗಳಿಂದ ತೆಗೆಯಲ್ಪಟ್ಟ ಹಿಂದಿನ ಕಾರ್ಯದರ್ಶಿ ಹಾಗೂ ಇತರ ಮೂವರು ರಾಜ್ಯ ಸಮಿತಿ ಸದಸ್ಯರು ಈ ನಿರ್ಣಯಕ್ಕೆ ಸವಾಲು ಹಾಕಿ ಒಂದು ಪ್ರತಿಸ್ಪರ್ಧಿ 'ಪಕ್ಷ' ಸ್ಥಾಪಿಸಿದರು. ಆದರೆ ಕೆಲವೇ ತಿಂಗಳಲ್ಲಿ ಪಕ್ಷದ ಎಲ್ಲಾ ಸದಸ್ಯರು ಹಾಗೂ ಹಿತೈಷಿಗಳು ಸಿ.ಪಿ.ಐ.(ಎಂ.) ನ ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿಯ ಜತೆಗಿದ್ದಾರೆ. ಪಕ್ಷಾಂತರಿಗಳು ಸಂಪೂರ್ಣವಾಗಿ ದೂರ ತಳ್ಳಲ್ಪಟ್ಟಿದ್ದಾರೆ ಎಂಬುದು ಸ್ಪಷ್ಟವಾಯಿತು. ಪ್ರಧಾನ ಕಾರ್ಯದರ್ಶಿ, ಇತರ ಇಬ್ಬರು ಪಾಲಿಟ್‌ಬ್ಯೂರೋ ಸದಸ್ಯರು, ಇಬ್ಬರು ಮುಖ್ಯಮಂತ್ರಿಗಳು ಹೀಗೆ ಪಕ್ಷದ ಅಖಿಲ ಭಾರತ ಮುಖಂಡರು ಭಾಗವಹಿಸಿದ್ದ ಚಿಕ್ಕಮಗಳೂರು ಚುನಾವಣಾ ಪ್ರಚಾರ ಹೊಸ ರಾಜ್ಯ ಮುಖಂಡತ್ವದ ಪ್ರಥಮ ಪರೀಕ್ಷೆಯಾಯಿತು. ಅದರಲ್ಲಿ ಅದು ತೇರ್ಗಡೆಯಾಗಿ ಬಂತು. ಕಾಂಗ್ರೆಸ್ (ಐ) ಮುಖಂಡತ್ವದ ವಿರುದ್ಧ ಜಂಟಿಯಾಗಿ ನಿಲ್ಲಿಸಲಾದ ವಿರೋಧಿ ಅಭ್ಯರ್ಥಿಯ ಪರವಾಗಿ ಪಕ್ಷದ ಸ್ವತಂತ್ರ ಪ್ರಚಾರದಲ್ಲಿ ರಾಜ್ಯದಲ್ಲಿ ಪಕ್ಷದ ಮಧ್ಯಮ ಹಂತದ ಕಾರ್ಯಕರ್ತರಲ್ಲಿ ಸುಮಾರಾಗಿ ಎಲ್ಲರನ್ನೂ ಅಣಿನೆರೆಸಲಾಯಿತು. ಮಾಜಿ ರಾಜ್ಯ ಕಾರ್ಯದರ್ಶಿ ಮತ್ತವರ ಸಹದ್ಯೋಗಿಗಳು ಸಿಪಿಐ (ಎಂ) ವಿರುದ್ಧ ಬಳಸಲಾದ ಬಲ ಕಳೆದುಕೊಂಡ ಶಕ್ತಿ ಎಂಬುದು ಬಯಲಿಗೆ ಬಂತು.

ಹೊಸ-ಹೊಸ ಪ್ರದೇಶಗಳಿಗೆ ಹೊಸ-ಹೊಸ ಜನ ವಿಭಾಗಗಳಿಗೆ

ಹೀಗೆ ರಾಜ್ಯದ ರಾಜಕೀಯ ಭೂಪಟದಲ್ಲಿ ಒಂದು ಸ್ಥಾನ ಪಡೆದ ಸಿಪಿಐ (ಎಂ) ಪ್ರತಿಯೊಂದು ರಾಜಕೀಯ ಬೆಳವಣಿಗೆಯಲ್ಲಿ ಮಧ್ಯ ಪ್ರವೇಶಿಸಲಾರಂಭಿಸಿತು. ರಾಜ್ಯದ ಜನತೆಯನ್ನು ತಟ್ಟಿದ ಪ್ರತಿಯೊಂದು ರಾಜಕೀಯ ಪ್ರಶ್ನೆಯನ್ನು ರಾಜ್ಯ ಮುಖಂಡತ್ವ ಎತ್ತಿಕೊಂಡು ಇತರ ಎಲ್ಲಾ ವಿರೋಧ ಪಕ್ಷಗಳೊಂದಿಗೆ, ವಿಶೇಷವಾಗಿ ಎಡ ಪಕ್ಷಗಳೊಂದಿಗೆ ಕಾರ್ಯಾಚರಣೆಯಲ್ಲಿ ಐಕ್ಯತೆ ಕಟ್ಟಲು ಪ್ರಯತ್ನಿಸಿತು. ಅದೇ ವೇಳೆಗೆ ಜನತೆಯ ಹೋರಾಟ ಶೀಲ ಸಂಘಟನೆಗಳನ್ನು ಕಟ್ಟುವ ಮೂಲಕ, ಸಾಮೂಹಿಕ ಹೋರಾಟಗಳನ್ನು ಸಂಘಟಿಸುವ ಅಥವಾ ಅವುಗಳಲ್ಲಿ ಭಾಗವಹಿಸುವ ಮೂಲಕ ಮತ್ತು ಎಲ್ಲೆಲ್ಲಿ ಹೋರಾಟಗಳು ಮತ್ತು ಆಂದೋಲನಗಳನ್ನು ಸಂಘಟಿಸಲಾಗಿತ್ತೋ ಅಲ್ಲೆಲ್ಲಾ ಪಕ್ಷದ ಘಟಕಗಳನ್ನು ಸ್ಥಾಪಿಸುವ ಮೂಲಕ ಪಕ್ಷ ಸ್ವತಂತ್ರವಾಗಿಯೂ ಕಾರ್ಯಾಚರಣೆ ನಡೆಸಿತು. ಈ (ಸ್ವತಂತ್ರ ಹಾಗೂ ಜಂಟೀ) ಚಟುವಟಿಕೆಗಳ ಫಲವಾಗಿ ಪಕ್ಷ ಜುಲೈ 1980 ರಲ್ಲಿ ತೀವ್ರಗೊಂಡು ನಂತರ ರಾಜ್ಯಾದ್ಯಂತ ಹರಡಿದ ಮಲಪ್ರಭಾ ರೈತರ ಚಳುವಳಿ, ಡಿಸೆಂಬರ್ 12, 1980 ರಂದು ಬೆಂಗಳೂರಿನಲ್ಲಿ ಸಿಪಿಐ (ಎಂ), ಸಿಐಟಿಯು ಮತ್ತು ಕಿಸಾನ್ ಸಭಾ ಜಂಟಿಯಾಗಿ ಸಂಘಟಿಸಿದ ಒಂದು ದೊಡ್ಡ ಕಾರ್ಮಿಕ-ರೈತರ ರ್‍ಯಾಲಿ, ನಂತರ ನಡೆದ, ಇತರ ಮೂರು ಪಕ್ಷಗಳು-ಸಿಪಿಐ, ಕಾಂಗ್ರೆಸ್ (ಯು) ಮತ್ತು ಲೋಕದಳ ನಮ್ಮೊಡನೆ ಸಹಕರಿಸಿ ರೈತರ ಮತ್ತು ಕಾರ್ಮಿಕರ ಹೋರಾಟ ಸಮಿತಿ ರಚಿಸಿಕೊಳ್ಳುವಂತಾದ ಜಂಟೀ ರೈತ ಚಳುವಳಿ, ವಿಧಾನ ಮಂಡಲದ ಎದುರು ಮತ ಪ್ರದರ್ಶನ ನಡೆಸಿದ ರಾಜ್ಯವ್ಯಾಪೀ ರೈತ ಜಾತಾಗಳು ಮೈಕೋ ಕಾರ್ಖಾನೆ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ನಡೆದ ದೀರ್ಘ ಮುಷ್ಕರಗಳು. ಮಂತ್ರಿ, ಇಬ್ರಾಹಿಂ, ಸಂಸತ್ ಸದಸ್ಯ ಎಫ್. ಎಂ. ಖಾನ್ ಮುಂತಾದವರ ವಿರುದ್ಧ ರಾಜಕೀಯ ಪ್ರಚಾರ, ಗುಂಡೂರಾವ್ ಸರ್ಕಾರದ ಕೆಲವು ಕಾರ್ಮಿಕ ವರ್ಗ-ವಿರೋಧೀ ಕ್ರಮಗಳ ವಿರುದ್ಧ ಪ್ರತಿಭಟನಾ ಮುಷ್ಕರ ಮುಂತಾದ ಹಲವಾರು ಹೋರಾಟಗಳಲ್ಲಿ ಭಾಗವಹಿಸಲು ಅಥವಾ ಅವುಗಳಿಗೆ ನೇತೃತ್ವ ನೀಡಲು ಪಕ್ಷ ಸಮರ್ಥವಾಯಿತು.

ಕಾರ್ಮಿಕ ವರ್ಗ, ರೈತಾಪಿ, ಮಧ್ಯಮ ವರ್ಗದ ನೌಕರರು, ವಿದ್ಯಾರ್ಥಿಗಳು, ಯುವಜನ-ಮಹಿಳೆಯರು, ಕಲಾವಿದರು, ಸಾಂಸ್ಕೃತಿಕ ಕಾರ್ಯಕರ್ತರು ಮುಂತಾದ ಜನವಿಭಾಗಗಳ ನಡುವೆ ಈ ಎಲ್ಲಾ ಹೋರಾಟಗಳು ಮತ್ತು ಇತರ ಚಟುವಟಿಕೆಗಳ ಮೂಲಕ ಪಕ್ಷ ರಾಜ್ಯದಲ್ಲಿ ತನ್ನ ಈ ಹಿಂದಿನ ಏಕಾಂಗಿತನವನ್ನು ಮುರಿದಿದೆ. ರಾಜ್ಯದ ದೊಡ್ಡ ಗಾತ್ರ ಹಾಗೂ ಅದು ಎದುರಿಸುತ್ತಿರುವ ಸಮಸ್ಯೆಗಳ ಆಗಾಧತೆಗೆ ಹೋಲಿಸಿದರೆ ಪಕ್ಷ ಇನ್ನೂ ಸಣ್ಣ ಶಕ್ತಿಯೇ ಆಗಿದ್ದರೂ ಎಲ್ಲಾ ಜನವಿಭಾಗಗಳಲ್ಲಿ ಹರಡಿಕೊಳ್ಳಲು ಹೆಚ್ಚೆಚ್ಚು ಯಶಸ್ವಿಯಾಗಿ ಪ್ರಯತ್ನಿಸುತ್ತಾ ರಾಜ್ಯದ ಎಲ್ಲಾ ಪ್ರಗತಿಪರ, ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳ ಆಕರ್ಷಣೆಯ ಕೇಂದ್ರವಾಗುತ್ತಿದೆ. ಇದು ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಮತ್ತು ಸ್ವತಃ ಪಕ್ಷದ ಸಂಘಟನೆಯಲ್ಲಿನ ಬೆಳವಣಿಗೆಯಲ್ಲಿ ಪ್ರತಿಫಲನಗೊಂಡಿದೆ.

1979ರಲ್ಲಿ ಪಕ್ಷದ ಸದಸ್ಯತ್ವ 1696, 1980 ರಲ್ಲಿ 1759, ಮತ್ತು 1981 ರಲ್ಲಿ 2196. ಸಿ.ಐ.ಟಿ.ಯು. ಸದಸ್ಯತ್ವ 1979 ರಲ್ಲಿ 32 ಸಾವಿರ ಇದ್ದದ್ದು 1981ರ ವೇಳೆಗೆ 45 ಸಾವಿರಕ್ಕೇರಿತು. ರಾಜ್ಯ ಕಿಸಾನ್ ಸಭಾದ ಸದಸ್ಯತ್ವ ಜನವರಿ 1978 ರಲ್ಲಿ 13 ಸಾವಿರದಷ್ಟಿತ್ತು. 1981ರ ವೇಳೆಗೆ ಅದು 30 ಸಾವಿರಕ್ಕೇರಿತು. ಎಸ್.ಎಫ್.ಐ. ಸದಸ್ಯತ್ವ 1978ರಲ್ಲಿ 3300 ರಿಂದ 1981ರ ವೇಳೆಗೆ 6257 ಕ್ಕೇರಿತು. ಡಿ.ವೈ.ಎಫ್.ಐ. ಸದಸ್ಯತ್ವ 7400 ಮತ್ತು ಪ್ರಜಾಪ್ರಭುತ್ವವಾದಿ ಮಹಿಳಾ ಸಂಘದ ಸದಸ್ಯತ್ವ 2250.

ಡಿಸೆಂಬರ್ 1980 ರಲ್ಲಿ ನಡೆದ ಪಕ್ಷದ ರಾಜ್ಯ ಪ್ಲೀನಂ ಮತ್ತು ಒಂದು ವರ್ಷದ ನಂತರ ನಡೆದ ರಾಜ್ಯ ಸಮ್ಮೇಳನ ಈ ಎಲ್ಲಾ ಚಟುವಟಿಕೆಗಳ ಅನುಭವವನ್ನು ಸಂಗ್ರಹಿಸಿ ಪಕ್ಷ ಸಂಘಟನೆ ಹಾಗೂ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಬೆಳವಣಿಗೆಯನ್ನು ಪರಿಶೀಲಿಸಿತು. ಹಿಂದಿನ ಸ್ಥಿತಿಗೆ ಅಂದರೆ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿರುವ ಸ್ಥಿತಿಗೆ ವ್ಯತಿರಿಕ್ತವಾಗಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಆ ವೇಳೆಗೆ (ಅವುಗಳಲ್ಲಿ ಬಹುಳಷ್ಟು ಘಟಕಗಳ ಅಸ್ತಿತ್ವ ಹಾಗೂ ಕಾರ್ಯನಿರ್ವಹಣೆ ಆರಂಭದ ಹಂತದಲ್ಲಿದ್ದರೂ) ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹರಡಿತ್ತು ಎಂಬುದು ಕಂಡು ಬಂತು. ರಾಜ್ಯದಲ್ಲಿ ಹಾಗೂ ಹೊರಗಡೆ ತ್ವರಿತವಾಗಿ ಬದಲಾಗುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ಈಗಿರುವ ಸಂಘಟನೆ ಕ್ರೋಢೀಕರಣಗೊಂಡು ತ್ವರಿತವಾಗಿ ಹೊಸ-ಹೊಸ ಪ್ರದೇಶಗಳಿಗೆ, ಹೊಸ ಹೊಸ ಜನವಿಭಾಗಗಳಿಗೆ ಹರಡುತ್ತದೆ ಎಂದು ನಿರೀಕ್ಷಿಸಲು ಸಾಧ್ಯ.

"ಬೆಳವಣಿಗೆಯ ಸಮಸ್ಯೆಗಳು"

ಇದು ಸ್ವಾಭಾವಿಕವಾಗಿಯೇ ಸಾಲ್ಕಿಯಾ ಪ್ಲೀನಂ 'ಬೆಳವಣಿಗೆಯ ಸಮಸ್ಯೆಗಳು' ಎಂದು ಹೇಳಿತ್ತೋ ಅಂತಹ ಸಮಸ್ಯೆಗಳನ್ನೂ ಎತ್ತಿದೆ. ಪಕ್ಷದ ಈ ಮಹಾಧಿವೇಶನದಲ್ಲಿ ವಿಕಾಸಗೊಳಿಸುವ ರಾಜಕೀಯ ಕಾರ್ಯತಂತ್ರಾತ್ಮಕ ಲೈನಿನ

7ನೇ ಪುಟಕ್ಕೆ]

ನಮ್ಮ ಪಕ್ಷದ 13 ನೇ ಸಮ್ಮೇಳನಕ್ಕಾಗಿ ದೇಶಾದ್ಯಂತ ಘಟಕಗಳು ಸಜ್ಜುಗೊಳ್ಳುತ್ತಿವೆ. ಶಾಖಾ ಸಮ್ಮೇಳನಗಳಿಂದ ಆರಂಭವಾಗಿ ರಾಜ್ಯ ಸಮ್ಮೇಳನಗಳತ್ತ ಮುನ್ನಡೆಯುತ್ತಿವೆ. ನಮ್ಮ ರಾಜ್ಯ ಸಮ್ಮೇಳನವು ನಡೆಯಲಿರುವ ಸಂದರ್ಭದಲ್ಲಿ, "ಸಾಮೂಹಿಕ ಕ್ರಾಂತಿಕಾರಿ ಪಕ್ಷ"ವನ್ನು ಕಟ್ಟುವುದರಲ್ಲಿ ನಿರತರಾದ ನಾವು, ಈ ಸಾಮೂಹಿಕ ಕ್ರಾಂತಿಕಾರಿ ಪಕ್ಷದ ಮೂಲಾಧಾರ ತತ್ವವಾದ "ಪ್ರಜಾಸತ್ತಾತ್ಮಕ ಕೇಂದ್ರವಾದದ" ಬಗ್ಗೆ ಚಿಂತಿಸಬೇಕಾಗಿದೆ. ಮಥಿಸಬೇಕಾಗಿದೆ, ನಮ್ಮ ನಮ್ಮ ಸಂದರ್ಭಕ್ಕೆ ಅರ್ಥೈಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಸಹಾಯವಾಗುವಂತೆ ಸಾಲ್ಕಿಯಾ ಪ್ಲೀನಂ ವರದಿ ಹಾಗೂ ನಿರ್ಣಯಗಳು ಮತ್ತು ವಿಜಯವಾಡ ರಾಜಕೀಯ ಸಂಘಟನಾತ್ಮಕ ವರದಿಯಿಂದ ಆಯ್ದ ಕೆಲವು ಭಾಗಗಳನ್ನು ಪೋಣಿಸಿ ನಿಮ್ಮ ಮುಂದಿಡಲಾಗಿದೆ.

ಮುಂದೆ ಲೆನಿನ್ನರು, ಜಗತ್ತಿನ ಮೊದಲ ಕ್ರಾಂತಿಯನ್ನು ಸಂಘಟಿಸಿದ ಕ್ರಾಂತಿಕಾರಿ ಪಕ್ಷ-ಬೊಲ್ಷೆವಿಕ್ ಪಕ್ಷವನ್ನು ಮೆನ್ಷೆವಿಕ್ಕರೊಡನೆ ಸೈದ್ಧಾಂತಿಕವಾಗಿ ರಾಜಕೀಯವಾಗಿ, ಸಂಘಟನಾತ್ಮಕವಾಗಿ ಸೆಣಸುತ್ತಾ ರೂಪಿಸಿದಾಗ ಅರಳಿದ ತತ್ವ ಪ್ರಜಾಸತ್ತಾತ್ಮಕ ಕೇಂದ್ರವಾದ.

ನಮ್ಮ ಪಕ್ಷ ಹಾಗೂ ಪ್ರಜಾಸತ್ತಾತ್ಮಕ ಕೇಂದ್ರವಾದ

ನಮ್ಮ ಪಕ್ಷದ ಸಂವಿಧಾನದಲ್ಲಿಯೇ ಸ್ಪಷ್ಟವಾಗಿ ಅಡಕವಾಗಿರುವ ಪ್ರಜಾಸತ್ತಾತ್ಮಕ ಕೇಂದ್ರವಾದದ ತತ್ವವನ್ನು ಪಕ್ಷ ಅನೇಕ ಪರಕೀಯ ಸಂಘಟನಾ ವಿಕಾರಗಳ ವಿರುದ್ಧ ಹೋರಾಡುತ್ತಾ, ನಿವಾರಿಸುತ್ತಾ ಬಂದಿದೆ. 1967 ರ ಪಾರ್ಟಿ ಸಂಘಟನೆಯಲ್ಲಿ ನಮ್ಮ ಕರ್ತವ್ಯಗಳು (ಕನ್ನಡಕ್ಕೆ ಅನುವಾದವಾಗಿದೆ) ಸಂಘಟನೆಯ ಬಗ್ಗೆ 1976ರ ಕೇಂದ್ರ ಸಮಿತಿಯ ನಿರ್ಣಯ, 1978 ರ ಸಾಲ್ಕಿಯಾ ಪ್ಲೀನಂ ಹಾಗೂ (ನಿರ್ಣಯಗಳು ಕನ್ನಡದಲ್ಲಿ ಅನುವಾದವಾಗಿವೆ) ವಿಜಯವಾಡದ 11 ನೇ ಸಮ್ಮೇಳನದ ರಾಜಕೀಯ-ಸಂಘಟನಾ ವರದಿ (ಕರ್ನಾಟಕಕ್ಕೆ ಸಂಬಂಧಪಟ್ಟ ಭಾಗ ಅನುವಾಗಿದೆ) ಈ ದಸ್ತಾವೇಜುಗಳು ಅಧ್ಯಯನ, ಚರ್ಚೆ, ಪುನರಧ್ಯಯನ, ಹಾಗೂ ನಮ್ಮ ಅನುಭವದ ಜೊತೆಗೆ ಹೋಲಿಕೆ, ಪಕ್ಷದ ನಾಯಕರ ಮಾರ್ಗದರ್ಶನ ಇವು ಈ ಸಂಘಟನಾ ತತ್ವವನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

"ಸಾಮೂಹಿಕ ಕ್ರಾಂತಿಕಾರಿ ಪಕ್ಷ"

ಜಲಂಧರ್‌ನ ರಾಜಕೀಯ ನಿರ್ಣಯ ಹಾಗೂ ವಿಮರ್ಶಾ ವರದಿ ನಮಗೆ ನೀಡಿದ ಕರೆಯಂತೆ ದೇಶದಲ್ಲಿ ಬಂಡವಾಳಶಾಹಿ ಭೂಮಾಲಕ ಪ್ರಭುತ್ವಕ್ಕೆ ದಿಟ್ಟವಾಗಿ ಎಡ ಹಾಗು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಬೆಸೆಯುವ ಕೆಲಸದ ಒಂದು ಭಾಗ ನಮ್ಮ ಪಕ್ಷ ಸಮರ್ಥವಾಗಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವುದು. ಜಲಂಧರ್‌ನ ರಾಜಕೀಯ ಧೋರಣೆ ಹಾಗೂ ಸಾಲ್ಕಿಯಾದಲ್ಲಿನ ಸಂಘಟನಾ ಕಣ್ನೋಟ ನಮ್ಮ ಪಕ್ಷದ ಬೆಳವಣಿಗೆಯಲ್ಲಿ ಒಂದು ಪ್ರಮುಖ ತಿರುವು. ಈ ದೃಷ್ಟಿಕೋನವನ್ನು ಎಷ್ಟರಮಟ್ಟಿಗೆ ರಾಜ್ಯಸಮಿತಿಗಳು ಅನುಸರಿಸಲು, ಜಾರಿಗೊಳಿಸಲು ಪ್ರಯತ್ನಿಸಿದ್ದಾವೆಯೊ ಅಷ್ಟರ ಮಟ್ಟಿಗೆ ನಮಗೆ ಉತ್ತಮ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗಿದೆ. ಆದುದರಿಂದ ನಮ್ಮ ಸಮ್ಮೇಳನಗಳಲ್ಲಿ ಈ ಕಣ್ನೋಟವನ್ನು ನಾವು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಳ್ಳಲು, ಜಾರಿಗೊಳಿಸಲು ಸಾಧ್ಯವಾಗಿದೆಯೆಂಬುದರ ವಿಮರ್ಶೆಯಾಗಬೇಕು.

ಬೆಳವಣಿಗೆಯ ಸಮಸ್ಯೆ

ಜನ ಸಮುದಾಯದ ಮಧ್ಯೆ, ಪ್ರತಿ ರಾಜ್ಯದಲ್ಲಿಯೂ ನಮ್ಮ ಪಕ್ಷದ ಪ್ರಭಾವ ವಿಸ್ತರಿಸುತ್ತಿದೆ. ನಮ್ಮ ನೇತೃತ್ವದ ಸಾಮೂಹಿಕ ಸಂಘಟನೆಗಳು ಬಲಗೊಳ್ಳುತ್ತಿವೆ. ಆದರೆ ಅದೇ ಸಮಯದಲ್ಲಿ ಪಕ್ಷದ ಪ್ರಭಾವಕ್ಕೆ ಅನುಗುಣವಾಗಿ ಸಾಮೂಹಿಕ ಸಂಘಟನೆಗಳು ಬೆಳೆಯುತ್ತಿಲ್ಲ ಹಾಗೆಯೇ ಪಕ್ಷವೂ ಬೆಳೆಯುತ್ತಿಲ್ಲ.

ಆದುದರಿಂದ ನಮ್ಮ ಪಕ್ಷ ಎದುರಿಸುತ್ತಿರುವ ಸಮಸ್ಯೆಗಳು ಭಾಗಶಃವಾಗಿಯಾದರು ಬೆಳವಣಿಗೆಯ ಸಮಸ್ಯೆ ನಮ್ಮನ್ನು ಅನುಸರಿಸಲು ಸಿದ್ಧವಿರುವ, ನಮ್ಮ ಸಾಮೂಹಿಕ ಸಂಘಟನೆಗಳ ನಾಯಕತ್ವದಲ್ಲಿ ದಿನನಿತ್ಯದ ಹೋರಾಟಗಳಲ್ಲಿ ಕೂಡಿರುವ ಸಾವಿರಾರು ಜನರನ್ನು ಆಕರ್ಷಿಸಿ ಪಕ್ಷದ ಸದಸ್ಯರನ್ನಾಗಿ ಮಾಡುವುದು ಹೇಗೆಂಬ ಸಮಸ್ಯೆಗಳು.

ಈ ಪ್ರಭಾವದ, ಸಾಮೂಹಿಕ ಸಂಘಟನೆಯ ಬಲವನ್ನು ಪಕ್ಷಕ್ಕೆ ಸೆಳೆದು ಪಕ್ಷವನ್ನು ವಿಸ್ತರಿಸುವುದು. ಅದೇ ರೀತಿಯಲ್ಲಿ ವಿಸ್ತಾರಗೊಂಡ ಪಕ್ಷಕ್ಕೆ ಸೈದ್ಧಾಂತಿಕ ರಾಜಕೀಯ ಶಿಕ್ಷಣ ನೀಡಿ ದೃಢಗೊಳಿಸುವುದು ಹೇಗೆಂಬ ಪ್ರಶ್ನೆಯನ್ನು ಪರಿಹರಿಸುವ ಮಾರ್ಗದಲ್ಲಿ ಸಾಲ್ಕಿಯಾ ಪ್ಲೀನಂ ಒಂದು ಮೈಲಿಗಲ್ಲು. ಸಾಲ್ಕಿಯಾ ಪ್ಲೀನಂ ವರದಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ವಿಸ್ತರಣೆ ಹಾಗೂ ದೃಢೀಕರಣದ ಮಾರ್ಗದಲ್ಲಿ ಹಿಂದಿನಿಂದ ಬಂದ ಪರಿಷ್ಕರಣವಾದಿ ಸಂಘಟನಾ ಧೋರಣೆಗಳು ಹಾಗೆಯೇ ಎಡಪಂಥವಾದಿ ಸಂಘಟನಾ ಧೋರಣೆಗಳು ದೊಡ್ಡ ಅಡ್ಡಿಯಾಗಿವೆ.

ಈ ಭೂತ ಕಾಲ ನಮ್ಮನ್ನು ಈಗಲೂ ಕಾಡಿಸುತ್ತಿದೆ. ಪ್ರಜಾಸತ್ತಾತ್ಮಕ ಕೇಂದ್ರೀಕರಣದ ಕ್ರಾಂತಿಕಾರಿ ಸಂಘಟನಾ ತತ್ವಗಳಿಗೆ ಪರಕೀಯವಾದ ಪರಿಷ್ಕರಣವಾದೀ ವಿರೂಪಗಳ ವಿರುದ್ಧ, ಕಾರ್ಯಾಚರಣೆಯ ವಿರುದ್ಧ ನಮ್ಮ ಹೋರಾಟ ಇನ್ನೂ ಮುಗಿದಿಲ್ಲ." ಎಂದು ಹೇಳಿತು ಮತ್ತು ಆರೋಪಗಳನ್ನು ಪಟ್ಟಿ ಮಾಡಿತು.

1. ಪಕ್ಷದ ಸಂಘಟನೆಯ ಮೂಲಾಧಾರತತ್ವವಾದ ಪ್ರಜಾಸತ್ತಾತ್ಮಕ ಕೇಂದ್ರವಾದಕ್ಕೆ ವಿರುದ್ಧವಾದ ಫೆಡರಲಿಸಂ ಒಕ್ಕೂಟವಾದ ವಿವಿಧ ಪ್ರದೇಶಗಳ ಅಥವಾ ಸಂಘಟನೆಗಳ (ಒಕ್ಕೂಟವೆಂದು ಪಕ್ಷವನ್ನು ಪರಿಗಣಿಸುವುದು (ಮುಂದೆ ಇದನ್ನು ದೀರ್ಘವಾಗಿ ವಿವರಿಸಲಾಗಿದೆ)

2. ಎಲ್ಲಾ ವಿಭಿನ್ನ, ಪರಕೀಯ ಸಿದ್ಧಾಂತಗಳ ವಿರುದ್ಧ ನಿರಂತರ ಹೋರಾಟ ನಡೆಸಲು ಪಕ್ಷ ಕೇಂದ್ರದ ವೈಫಲ್ಯತೆ. ಪಕ್ಷವನ್ನು ವಿಸ್ತರಿಸಲು ಪ್ರಾಥಮಿಕವಾದ ವರ್ಗ ಸಂಘರ್ಷಗಳಲ್ಲಿ ಪಕ್ಷದ ಕಾಲೆಗಳಲ್ಲಿ ಹಾಗೂ ಕಠಿಣ ವಿಷಯಗಳ ಮೇಲಿನ ಪಕ್ಷದ ಪ್ರಕಟಣೆಗಳು ಮೂಡಿಸಿದ ಪ್ರಜ್ಞೆಯ ಆಧಾರದ ಮೇಲೆ ಮಾತ್ರವೇ ಅವಲಂಬಿತವಾಗಿದೆ.

ಪಕ್ಷದ ರಾಜಕೀಯ ಧೋರಣೆಗಳನ್ನು ರೂಪಿಸುವುದರಲ್ಲಿ ಹಾಗೂ ಅದನ್ನು ಜಾರಿಗೊಳಿಸುವುದರಲ್ಲಿ ಪಕ್ಷದ ಬಹು ಭಾಗ ಸದಸ್ಯರನ್ನು ಒಳಗೊಳ್ಳಲು ಯೋಜಿತವಾದ ಯಾವುದೇ ಕಾರ್ಯಕ್ರಮವಿಲ್ಲ. ಈ ಪ್ರವೃತ್ತಿ ವರ್ಷದಿಂದ ವರ್ಷಕ್ಕೆ ಸದಸ್ಯರು ನವೀಕರಣ ಮಾಡದಿರಲು ಕಾರಣವಾಗಿದೆ.

3. ಅನೇಕ ರಾಜ್ಯಗಳಲ್ಲಿ ಪಕ್ಷದ ಕೆಳ ಘಟಕಗಳಿಗೆ ವರದಿ ನೀಡುವುದು ಹಾಗೂ ಘಟಕದಿಂದ ವರದಿಯನ್ನು ಪಡೆಯುವುದು ಇಲ್ಲವೇ ಇಲ್ಲ. ಜನ ಸಮುದಾಯದ ಹೋರಾಟಗಳ, ಚಳುವಳಿಗಳನ್ನು ವಿಮರ್ಶಿಸುವುದು ಹಾಗೂ ಪಕ್ಷಕ್ಕೆ ತನ್ನದೇ ಚಟುವಟಿಕೆ ಅನುಭವದ ಮೂಲಕವೇ ಕಲಿಸುವುದನ್ನು ಕೂಡ ಕೈಬಿಡಲಾಗಿದೆ.

ಇದು ಪಕ್ಷದ ಒಳಗೆ ಟೀಕೆ ಹಾಗೂ ಸ್ವಯಂ ಟೀಕೆಯನ್ನು ಕೈಬಿಡುವುದಕ್ಕೆ, ಆ ಮೂಲಕ ತನ್ನನ್ನು ತಾನೇ ನಿರಂತರವಾಗಿ ತಿದ್ದಿಕೊಳ್ಳುವ, ತನ್ನ ತಿಳುವಳಿಕೆಯನ್ನು ಹಾಗೂ ಕೆಲಸವನ್ನೇ ಉತ್ತಮಗೊಳಿಸಿಕೊಳ್ಳುವ ಒಂದು ಮುಖ್ಯ ಸಾಧನವೇ ಇಲ್ಲದಂತಾಗುತ್ತದೆ. ನಿರಂತರವಾದ ವಿಮರ್ಶೆ ಹಾಗೂ ಸ್ವಯಂಟೀಕೆಯ ಅಭಾವದಿಂದ ಪಕ್ಷದ ಚಟುವಟಿಕೆಗಳನ್ನು ಹಾಗೂ ವರದಿಗಳನ್ನು ಅವಶ್ಯ ಎಚ್ಚರವಿಲ್ಲದೆ ತಯಾರಿಸುವ ಹಾಗೂ ನಾಯಕತ್ವ ಮಾಡಿದ್ದೆಲ್ಲವನ್ನೂ ಸಮರ್ಥಿಸುವ ಪದ್ಧತಿ ಬೆಳೆಯುತ್ತದೆ.

ಟೀಕಾರಹಿತವಾದ ಸಾಧನೆಗಳ ಉಮ್ಮಳದ ವರದಿ ಪಕ್ಷದ ಪ್ರಗತಿಗೆ ಅಡ್ಡಿಯಾಗುತ್ತದೆ. ಸಾಮೂಹಿಕ ತೀರ್ಮಾನಕ್ಕೆ ಹಾಗೂ ಐಕ್ಯತೆಗೆ ಬಾಧಕವಾಗುತ್ತದೆ. ಆದುದರಿಂದ ಪಕ್ಷದ-ಒಳಗೆ ಟೀಕೆ ಹಾಗೂ ಸ್ವಯಂ ಟೀಕೆಗಳನ್ನು ಪುನಃ ಸ್ಥಾಪಿಸಬೇಕಾಗಿದೆ.

4. ಬಹಳಷ್ಟು ರಾಜ್ಯ ಸಮಿತಿಗಳಲ್ಲಿ ಸಾಮೂಹಿಕ ಕಾರ್ಯಾಚರಣೆಯ, ಕೆಲಸದ ವಿಭಜನೆಯ ಅಭಾವ ವೈಯಕ್ತಿಕ ಕಾರ್ಯನಿರ್ವಹಣೆಗೆ ಎಡೆಕೊಟ್ಟಿದೆ. ಸಮಿತಿಗೆ ಬದಲಾಗಿ ಕಾರ್ಯದರ್ಶಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಅಧಿಕಾರದ ಕೇಂದ್ರೀಕರಣ, ಕೆಲಸದಲ್ಲಿ ಅದಕ್ಷತೆ ಹಾಗೂ ಅಧಿಕಾರಶಾಹಿಗೆ ಕಾರಣವಾಗುತ್ತದೆ.

5. ಪಕ್ಷದ ಸದಸ್ಯರು, ಕಾರ್ಯಕರ್ತರಿಗೆ ನಮ್ಮ ಪಕ್ಷದ ಧೋರಣೆ ಹಾಗೂ ನಿಲುವುಗಳನ್ನು ರೂಪಿಸುವುದರಲ್ಲಿ ನಮ್ಮ ಪಾತ್ರವೂ ಇದೆ ಎಂದು ಭಾವಿಸಿಲ್ಲ. ಅವರ ತಿಳುವಳಿಕೆ, ಅನುಭವ ಹಾಗೂ ಕೆಲಸಗಳಿಗೆ ಸರಿಯಾದ ಮನ್ನಣೆ ಸಿಗುತ್ತಿದೆ ಎಂದೆನಿಸಿಲ್ಲ. ಇದು ಪಕ್ಷದ ಐಕ್ಯತೆಗೆ ಅಡ್ಡಿಯಾಗಿದೆ. ಹಾಗೂ ನಾಯಕತ್ವವು ಜನಸಮುದಾಯದ ಅನುಭವದಿಂದ ಪಾಠ ಕಲಿಯಲು ಅಡ್ಡಿಯಾಗಿದೆ. ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು, ಪಕ್ಷದ ಆಂತರಿಕ ಪ್ರಜಾಪ್ರಭುತ್ವವನ್ನು ಕೇವಲ ಆಚಾರವೆಂಬ ಮಟ್ಟಕ್ಕೆ ಇಳಿಸುತ್ತದೆ.

ಮೇಲೆ ತಿಳಿಸಿದ ವಿವರಗಳ ಜೊತೆಗೆ ಪಕ್ಷದ ವರ್ಗರಚನೆ ಕಾರ್ಮಿಕವರ್ಗದಿಂದ ಹೆಚ್ಚು ಜನ ಸದಸ್ಯರನ್ನು ನೋಂದಾಯಿಸದಿರುವುದನ್ನು, ಹೊಸ ಸದಸ್ಯರನ್ನು ನೋಂದಾಯಿಸಿದಾಗ ಅವರೊಡನೆ ಹಿಂದಿನ ಅನುಭವವನ್ನು ಹಂಚಿಕೊಳ್ಳಲಾಗದಿರುವುದನ್ನು, ಬಲವಾದ ಸೈದ್ಧಾಂತಿಕ-ರಾಜಕೀಯ ತರಬೇತಿ ನೀಡದಿರುವುದನ್ನು ಸಾಲ್ಕಿಯಾ ಪ್ಲೀನಂ ಗುರುತಿಸಿದೆ.

ಪಕ್ಷದ ಘಟಕಗಳ ಕೆಲಸ ಅದರಲ್ಲಿಯೂ ಶಾಖೆಗಳ ಕೆಲಸದಲ್ಲಿ ತೀವ್ರ ಬದಲಾವಣೆಯಾಗಬೇಕಾಗಿರುವುದನ್ನು, ಪಕ್ಷದ ಪತ್ರಿಕೆಗಳಲ್ಲಿ ನಾಯಕತ್ವದಲ್ಲಿರುವ ಸಂಗಾತಿಗಳು ಬರೆಯದಿರುವುದನ್ನು, ಸಂಪಾದಕೀಯ ಕೆಲವೇ ಸಂಗಾತಿಗಳ ಜವಾಬ್ದಾರಿಯಾಗುವುದನ್ನು, ಪಕ್ಷದ ಸರ್ವಸದಸ್ಯರ ಸಭೆಯಲ್ಲಿ ವರದಿ ಮಾಡುವ ಕೆಲಸವೂ ಕೆಲವೇ ಸಂಗಾತಿಗಳಿಗೆ ಸೀಮಿತವಾಗುವುದನ್ನೂ ಗುರುತಿಸಿದೆ.

ಈ ತಪ್ಪುಗಳನ್ನು ತಿದ್ದಿಕೊಳ್ಳುವ ದಾರಿಯನ್ನು ನಿರ್ದಿಷ್ಟವಾಗಿ ತೋರಿಸಿದೆ.

ಪಕ್ಷದ ಬೆಳವಣಿಗೆಯಲ್ಲಿ ಪತ್ರಿಕೆಗಳ ಪಾತ್ರ

"ಪ್ರಜಾಸತ್ತಾತ್ಮಕ ಕೇಂದ್ರವಾದ"ವೆಂಬ ನಮ್ಮ ಪಕ್ಷದ ಸಂಘಟನೆಯ ಸಾರಸರ್ವಸ್ವಕ್ಕೂ ಪಕ್ಷದ ಪತ್ರಿಕೆಗಳಿಗೂ ಏನು ಸಂಬಂಧ ? ಎಂದು ಕೇಳಬಹುದು. ಪಕ್ಷದಲ್ಲಿ ಪ್ರಜಾಸತ್ತೆ ಹಾಗೂ ಈ ಜೀವಂತ ಪ್ರಜಾಸತ್ತೆಯ ಮೇಲೆ ಆಧಾರಗೊಂಡ ಕೇಂದ್ರವಾದದ ಬೆಳವಣಿಗೆಯಲ್ಲಿ ಒಟ್ಟಿನಲ್ಲಿ ಸಂಘಟನೆಯ ಜೀವಂತಿಕೆಯಲ್ಲಿ ಪತ್ರಿಕೆಗಳ ಪಾತ್ರ ಎಷ್ಟು ಮಹತ್ವದ್ದೆಂಬುದನ್ನು ಲೆನಿನ್ ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ. ಜಗತ್ತಿನಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸುವುದಕ್ಕಾಗಿ ಅವರಿಂದಲೇ ರೂಪುಗೊಂಡ 'ಕಮ್ಯೂನಿಸ್ಟ್ ಅಂತರ ರಾಷ್ಟ್ರೀಯ'ದ ಮೂಲಕ ಈ ಎಲ್ಲಾ ಅನುಭವವನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಈ ದಾಖಲೆಯಲ್ಲಿ ಅವರು ಹೇಳುತ್ತಾರೆ.

"ಕಮ್ಯುನಿಸ್ಟ್ ಪತ್ರಿಕೆಗಳ ಆದರಲ್ಲಿಯೂ ನಮ್ಮ ಪ್ರಧಾನ ಪತ್ರಿಕೆಯ ಸರ್ವವ್ಯಾಪೀ ಸಂಘಟನಾ ಕೆಲಸವನ್ನು ಕ್ರಾಂತಿಕಾರಿ ದೃಷ್ಟಿಕೋನದಿಂದ ನಿರ್ವಹಿಸುವುದರ ಮೂಲಕವೇ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಸ್ಥಾಪಿಸಲು ಸಾಧ್ಯ ಮತ್ತು ಕಮ್ಯುನಿಸ್ಟ್ ಪಕ್ಷದಲ್ಲಿ ಸರಿಯಾಗಿ ಕೆಲಸಗಳನ್ನು ಹಂಚಿಕೊಳ್ಳಲು ಸಾಧ್ಯ, ಹಾಗೂ ಆ ಮೂಲಕ ಪಕ್ಷದ ಐತಿಹಾಸಿಕ ಪಾತ್ರವನ್ನು ನಿರ್ವಹಿಸಲು ಸಾಧ್ಯ."

ಪಕ್ಷದ ಸದಸ್ಯರ ಕೆಲಸದಲ್ಲಿ ಬೆಲೆಯುಳ್ಳ ಅನುಭವವನ್ನೂ ಸಂಗ್ರಹಿಸುವುದೇ ಪತ್ರಿಕೆಯ ಉದ್ದೇಶ.

ಪಕ್ಷದ ಸದಸ್ಯರ ಕಮ್ಯುನಿಸ್ಟ್ ಕಾರ್ಯವಿಧಾನಗಳನ್ನು ನಿರಂತರವಾಗಿ ಪುನರ್ವಿಮರ್ಶಿಸುವುದು ಹಾಗೂ ಉತ್ತಮಗೊಳಿಸುವ ಹಾದಿಯಲ್ಲಿ ಮಾರ್ಗದರ್ಶಿಯಾಗಿ ಈ ಅನುಭವದ ನಿರೂಪಣೆಯನ್ನು ಸದಸ್ಯರ ಮುಂದಿಡುವುದೇ ಪತ್ರಿಕೆಯ ಉದ್ದೇಶ. ನಮ್ಮ ಕ್ರಾಂತಿಕಾರಿ ಕೆಲಸದ ಅತ್ಯುತ್ತಮ ಸಂಘಟಕನಾಗಿ ಕೆಲಸ ನಿರ್ವಹಿಸುವುದೆಂದರೆ ಇದೆ.

ಕಮ್ಯುನಿಸ್ಟ್ ಪತ್ರಿಕೆ ಒಂದು ಕಮ್ಯುನಿಸ್ಟ್ ಉದ್ಯಮವಾಗಲು ಯತ್ನಿಸಬೇಕು. ಅದೊಂದು ಕಾರ್ಮಿಕ ವರ್ಗದ ಹೋರಾಟದ ಸಂಘಟನೆಯಾಗಿ, ಕ್ರಾಂತಿಕಾರಿ ಕಾರ್ಮಿಕರ ಪತ್ರಿಕೆಗಾಗಿ ಬರೆಯುವ ಎಲ್ಲಾ ಬರಹಗಾರರ, ಸಂಪಾದಕರ ಕಂಪೋಸಿಟರ್‌ಗಳ, ಮುದ್ರಕರ, ಹಾಗೂ ಹಂಚಿಕೆದಾರರ, ವರದಿಗಾರರ, ದಿನನಿತ್ಯವೂ ಪತ್ರಿಕೆಯ ಪ್ರಚಾರ ಮಾಡುತ್ತಿರುವವರ ಕಾರ್ಯಕಾರಿ ಸಮೂಹವಾಗಿ ರೂಪುಗೊಳ್ಳಬೇಕು. ಕಮ್ಯೂನಿಸ್ಟ್ ಒಂದು ಕಾರ್ಯಶಾಲಿ ಸಮೂಹವಾಗಿ ಪತ್ರಿಕೆ ರೂಪುಗೊಳ್ಳಬೇಕಾದರೆ, ಹೋರಾಟದ ಸಾಧನವಾಗಬೇಕಾದರೆ, ಅನೇಕ ವಾಸ್ತವಿಕ ಕ್ರಮಗಳು ಅಗತ್ಯ.

ಪತ್ರಿಕೆಗಾಗಿ ದುಡಿಯುವಾಗ ಹಾಗೂ ತ್ಯಾಗ ಮಾಡುವಾಗ ಒಬ್ಬ ಕಮ್ಯುನಿಸ್ಟನು ಪತ್ರಿಕೆಯೊಂದಿಗೆ ಅತ್ಯಂತ ಹತ್ತಿರದ ಸಂಬಂಧವನ್ನು ಹೊಂದಿರಬೇಕು.

ಕಾನೂನು ಬದ್ಧ ಸಾಮೂಹಿಕ ಕ್ರಾಂತಿಕಾರಿ ಪಕ್ಷದಲ್ಲಿ ವಿಸ್ತಾರವಾದ ಪ್ರಸಾರವನ್ನು ಹಾಗೂ ದೃಢವಾದ ಸಂಘಟನೆಯನ್ನು ಪಡೆಯುವ ಹಂತದವರೆಗೆ, ಸ್ವತಃ ತಾನೇ ಕಮ್ಯೂನಿಸ್ಟ್ ಚಳುವಳಿಯ ಬಲವಾದ ಆಧಾರಸ್ತಂಭವಾಗುವವರೆಗೆ, ಅದರ ಅಭಿವೃದ್ಧಿಗೆ ಹಾಗೂ ಆಂತರಿಕ ಸುಧಾರಣೆಗೆ ಅಗತ್ಯವಾದ ಅನುಕೂಲಗಳು ಪಕ್ಷದ ಸದಸ್ಯ ಸಮೂಹದಿಂದ ನಿರಂತರವಾಗಿ ದೊರೆಯುತ್ತಿರಬೇಕು.

ಕಾರ್ಖಾನೆಯಲ್ಲಿ, ಅದರೊಳಗಿನ ನಿಮ್ಮ ವಿಭಾಗದಲ್ಲಿ ನಡೆಯುವ ಯಾವುದೇ ಸಾಮಾಜಿಕ-ಆರ್ಥಿಕ ಸಂಗತಿಯನ್ನು-ಒಂದು ಆಕ್ಸಿಡೆಂಟ್‌ನಿಂದ ಹಿಡಿದು ಕಾರ್ಖಾನೆಯ ಸರ್ವಸದಸ್ಯರ ಸಭೆಯವರೆಗೂ, ಒಬ್ಬ ಅಪ್ರೆಂಟಿಸ್‌ಗೆ ಹೀನವಾಗಿ ನಡೆಸಿಕೊಂಡಿದ್ದರಿಂದ ಹಿಡಿದು ಕಾರ್ಖಾನೆಯ ಬ್ಯಾಲೆನ್ಸ್‌ಶೀಟ್ ವರೆಗೂ ಎಲ್ಲವನ್ನು ತಕ್ಷಣವೇ ಪತ್ರಿಕೆಗೆ ಬರೆದು ಕಳುಹಿಸಬೇಕು. ಕಾರ್ಮಿಕ ಸಂಘದಲ್ಲಿರುವ ಪಕ್ಷದ ಫ್ರಾಕ್ಷನ್ ತನ್ನ ಎಲ್ಲಾ ನಿರ್ಣಯಗಳನ್ನು, ಕಾರ್ಮಿಕ ಸಂಘದ ಪದಾಧಿಕಾರಿಗಳ ನಿರ್ಣಯಗಳನ್ನೂ, ಹಾಗೂ ತಮ್ಮ ಶತ್ರುಗಳ ರೂಪವನ್ನು ಬಯಲಿಗೆಳೆಯುವ ಅವರ ಚಟುವಟಿಕೆಗಳನ್ನೇ ವರದಿ ಮಾಡಬೇಕು.

ಪತ್ರಿಕೆಗಾಗಿ ಚಂದಾದಾರರನ್ನು ಪಡೆಯುವುದು ... ನಿರಂತರ ವ್ಯವಸ್ಥೆಯನ್ನಾಗಿ ಮಾಡಬೇಕು.

ಮೊದಲನೆಯದಾಗಿ, ಕಾರ್ಮಿಕರ ಮನಸ್ಸನ್ನು ಕಲಕುವ ಪ್ರತಿ ಸಂದರ್ಭವನ್ನೂ, ವಿಶೇಷ ಘಟನೆಯೊಂದರಿಂದ ಕಾರ್ಮಿಕರ ರಾಜಕೀಯ, ಸಾಮಾಜಿಕ ಪ್ರಜ್ಞೆ ಎಚ್ಚರಗೊಂಡ ಪ್ರತಿಸಂದರ್ಭವನ್ನು ಉಪಯೋಗಿಸಬೇಕು.

ಪ್ರತಿ ದೊಡ್ಡ ಮುಷ್ಕರ, ಲಾಕೌಟ್‌ಗಳ ನಂತರವೂ, ಆ ಬಗ್ಗೆ ಪಕ್ಷದ ಪತ್ರಿಕೆಯಲ್ಲಿ ಕಾರ್ಮಿಕರ ಹಿತಗಳನ್ನು ಬಹಿರಂಗವಾಗಿ ಶಕ್ತಿಶಾಲಿಯಾಗಿ ಉಪಯೋಗಿಸಿದುದನ್ನು ಬಳಸಿಕೊಂಡು ಈ ಮುಷ್ಕರದಲ್ಲಿ ಭಾಗವಹಿಸಿದವರ ನಡುವೆ ಪ್ರಚಾರ ಕೈಗೊಳ್ಳಬೇಕು. ಕಮ್ಯುನಿಸ್ಟರು ಕೆಲಸ ಮಾಡುತ್ತಿರುವ ಕಾರ್ಮಿಕ ಸಂಘಗಳಲ್ಲಿ ಪಕ್ಷದ ಘಟಕಗಳು ಕೆಲಸ ಮಾಡುತ್ತಿರುವ ಕೈಗಾರಿಕೆಗಳಲ್ಲಿ ಮಾತ್ರವಲ್ಲದೇ ಕಾರ್ಮಿಕರ ತಂಡಗಳು ಮುಷ್ಕರದಲ್ಲಿ ತೊಡಗಿದ ಕಾರ್ಮಿಕರ ಮನೆಯಿಂದ ಮನೆಗೆ ಹೋಗಿ ಪತ್ರಿಕೆಗಾಗಿ ಪ್ರಚಾರ ನಡೆಸಬೇಕು.

ಎರಡನೆಯದಾಗಿ ಪ್ರತಿ ಚುನಾವಣಾ ಸಂದರ್ಭದ ಪ್ರಚಾರ ಪ್ರಕ್ಷೋಭೆಯ ಸಮಯದಲ್ಲಿ ಹಾಗೂ ನಂತರ ಪತ್ರಿಕೆಯ ಪ್ರಚಾರಕ್ಕಾಗಿ ಸಂಘಟಿತ ತಂಡಗಳು ಕಾರ್ಮಿಕರ ಮನೆಯಿಂದ ಮನೆಗೆ ಹೋಗುತ್ತಾ, ವ್ಯವಸ್ಥಿತ ಪ್ರಚಾರ ನಡೆಸಬೇಕು.

ಮೂರನೆಯದಾಗಿ, ಪ್ರತಿ ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಬೆಲೆಏರಿಕೆ, ನಿರುದ್ಯೋಗ ಮತ್ತಿತರ ಕಷ್ಟಗಳು ಬಹು ಸಂಖ್ಯೆಯ ಜನರನ್ನೂ ಬಾಧಿಸುತ್ತಿದ್ದಾಗ ವಿವಿಧ ಕಾರ್ಖಾನೆಗಳ ಕಾರ್ಮಿಕರನ್ನು ತಂಡಗಳಾಗಿ ಸಂಘಟಿಸಿ ಮನೆಯಿಂದ ಮನೆಗೆ ಪ್ರಚಾರ ನಡೆಸಬೇಕು. ಪ್ರತಿ ತಿಂಗಳ ಕೊನೆಯ ವಾರ ಇಂತಹ ಪ್ರಚಾರಕ್ಕೆ ಅತ್ಯಂತ ಸೂಕ್ತವೆಂದು ಅನುಭವದಿಂದ ತಿಳಿದು ಬಂದಿದೆ.

ಯಾವುದೇ ಸ್ಥಳೀಯ ಗುಂಪು, ಇಂತಹ ಒಂದು ಅವಕಾಶವನ್ನು-ತಿಂಗಳಕೊನೆಯನ್ನು-ಪತ್ರಿಕೆಗಾಗಿ ಪ್ರಚಾರ ನಡೆಸುವುದಕ್ಕಾಗಿ ಉಪಯೋಗಿಸುವುದರಲ್ಲಿ ವಿಫಲರಾದರೂ ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆಯಲ್ಲಿ ಒಂದು ದೊಡ್ಡ ತಪ್ಪೆಸಗಿದಂತೆಯೇ ಸರಿ.

ಲೆನಿನ್ನರ ಅಕ್ಟೋಬರ್ ಕ್ರಾಂತಿಯನ್ನು ನಿರ್ವಹಿಸಿದ ಬೊಲ್ಷೆವಿಕ್ ಪಕ್ಷದ, ನಂತರ ಕಮ್ಯೂನಿಸ್ಟ್ ಅಂತರರಾಷ್ಟ್ರೀಯದ ಈ ಮಾರ್ಗದರ್ಶನಗಳನ್ನು ದಿನನಿತ್ಯದ ಚಳುವಳಿಯಲ್ಲಿ ಚಟುವಟಿಕೆಯಲ್ಲಿ ಅಳವಡಿಸಿದರೆ ಮಾತ್ರ ಪಕ್ಷ ಬೆಳೆಯಲು ಸಾಧ್ಯ.

ಕರ್ನಾಟಕದಲ್ಲಿ ಸಿ.ಪಿ.ಐ.(ಎಂ):

ಪಕ್ಷದ 11ನೇ ವಿಜಯವಾಡ ಮಹಾಧಿವೇಶನ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸ್ಥಿತಿಯ ಬಗ್ಗೆ ಅದು ಎದುರಿಸಬೇಕಾದ ಸವಾಲುಗಳ ಬಗ್ಗೆ ಸ್ಪಷ್ಟ ಉಲ್ಲೇಖ ಮಾಡಿದ ಮಹಾಧಿವೇಶನಗಳಲ್ಲಿ ಪ್ರಮುಖವಾದುದು.

ರಾಜ್ಯದ ಸಾಮಾಜಿಕ-ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪಕ್ಷದ ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾ ಸ್ಥಿತಿಯ ಬಗ್ಗೆ ಕ್ಷ-ಕಿರಣ ಬೀರಿದೆ - ಪಕ್ಷದ ಬೆಳವಣಿಗೆಗೆ ಮಾರ್ಗದರ್ಶಕ ಸೂತ್ರಗಳನ್ನು ನೀಡಿದೆ.

ರಾಜ್ಯದ 13ನೇ ಸಮ್ಮೇಳನ ನಡೆಯುವ ಸಂದರ್ಭದಲ್ಲಿ ಇದರಲ್ಲಿ ಬೊಟ್ಟು ಮಾಡಿ ತೋರಿಸಿದ ದೋಷಗಳ ನಿವಾರಣೆಯ ಬಗ್ಗೆ, ಎದುರಿಸಬೇಕಾದ ಸವಾಲುಗಳ ಬಗ್ಗೆ ಗಂಭೀರ ಗಮನ ಹರಿಸಬೇಕಾಗಿದೆ.

1982ರ ಜನವರಿ 26 ರಿಂದ 31ರವರೆಗೆ ಜರುಗಿದ
11 ನೇ ಮಹಾಧಿವೇಶನದ
ರಾಜಕೀಯ-ಸಂಘಟನಾ ವರದಿಯ
ಕರ್ನಾಟಕ ಕುರಿತಾದ ವರದಿ

ಆದರೆ ಇತ್ತೀಚಿನ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬೆಳವಣಿಗೆಗಳು, ಈ ತತ್ವ ವಿಚಾರಗಳ ವಿರುದ್ಧ ಯಶಸ್ವೀ ಹೋರಾಟಕ್ಕೆ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಕ್ರೋಢೀಕರಣದ ಕೆಲಸಕ್ಕೆ ಹಾಗೂ ಸಿಪಿಐ(ಎಂ)ನ್ನು ಒಂದು ಸಾಮೂಹಿಕ ಕ್ರಾಂತಿಕಾರೀ ಪಕ್ಷವಾಗಿ ಬೆಳೆಸಲು ಅನುಕೂಲಕರವಾದ ಒಂದು ಸನ್ನಿವೇಶವನ್ನು ನಿರ್ಮಿಸಿವೆ. ವಿವಿಧ ಎಡ ಇತರ ಸರ್ವಾಧಿಕಾರ-ವಿರೋಧೀ ಶಕ್ತಿಗಳ ಐಕ್ಯತೆ ಬೆಸೆಯುವ, ಕಾರ್ಮಿಕ ವರ್ಗ, ರೈತಾಪಿ ವರ್ಗ ಇತರ ದುಡಿಮೆಗಾರ ಜನ ವಿಭಾಗಗಳ ಐಕ್ಯ ಸಾಮೂಹಿಕ ಹೋರಾಟಗಳನ್ನು ಮತ್ತು ಆಂದೋಲನಗಳನ್ನು ಸಂಘಟಿಸುವ ಅದರ ಪ್ರಯತ್ನಗಳಿಗೆ ಕಂಡು ಬಂದ ಅನುಕೂಲ ಪ್ರತಿಕ್ರಿಯೆಯಲ್ಲಿ ಇದನ್ನು ನೋಡಬಹುದು. ಅದು 40 ವರ್ಷಗಳ ಹಿಂದೆ ರಾಜ್ಯದಲ್ಲಿ ಪಕ್ಷ ಸ್ಥಾಪನೆಯಾದಂದಿನಿಂದ ಇದುವರೆಗೆ ಎಂದೂ ಕೂಡಾ ರಾಜ್ಯದ ರಾಜಕೀಯದ ಮೇಲೆ ಪ್ರಭಾವ ಬೀರಬಲ್ಲ ಇಂತಹದೊಂದು ಅನುಕೂಲಕರ ಸ್ಥಿತಿಯಲ್ಲಿರಲಿಲ್ಲ.

ಈ ಸಂದರ್ಭದಲ್ಲಿ, ಮೂವತ್ತರ ದಶಕದ ಉತ್ತರಾರ್ಧ ಹಾಗೂ ನಲವತ್ತರ ದಶಕದ ಆರಂಭದಲ್ಲಿ ರಾಜ್ಯದಲ್ಲಿ ಕಮ್ಯುನಿಸ್ಟ್ ಆಂದೋಲನ ಆರಂಭವಾದರೂ ಅದೇದೂ ರಾಜ್ಯದ ರಾಜಕೀಯದ ಮೇಲೆ ಪ್ರಭಾವ ಬೀರಿಲ್ಲ ಎಂಬುದನ್ನು ಗಮನಿಸಬೇಕು. ದಕ್ಷಿಣ ಕನ್ನಡ, ಕೋಲಾರ ಮತ್ತು ಬೆಂಗಳೂರು, ಮೈಸೂರು, ಕೊಡಗು ಹಾಗೂ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳ ಸಣ್ಣ ವಿಭಾಗಗಳಲ್ಲಿ ಅಲ್ಲಲ್ಲಿ ಮಾತ್ರವೇ ಪಕ್ಷ ಹೇಳಿಕೊಳ್ಳಬಹುದಾದ ಯಾವುದೇ ಕಾರ್ಮಿಕ ಸಂಘ, ರೈತಸಂಘ ಅಥವಾ ಇತರ ಸಾಮೂಹಿಕ ಸಂಘಟನೆಗಳಿಗೆ ನೇತೃತ್ವ ನೀಡಿತ್ತು. ಅವಿಭಜಿತ ಕಮ್ಯುನಿಸ್ಟ್ ಪಕ್ಷ ದ.ಕ. ಮತ್ತು ಕೋಲಾರದಿಂದ ಮಾತ್ರವೇ ತನ್ನ ಅಭ್ಯರ್ಥಿಗಳನ್ನು ರಾಜ್ಯ ವಿಧಾನಸಭೆಗೆ ಕಳುಹಿಸುವುದು ಸಾಧ್ಯವಾಗಿತ್ತು. ಅವಿಭಜಿತ ಸಿ.ಪಿ.ಐ. ರಾಜ್ಯದ ದೊಡ್ಡ ಕೈಗಾರಿಕಾ ಹಾಗೂ ಶೈಕ್ಷಣಿಕ ಕೇಂದ್ರಗಳನ್ನು ನಿರ್ಲಕ್ಷಿಸಿತ್ತೆಂದೇ ಹೇಳಬೇಕು. ಸಿಪಿಐ(ಎಂ) ಪರಿಷ್ಕರಣವಾದಿಗಳಿಂದ ಪ್ರತ್ಯೇಕವಾದಾಗ ಈ ಪರಿಸ್ಥಿತಿ ಸಿಪಿಐ(ಎಂ) ಪಾಲಿಗೆ ಬಂತು.

ತಪ್ಪು ದೃಷ್ಟಿಕೋನ-ವರ್ತನೆ

ಸಂಘಟನೆ ಕುರಿತು ಸಿಪಿಐ(ಎಂ) 1967 ಹಾಗೂ 1973 ರಲ್ಲಿ ನಿರ್ಣಯಗಳನ್ನು ಅಂಗೀಕರಿಸಿದ ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಅನುಸರಿಸಿದ ಸಂಘಟನಾ ಮಾರ್ಗವನ್ನು ಕರ್ನಾಟಕಕ್ಕೆ ಅನ್ವಯಿಸಲಾಗುತ್ತಿದೆ ಎಂಬ ಹೆಸರಿನಲ್ಲಿ ಈ ಪರಿಸ್ಥಿತಿಯನ್ನು ಸಮರ್ಥಿಸಿಕೊಳ್ಳಲಾಯಿತು. ಕ್ರಾಂತಿಕಾರೀ ದೃಷ್ಟಿಕೋನ ಹಾಗೂ ಪಕ್ಷದ ಸಂಘಟನೆಯ ನೀತಿಗಳ ವೇಷ ತೊಟ್ಟ ಆತ್ಮಸಂತೃಪ್ತ ಮನೋಭಾವದಿಂದಾಗಿ ಪಕ್ಷದ ರಾಜ್ಯ ಮುಖಂಡತ್ವ ತನ್ನ ರಾಜಕೀಯ ಹಾಗೂ ಸಂಘಟನಾತ್ಮಕ ಕೆಲಸವನ್ನು ರಾಜ್ಯದ ದೊಡ್ಡ ಕೈಗಾರಿಕಾ ಹಾಗೂ ಸಾಂಸ್ಕೃತಿಕ ಕೇಂದ್ರಗಳಿಗೆ ವಿಸ್ತರಿಸುವ ಸಾಧ್ಯತೆಗಳಿದ್ದ ಸಮಯದಲ್ಲೇ ಹೆಚ್ಚೆಚ್ಚು ತನ್ನದೇ ಚಿಪ್ಪಿನೊಳಗೆ ಮುದುಡಿಕೊಳ್ಳುವಂತಾಯಿತು.

ಈ ತಪ್ಪು ರಾಜಕೀಯ-ಸಂಘಟನಾತ್ಮಕ ದೃಷ್ಟಿಕೋನ, ಇದರ ಜತೆಗೆ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ನಿರಾಕರಿಸುವ ಸಂಘಟನಾ ವರ್ತನೆಗಳು ಪಕ್ಷದೊಳಗೆ ಒಂದು ಗಂಭೀರ ಸ್ಥಿತಿಯನ್ನು ಸೃಷ್ಟಿಸಿದವು. ಸಾಲ್ಕಿಯಾ ದಸ್ತಾವೇಜುಗಳಲ್ಲಿ ತೀವ್ರವಾಗಿ ಟೀಕಿಸಿದ ಒಳಕೂಟ ಪ್ರವೃತ್ತಿ ಮತ್ತು ಅಧಿಕಾರಶಾಹಿ ಪಕ್ಷದ ರಾಜ್ಯ ಮುಖಂಡತ್ವದಲ್ಲಿ ತಾನೇ ತಾನಾಗಿ ರಾರಾಜಿಸುತ್ತಿತ್ತು. ಜಾಲಂಧರ್ ಮಹಾಧಿವೇಶನ ಮೊದಲು ನಡೆದ ಕಳೆದ ರಾಜ್ಯ ಸಮ್ಮೇಳನದಲ್ಲಿ ಹೊಸ ರಾಜ್ಯ ಸಮಿತಿ ಹಾಗೂ ಕಾರ್ಯದರ್ಶಿ ಮಂಡಳಿಯ ರಚನೆಗೆ ಸಂಬಂಧಪಟ್ಟಂತೆ ಸಮ್ಮೇಳನದಲ್ಲಿ ಹಾಜರಿದ್ದ ಪ್ರಧಾನ ಕಾರ್ಯದರ್ಶಿ ಹಾಗೂ ಕಾಂ. ಪಿ. ರಾಮಮೂರ್ತಿಯವರ ಸಲಹೆಯನ್ನು ರಾಜ್ಯ ಸಮಿತಿಯ ಆಗಿನ ಕಾರ್ಯದರ್ಶಿಗಳು ತಿರಸ್ಕರಿಸಿದರು. ಪಕ್ಷದ ಸಂಘಟನೆಯ ಎಲ್ಲಾ ನೀತಿ-ನಿಯಮ ಹಾಗೂ ಸ್ವರೂಪಗಳನ್ನು ಸತತವಾಗಿ ಉಲ್ಲಂಘಿಸುತ್ತಾ ಬಂದಿದ್ದ ಹಿನ್ನೆಲೆಯಲ್ಲಿ ಮತ್ತು ಪಕ್ಷದ ಸಮ್ಮೇಳನದ ನಂತರವೂ ಈ ಪಕ್ಷ ವಿರೋಧಿ ವರ್ತನೆಗಳನ್ನು ಮುಂದುವರೆಸಿದ್ದರಿಂದ ಪಾಲಿಟ್‌ಬ್ಯೂರೋಗೆ ಆ ಸಮ್ಮೇಳನದಲ್ಲಿ ಚುನಾಯಿಸಿದ ರಾಜ್ಯ ಸಮಿತಿಯನ್ನು ಪುನರ್ರಚಿಸಿ, ಈ ಸಂಪೂರ್ಣ ಪ್ರಕ್ರಿಯೆಯನ್ನೇ ಕೇಂದ್ರ ಸಮಿತಿಯ ಮುಂದಿಡುವುದಲ್ಲದೆ ಬೇರೆ ಮಾರ್ಗವೇ ಇರಲಿಲ್ಲ. ಸಂಘಟನೆ ಕುರಿತ ಸಾಲ್ಕಿಯಾ ವರದಿಯಲ್ಲಿ ಈ ಪುನರ್ರಚನೆ ಬಗ್ಗೆ ಹೇಳಲಾಗಿದೆ.

ತಮ್ಮ ತಮ್ಮ ಸ್ಥಾನಗಳಿಂದ ತೆಗೆಯಲ್ಪಟ್ಟ ಹಿಂದಿನ ಕಾರ್ಯದರ್ಶಿ ಹಾಗೂ ಇತರ ಮೂವರು ರಾಜ್ಯ ಸಮಿತಿ ಸದಸ್ಯರು ಈ ನಿರ್ಣಯಕ್ಕೆ ಸವಾಲು ಹಾಕಿ ಒಂದು ಪ್ರತಿಸ್ಪರ್ಧಿ 'ಪಕ್ಷ' ಸ್ಥಾಪಿಸಿದರು. ಆದರೆ ಕೆಲವೇ ತಿಂಗಳಲ್ಲಿ ಪಕ್ಷದ ಎಲ್ಲಾ ಸದಸ್ಯರು ಹಾಗೂ ಹಿತೈಷಿಗಳು ಸಿ.ಪಿ.ಐ.(ಎಂ.) ನ ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿಯ ಜತೆಗಿದ್ದಾರೆ, ಪಕ್ಷಾಂತರಿಗಳು ಸಂಪೂರ್ಣವಾಗಿ ದೂರ ತಳ್ಳಲ್ಪಟ್ಟಿದ್ದಾರೆ ಎಂಬುದು ಸ್ಪಷ್ಟವಾಯಿತು. ಪ್ರಧಾನ ಕಾರ್ಯದರ್ಶಿ, ಇತರ ಇಬ್ಬರು ಪಾಲಿಟ್‌ಬ್ಯೂರೋ ಸದಸ್ಯರು, ಇಬ್ಬರು ಮುಖ್ಯಮಂತ್ರಿಗಳು ಹೀಗೆ ಪಕ್ಷದ ಅಖಿಲ ಭಾರತ ಮುಖಂಡರು ಭಾಗವಹಿಸಿದ್ದ ಚಿಕ್ಕಮಗಳೂರು ಚುನಾವಣಾ ಪ್ರಚಾರ ಹೊಸ ರಾಜ್ಯ ಮುಖಂಡತ್ವದ ಪ್ರಥಮ ಪರೀಕ್ಷೆಯಾಯಿತು. ಅದರಲ್ಲಿ ಅದು ತೇರ್ಗಡೆಯಾಗಿ ಬಂತು. ಕಾಂಗ್ರೆಸ್ (ಐ) ಮುಖಂಡತ್ವದ ವಿರುದ್ಧ ಜಂಟಿಯಾಗಿ ಬೆಂಬಲಿಸಲಾದ ವಿರೋಧಿ ಅಭ್ಯರ್ಥಿಯ ಪರವಾಗಿ ಪಕ್ಷದ ಸ್ವತಂತ್ರ ಪ್ರಚಾರದಲ್ಲಿ ರಾಜ್ಯದಲ್ಲಿ ಪಕ್ಷದ ಮಧ್ಯಮ ಹಂತದ ಕಾರ್ಯಕರ್ತರಲ್ಲಿ ಸುಮಾರಾಗಿ ಎಲ್ಲರನ್ನೂ ಅಣಿನೆರೆಸಲಾಯಿತು. ಮಾಜಿ ರಾಜ್ಯ ಕಾರ್ಯದರ್ಶಿ ಮತ್ತವರ ಸಹದ್ಯೋಗಿಗಳು ಸಿಪಿಐ (ಎಂ) ವಿರುದ್ಧ ಬಳಸಲಾದ ಬಲ ಕಳೆದುಕೊಂಡ ಶಕ್ತಿ ಎಂಬುದು ಬಯಲಿಗೆ ಬಂತು.

ಹೊಸ-ಹೊಸ ಪ್ರದೇಶಗಳಿಗೆ ಹೊಸ-ಹೊಸ ಜನ ವಿಭಾಗಗಳಿಗೆ

ಹೀಗೆ ರಾಜ್ಯದ ರಾಜಕೀಯ ಭೂಪಟದಲ್ಲಿ ಒಂದು ಸ್ಥಾನ ಪಡೆದ ಸಿಪಿಐ (ಎಂ) ಪ್ರತಿಯೊಂದು ರಾಜಕೀಯ ಬೆಳವಣಿಗೆಯಲ್ಲಿ ಮಧ್ಯ ಪ್ರವೇಶಿಸಲಾರಂಭಿಸಿತು. ರಾಜ್ಯದ ಜನತೆಯನ್ನು ತಟ್ಟಿದ ಪ್ರತಿಯೊಂದು ರಾಜಕೀಯ ಪ್ರಶ್ನೆಯನ್ನು ರಾಜ್ಯ ಮುಖಂಡತ್ವ ಎತ್ತಿಕೊಂಡು ಇತರ ಎಲ್ಲಾ ವಿರೋಧ ಪಕ್ಷಗಳೊಂದಿಗೆ, ವಿಶೇಷವಾಗಿ ಎಡ ಪಕ್ಷಗಳೊಂದಿಗೆ ಕಾರ್ಯಾಚರಣೆಯಲ್ಲಿ ಐಕ್ಯತೆ ಕಟ್ಟಲು ಪ್ರಯತ್ನಿಸಿತು. ಅದೇ ವೇಳೆಗೆ ಜನತೆಯ ಹೋರಾಟ ಶೀಲ ಸಂಘಟನೆಗಳನ್ನು ಕಟ್ಟುವ ಮೂಲಕ, ಸಾಮೂಹಿಕ ಹೋರಾಟಗಳನ್ನು ಸಂಘಟಿಸುವ ಅಥವಾ ಅವುಗಳಲ್ಲಿ ಭಾಗವಹಿಸುವ ಮೂಲಕ ಮತ್ತು, ಎಲ್ಲೆಲ್ಲಿ ಹೋರಾಟಗಳು ಮತ್ತು ಆಂದೋಲನಗಳನ್ನು ಸಂಘಟಿಸಲಾಗಿತ್ತೋ ಅಲ್ಲೆಲ್ಲಾ ಪಕ್ಷದ ಘಟಕಗಳನ್ನು ಸ್ಥಾಪಿಸುವ ಮೂಲಕ ಪಕ್ಷ ಸ್ವತಂತ್ರವಾಗಿಯೂ ಕಾರ್ಯಾಚರಣೆ ನಡೆಸಿತು. ಈ (ಸ್ವತಂತ್ರ ಹಾಗೂ ಜಂಟೀ) ಚಟುವಟಿಕೆಗಳ ಫಲವಾಗಿ ಪಕ್ಷ ಜುಲೈ 1980 ರಲ್ಲಿ ತೀವ್ರಗೊಂಡು ನಂತರ ರಾಜ್ಯಾದ್ಯಂತ ಹರಡಿದ ಮಲಪ್ರಭಾ ರೈತರ ಚಳುವಳಿ, ಡಿಸೆಂಬರ್ 12, 1980 ರಂದು ಬೆಂಗಳೂರಿನಲ್ಲಿ ಸಿಪಿಐ (ಎಂ), ಸಿಐಟಿಯು ಮತ್ತು ಕಿಸಾನ್ ಸಭಾ ಜಂಟಿಯಾಗಿ ಸಂಘಟಿಸಿದ ಒಂದು ದೊಡ್ಡ ಕಾರ್ಮಿಕ-ರೈತರ ರ್‍ಯಾಲಿ, ನಂತರ ನಡೆದ, ಇತರ ಮೂರು ಪಕ್ಷಗಳು-ಸಿಪಿಐ, ಕಾಂಗ್ರೆಸ್ (ಯು) ಮತ್ತು ಲೋಕದಳ ನಮ್ಮೊಡನೆ ಸಹಕರಿಸಿ ರೈತರ ಮತ್ತು ಕಾರ್ಮಿಕರ ಹೋರಾಟ ಸಮಿತಿ ರಚಿಸಿಕೊಳ್ಳುವಂತಾದ ಜಂಟೀ ರೈತ ಚಳುವಳಿ, ವಿಧಾನ ಮಂಡಲದ ಎದುರು ಮತ ಪ್ರದರ್ಶನ ನಡೆಸಿದ ರಾಜ್ಯವ್ಯಾಪೀ ರೈತ ಜಾಥಾಗಳು ಮೈಕೋ ಕಾರ್ಖಾನೆ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ನಡೆದ ದೀರ್ಘ ಮುಷ್ಕರಗಳು, ಮಂತ್ರಿ ಇಬ್ರಾಹಿಂ, ಸಂಸತ್ ಸದಸ್ಯ ಎಫ್. ಎಂ. ಖಾನ್ ಮುಂತಾದವರ ವಿರುದ್ಧ ರಾಜಕೀಯ ಪ್ರಚಾರ, ಗುಂಡೂರಾವ್ ಸರ್ಕಾರದ ಕೆಲವು ಕಾರ್ಮಿಕ ವರ್ಗ-ವಿರೋಧೀ ಕ್ರಮಗಳ ವಿರುದ್ಧ ಪ್ರತಿಭಟನಾ ಮುಷ್ಕರ ಮುಂತಾದ ಹಲವಾರು ಹೋರಾಟಗಳಲ್ಲಿ ಭಾಗವಹಿಸಲು ಅಥವಾ ಅವುಗಳಿಗೆ ನೇತೃತ್ವ ನೀಡಲು ಪಕ್ಷ ಸಮರ್ಥವಾಯಿತು.

ಕಾರ್ಮಿಕ ವರ್ಗ, ರೈತಾಪಿ, ಮಧ್ಯಮ ವರ್ಗದ ನೌಕರರು, ವಿದ್ಯಾರ್ಥಿಗಳು, ಯುವಜನ-ಮಹಿಳೆಯರು, ಕಲಾವಿದರು, ಸಾಂಸ್ಕೃತಿಕ ಕಾರ್ಯಕರ್ತರು ಮುಂತಾದ ಜನವಿಭಾಗಗಳ ನಡುವೆ ಈ ಎಲ್ಲಾ ಹೋರಾಟಗಳು ಮತ್ತು ಇತರ ಚಟುವಟಿಕೆಗಳ ಮೂಲಕ ಪಕ್ಷ ರಾಜ್ಯದಲ್ಲಿ ತನ್ನ ಈ ಹಿಂದಿನ ಏಕಾಂಗಿತನವನ್ನು ಮುರಿದಿದೆ. ರಾಜ್ಯದ ದೊಡ್ಡ ಗಾತ್ರ ಹಾಗೂ ಅದು ಎದುರಿಸುತ್ತಿರುವ ಸಮಸ್ಯೆಗಳ ಅಗಾಧತೆಗೆ ಹೋಲಿಸಿದರೆ ಪಕ್ಷ ಇನ್ನೂ ಸಣ್ಣ ಶಕ್ತಿಯೇ ಆಗಿದ್ದರೂ ಎಲ್ಲಾ ಜನವಿಭಾಗಗಳಲ್ಲಿ ಹರಡಿಕೊಳ್ಳಲು ಹೆಚ್ಚೆಚ್ಚು ಯಶಸ್ವಿಯಾಗಿ ಪ್ರಯತ್ನಿಸುತ್ತಾ ರಾಜ್ಯದ ಎಲ್ಲಾ ಪ್ರಗತಿಪರ, ಜಾತ್ಯತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳ ಆಕರ್ಷಣೆಯ ಕೇಂದ್ರವಾಗುತ್ತಿದೆ. ಇದು ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಮತ್ತು ಸ್ವತಃ ಪಕ್ಷದ ಸಂಘಟನೆಯಲ್ಲಿನ ಬೆಳವಣಿಗೆಯಲ್ಲಿ ಪ್ರತಿಫಲನಗೊಂಡಿದೆ.

1979ರಲ್ಲಿ ಪಕ್ಷದ ಸದಸ್ಯತ್ವ 1696, 1980 ರಲ್ಲಿ 1759, ಮತ್ತು 1981 ರಲ್ಲಿ 2196. ಸಿ.ಐ.ಟಿ.ಯು. ಸದಸ್ಯತ್ವ 1979 ರಲ್ಲಿ 32 ಸಾವಿರ ವಿದ್ದದ್ದು 1981ರ ವೇಳೆಗೆ 45 ಸಾವಿರಕ್ಕೇರಿತು. ರಾಜ್ಯ ಕಿಸಾನ್ ಸಭಾದ ಸದಸ್ಯತ್ವ ಜನವರಿ 1978 ರಲ್ಲಿ 13 ಸಾವಿರದಷ್ಟಿತ್ತು. 1981ರ ವೇಳೆಗೆ ಅದು 30 ಸಾವಿರಕ್ಕೇರಿತು. ಎಸ್.ಎಫ್.ಐ. ಸದಸ್ಯತ್ವ 1978ರಲ್ಲಿ 3300 ರಿಂದ 1981ರ ವೇಳೆಗೆ 6257 ಕ್ಕೇರಿತು. ಡಿ.ವೈ.ಎಫ್.ಐ. ಸದಸ್ಯತ್ವ 7400 ಮತ್ತು ಪ್ರಜಾಪ್ರಭುತ್ವವಾದಿ ಮಹಿಳಾ ಸಂಘದ ಸದಸ್ಯತ್ವ 2250.

ಡಿಸೆಂಬರ್ 1980 ರಲ್ಲಿ ನಡೆದ ಪಕ್ಷದ ರಾಜ್ಯ ಪ್ಲೀನಂ ಮತ್ತು ಒಂದು ವರ್ಷದ ನಂತರ ನಡೆದ ರಾಜ್ಯ ಸಮ್ಮೇಳನ ಈ ಎಲ್ಲಾ ಚಟುವಟಿಕೆಗಳ ಅನುಭವವನ್ನು ಸಂಗ್ರಹಿಸಿ ಪಕ್ಷ ಸಂಘಟನೆ ಹಾಗೂ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಬೆಳವಣಿಗೆಯನ್ನು ಪರಿಶೀಲಿಸಿತು. ಹಿಂದಿನ ಸ್ಥಿತಿಗೆ ಅಂದರೆ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿರುವ ಸ್ಥಿತಿಗೆ ವ್ಯತಿರಿಕ್ತವಾಗಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಆ ವೇಳೆಗೆ (ಅವುಗಳಲ್ಲಿ ಬಹಳಷ್ಟು ಘಟಕಗಳ ಅಸ್ತಿತ್ವ ಹಾಗೂ ಕಾರ್ಯನಿರ್ವಹಣೆ ಆರಂಭದ ಹಂತದಲ್ಲಿದ್ದರೂ) ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹರಡಿತ್ತು ಎಂಬುದು ಕಂಡು ಬಂತು. ರಾಜ್ಯದಲ್ಲಿ ಹಾಗೂ ಹೊರಗಡೆ ತ್ವರಿತವಾಗಿ ಬದಲಾಗುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ಈಗಿರುವ ಸಂಘಟನೆ ಕ್ರೋಢೀಕರಣಗೊಂಡು ತ್ವರಿತವಾಗಿ ಹೊಸ-ಹೊಸ ಪ್ರದೇಶಗಳಿಗೆ, ಹೊಸ ಹೊಸ ಜನವಿಭಾಗಗಳಿಗೆ ಹರಡುತ್ತದೆ ಎಂದು ನಿರೀಕ್ಷಿಸಲು ಸಾಧ್ಯ.

"ಬೆಳವಣಿಗೆಯ ಸಮಸ್ಯೆಗಳು"

ಇದು ಸ್ವಾಭಾವಿಕವಾಗಿಯೇ ಸಾಲ್ಕಿಯಾ ಪ್ಲೀನಂ 'ಬೆಳವಣಿಗೆಯ ಸಮಸ್ಯೆಗಳು' ಎಂದು ಹೇಳಿತ್ತೋ ಅಂತಹ ಸಮಸ್ಯೆಗಳನ್ನೂ ಎತ್ತಿದೆ. ಪಕ್ಷದ ಈ ಮಹಾಧಿವೇಶನದಲ್ಲಿ ವಿಕಾಸಗೊಳಿಸುವ ರಾಜಕೀಯ ಕಾರ್ಯ ತಂತ್ರಾತ್ಮಕ ಲೈನಿನ

[7ನೇ ಪುಟಕ್ಕೆ]

ಕರ್ನಾಟಕ ಆಂಧ್ರಪ್ರದೇಶದಂತೆಯೇ ಅವಿಭಕ್ತ ಕಾಂಗ್ರೆಸ್ ಆಳ್ವಿಕೆ ಪಡೆದ ಹೆಗ್ಗಳಿಕೆಯನ್ನು ಪಡೆದಿದೆ. 1979-80 ರಲ್ಲಿ ಕೆಲವು ತಿಂಗಳಷ್ಟೇ ಸರ್ವಾಧಿಕಾರೀ ಕಾಂಗ್ರೆಸ್ (ಐ) 'ತ್ಯಕವಾಂದಿ'ಗೆ ಸವಾಲೆಸೆದ ಒಂದು ಪಕ್ಷದ ಮುಖಂಡರು ಮುಖ್ಯಮಂತ್ರಿಯಾಗಿದ್ದರು (ದೇವರಾಜ ಅರಸು). 1980 ರ ಲೋಕಸಭಾ ಚುನಾವಣೆಯ ನಂತರ ಅವರೂ ಬಿಟ್ಟುಕೊಡಬೇಕಾಯಿತು.

ರಾಜಕೀಯದ ಹೊರಗೆ ಕೂಡಾ ಕರ್ನಾಟಕ ದಕ್ಷಿಣಭಾರತದ ಇತರ ಪ್ರತಿಯೊಂದು ರಾಜ್ಯಕ್ಕೆ ಹೋಲಿಸಿದರೂ ಹಿಂದುಳಿದಿದೆ. ದೀರ್ಘ ಕಾಲ ತೀವ್ರಗಾಮೀ ಸಾಮಾಜಿಕ-ಸಾಂಸ್ಕೃತಿಕ ಆಂದೋಲನಗಳನ್ನು ಕಂಡ ಆಂಧ್ರಪ್ರದೇಶ, ಕೇರಳದ ಮಾತಂತೂ ದೂರವಿರಲಿ. ತಮಿಳುನಾಡು ಕಂಡಂತಹ ಶಕ್ತಿಶಾಲೀ ಜಾತಿ ವಿರೋಧಿ ಮೊದಲಾದ ತೀವ್ರಗಾಮೀ ಸಾಮಾಜಿಕ-ಆರ್ಥಿಕ ಆಂದೋಲನಗಳನ್ನೂ ಅದು ಕಾಣಲೇ ಇಲ್ಲ.

ಆಳುವ ಪಕ್ಷಕ್ಕೆ ರಾಜಕೀಯ ವಿರೋಧ ಸಹಜವಾಗಿಯೇ ಕುರುಡು ಪ್ರವೃತ್ತಿಗಳ ಬಣ್ಣ ಪಡೆದಿದೆ. ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ತೀವ್ರಗಾಮಿತ್ವ ಕೂಡಾ ಹಿಂದುಳಿದ ಜಾತಿಗಳ ಬೇಡಿಕೆಗಳ ಸ್ವರೂಪ ಪಡೆಯುತ್ತದೆ. ದೇವರಾಜ ಅರಸುರಂಥ ಒಬ್ಬ ಮುಖಂಡರು ಕೂಡಾ ತಾನು ತೀವ್ರಗಾಮಿ ಎಂದು ಹೇಳಿಕೊಂಡು 'ವರ್ಗ ಹೋರಾಟ'ದ ಮಾತಾಡುತ್ತಾರೆ ಹಾಗೂ ಹಿಂದುಳಿದ ಜಾತಿಗಳ ಚಳುವಳಿ ಮತ್ತು ಬೇಡಿಕೆಗಳನ್ನು 'ವರ್ಗಹೋರಾಟ'ವೆಂದು ಸಮೀಕರಿಸುತ್ತಾರೆ.

ಇದು ಕ್ರಿಸ್ಚಿಯನ್ ಎಡ ಹಾಗೂ ದಲಿತ ಆಂದೋಲನ ಮುಂತಾದ 'ಎಡ' ತೋರಿಕೆಯ ಚಳುವಳಿಗಳು ಮೊಳಕೆಯೊಡೆದು ಬೆಳೆಯಲು ಫಲವತ್ತಾದ ಮಣ್ಣು ಒದಗಿಸಿದೆ. ಹೆಚ್ಚೆಚ್ಚಾಗಿ ಮಾರ್ಕ್ಸ್‌ವಾದದತ್ತ ಆಕರ್ಷಿತರಾಗುತ್ತಿರುವ ಯುವಕರನ್ನು ಗೆದ್ದುಕೊಳ್ಳಲು ಪ್ರತ್ಯೇಕವಾಗಿ ಹಾಗೂ ಒಟ್ಟಾಗಿ ಕ್ರಿಶ್ಚಿಯನ್ ಎಡ, ದಲಿತರು ಹಾಗೂ ನಕ್ಸಲ್‌ವಾದಿಗಳು ಪ್ರಯತ್ನ ನಡೆಸುತ್ತಿರುವುದರ ಲಕ್ಷಣ ಇತ್ತೀಚೆಗೆ ಕಂಡು ಬಂದಿದೆ. ಈ ಗುಂಪುಗಳ ಹಲ್ಲೆಯ ಗುರಿ ಅವರೆನ್ನುವ 'ಕಮ್ಯುನಿಸ್ಟ್ ಸಂಸ್ಥೆ'. ವಿಶೇಷವಾಗಿ 'ಮಾರ್ಕ್ಸ್‌ವಾದ-ಲೆನಿನ್‌ವಾದದ ಕ್ರಾಂತಿಕಾರೀ ಸಿದ್ಧಾಂತಕ್ಕೆ ವಿಶ್ವಾಸದ್ರೋಹ ಬಗೆಯುವ' ಮಂದಿಯೆಂದು ಅವರು ಆಪಾದಿಸುವ ಸಿ.ಪಿ.ಐ.(ಎಂ).

ಅನುಕೂಲ ಸನ್ನಿವೇಶ

ಬೂರ್ಜ್ವಾ-ಭೂಮಾಲಕ ರಾಜಕೀಯ ಪಕ್ಷಗಳ ಬಹಿರಂಗ ಕುರುಡು ಕಂದಾಚಾರಿ ತತ್ವಗಳನ್ನು ಮತ್ತು ಕೆಲವು ಕ್ರಿಶ್ಚಿಯನ್ ಗುಂಪುಗಳು, ದಲಿತರು ಹಾಗೂ ನಕ್ಸಲ್‌ವಾದಿಗಳ 'ಎಡಪಂಥೀಯ'ವೆಂಬಂತೆ ಕಾಣುವ ತತ್ವ ವಿಚಾರಗಳನ್ನು ಬಯಲಿಗೆಳೆಯದೆ ಎಡ ಮತ್ತು ಪ್ರಜಾಪ್ರಭುತ್ವವಾದೀ ಐಕ್ಯತೆ ಮತ್ತು ಸಾಮೂಹಿಕ ಕ್ರಾಂತಿಕಾರೀ ಪಕ್ಷ ಕಟ್ಟುವ ಜಾಲಂಧರ್ ಮತ್ತು ಸಾಲ್ಕಿಯಾ ಮಾರ್ಗವನ್ನು ಈ ರಾಜ್ಯಕ್ಕೆ ಅನ್ವಯಿಸಿ ಜಾರಿಗೊಳಿಸಲು ಸಾಧ್ಯವಿಲ್ಲ.



ಜನವರಿ 26 - 31 - 1982

ಮಹಾಧಿವೇಶನಗಳು ಕಂಡಂತೆ

ವೇಳೆಯಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ರಾಜ್ಯ ಸಮಿತಿಗೆ ನೆರವಾಗಬೇಕು.

ತೀವ್ರಗಾಮಿ ವಿಚಾರಗಳ ಯುವಕರನ್ನು ಗೆದ್ದುಕೊಳ್ಳಲು ಪ್ರಯತ್ನಿಸುತ್ತಿರುವ ಕೆಲವು ನೇಲ್ಸೋಟಿಕ್ಸ್. 'ಎಡಪಂಥೀಯ' ನೆಂಬಂತೆ ಕಂಡುಬರುವ ಪ್ರವೃತ್ತಿಗಳು ಹಾಗೂ ಆಂದೋಲನಗಳ ವಿರುದ್ಧ ಒಂದು ದೃಢ ಹೋರಾಟ ನಡೆಸಬೇಕಾಗಿದೆ ಎಂದು ಈಗಾಗಲೇ ಹೇಳಲಾಗಿದೆ. ಈ ಪ್ರವೃತ್ತಿಗಳನ್ನು ಹಾಗೂ ಆಂದೋಲನಗಳನ್ನು ಪ್ರತಿನಿಧಿಸುವವರ ವಿರುದ್ಧ ಪಕ್ಷದ ಮುಖಂಡತ್ವ ಒಂದು ಅವಿರತ ಹೋರಾಟ ನಡೆಸಬೇಕಾಗಿದೆ. ಈ ವಿಷಯದಲ್ಲಿ ರಾಜ್ಯದ ಮುಖಂಡತ್ವದಲ್ಲಿ ಜಾಗರೂಕತೆಯ ಅಭಾವ ಕಂಡುಬರುತ್ತಿದೆ. ಈ ಗುಂಪುಗಳತ್ತ ಒಂದು ಉದಾರ ನಿಯಮ ತಳೆಯುತ್ತಿದೆ. ಈ ದೌರ್ಬಲ್ಯವನ್ನು ನಿವಾರಿಸಿಕೊಂಡು ಈ ಗುಂಪುಗಳ ಮುಖಂಡರು ನಡೆಸುತ್ತಿರುವ ಸುಳ್ಳು ಪ್ರಚಾರಗಳಿಗೆ ಮಾರುಹೋಗುತ್ತಿರುವವರನ್ನು ಗೆದ್ದುಕೊಳ್ಳಲು ಸೂಕ್ತ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬೇಕು.

ಇದೇ ರೀತಿ ಕರ್ನಾಟಕದಲ್ಲಿ ಹಿಂದೆ ಕಂಡುಬಂದ, ಮುಂದೆ ಕಾಣಿಸಿಕೊಳ್ಳಬಹುದಾದ ಬೂರ್ಜ್ವಾ ಹಾಗೂ ಪರಿಷ್ಕರಣವಾದೀ ತತ್ವ ವಿಚಾರಗಳ ಕೆಲವು ವಿಶಿಷ್ಟ ಅವತರಣಿಕೆಗಳ ವಿರುದ್ಧವೂ ಸತತ ಹೋರಾಟ ನಡೆಸಬೇಕು. ಈ ಸೈದ್ಧಾಂತಿಕ ಹೋರಾಟವನ್ನು ಹೇಗೆ ಸಾಮಾಜಿಕ, ಆರ್ಥಿಕ, ರಾಜಕೀಯ ರಂಗಗಳಲ್ಲಿನ ಎಲ್ಲಾ ತೀವ್ರಗಾಮೀ ಶಕ್ತಿಗಳೊಂದಿಗೆ ಐಕ್ಯ ಕಾರ್ಯಾಚರಣೆಯೊಂದಿಗೆ ಬೆಸೆಯುವುದು ಎಂಬುದು ರಾಜ್ಯಸಮಿತಿ ಪಾಲಿಟ್‌ಬ್ಯೂರೊ ಮತ್ತು ಕೇಂದ್ರ ಸಮಿತಿಯ ಮಾರ್ಗದರ್ಶನದಲ್ಲಿ ಪರಿಶೀಲಿಸಬೇಕಾದ ಪ್ರಶ್ನೆ.

ಇಷ್ಟೇ ಮಹತ್ವದ ಇನ್ನೊಂದು ಸಮಸ್ಯೆಯಿದೆ. ಪಕ್ಷದ ಹಿಂದಿನ ನಾಯಕತ್ವದ ಜಾಗದಲ್ಲಿ 1978ರಲ್ಲಿ ಒಂದು ಹೊಸ ನಾಯಕತ್ವ ಬಂದಂದಿನಿಂದ 1979ರ ಹಿಂದಿನ ಪಕ್ಷದ ಚರಿತ್ರೆಯೆಲ್ಲಾ ನಿಷ್ಪ್ರಯೋಜಕ ಎಂದು ತಳ್ಳಿಬಿಡಬೇಕೆಂಬ ಭಾವನೆ ಸೃಷ್ಟಿಯಾಗಿದೆ. 1980 ಪ್ಲೀನಂ ಹಾಗೂ 1981ರ ರಾಜ್ಯಸಮ್ಮೇಳನದಲ್ಲೂ ಈ ದನಿ ಕೇಳಿ ಬಂತು. ನಲ್ವತ್ತು ವರ್ಷಕ್ಕೂ ಹಿಂದೆ ಪಕ್ಷದ ಮೊದಲ ಪಥ ಪ್ರದರ್ಶಕರು ಪಡಬೇಕಾದ ಕಠಿಣ ಶ್ರಮ, ನಲವತ್ತರ ಮತ್ತು ಐವತ್ತರ ದಶಕಗಳಲ್ಲಿ ಕೆಲವು ಪ್ರದೇಶಗಳಲ್ಲಿ ಸಾಮೂಹಿಕ ಸಂಘಟನೆಗಳನ್ನು ಕಟ್ಟಿದ್ದು, ಈ ಸಮಸ್ತ ಅವಧಿಯಲ್ಲಿ ಪಕ್ಷದ ಬೆಳವಣಿಗೆಯನ್ನು ಪ್ರತಿನಿಧಿಸುವ ಮುಖಂಡರು, ಸದಸ್ಯರು ಹಾಗೂ ಬೆಂಬಲಿಗರು ಈಗಲೂ ಇರುವುದು ಇವನ್ನೆಲ್ಲಾ ಪಕ್ಷ 1979ರಲ್ಲಿ ಹೊಸದಾಗಿ ಹುಟ್ಟಿತೇನೋ ಎಂಬಂತೆ ಮರೆತುಬಿಡಲಾಗುತ್ತಿದೆ. ವಾಸ್ತವವಾಗಿ ರಾಜ್ಯ ಪ್ಲೀನಂ ಹಾಗೂ ನಂತರದ ಸಮ್ಮೇಳನದಲ್ಲಿ, ಚರ್ಚೆಗಳಲ್ಲಿ ಭಾಗವಹಿಸಿದ ಕೆಲವು ಸಂಗಾತಿಗಳು ಈ ಸಮಸ್ಯೆಯನ್ನು ಒರಟಾಗಿ ಮುಂದಿಟ್ಟ ರೀತಿ ಹೀಗಿದೆ–'ನರೆತಕೂದಲಿನವರು (ಹಳೆಯ ಮುಖಂಡರು ಮತ್ತು ಸದಸ್ಯರು) ಕಪ್ಪು ಕೂದಲಿನವರಿಗೆ (ಹೊಸ ಮುಖಂಡರು ಮತ್ತು ಸದಸ್ಯರಿಗೆ) ದಾರಿ ಕೊಡಬೇಕು'. ವರ್ಗ ಹೋರಾಟದ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ಸಿದ್ಧಾಂತದ ಸ್ಥಾನದಲ್ಲಿ "ಪೀಳಿಗೆಯ ಅಂತರ"ದ ಬೂರ್ಜ್ವಾ ಸಿದ್ಧಾಂತ ತರುವ ಈ ಶೂನ್ಯವಾದೀ ಮಾರ್ಗದ ವಿರುದ್ಧ ಸಾಕಷ್ಟು ಶಕ್ತಿಯುತವಾಗಿ ಹೋರಾಟ ನಡೆದಿಲ್ಲ. ಈ

ಕಲ್ಕತ್ತಾ ಅಧಿವೇಶನ

1983ರ ಚುನಾವಣೆಗಳಲ್ಲಿ ಸ್ವಾತಂತ್ರ್ಯಾನಂತರ ಮೊತ್ತ ಮೊದಲ ಬಾರಿಗೆ ಕಾಂಗ್ರೆಸ್ (ಐ) ಸೋತಾಗ ಕರ್ನಾಟಕದ ರಾಜಕೀಯ ಒಂದು ಮಹತ್ವದ ತಿರುವನ್ನು ಕಂಡಿತು. ಸಿಪಿಐ (ಎಂ), ಸಿಪಿಐ ಮತ್ತು ಬಿಜೆಪಿ ಬೆಂಬಲದೊಂದಿಗೆ ಜನತಾ ಸರಕಾರ ಅಸ್ತಿತ್ವಕ್ಕೆ ಬಂತು. ಚುನಾವಣೆಗಳಲ್ಲಿ ಜನತಾದೊಂದಿಗೆ ಪರಸ್ಪರ ತಿಳುವಳಿಕೆಯಾಯಿತು. ಮೊತ್ತ ಮೊದಲ ಬಾರಿಗೆ ನಾವು ವಿಧಾನಮಂಡಲದಲ್ಲಿ ಮೂರು ಸ್ಥಾನಗಳನ್ನು ಪಡೆದೆವು. ಈ ವಿಜಯ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೊಂದು ದೊಡ್ಡ ಉತ್ತೇಜನ ನೀಡಿತು. ಆಂಧ್ರದಲ್ಲಿನ ಸೋಲಿನ ಜೊತೆಗೆ ಇದು ದಕ್ಷಿಣದಲ್ಲಿ ಸರ್ವಾಧಿಕಾರಿ ಪಕ್ಷದ ಹಿಡಿತವನ್ನು ದುರ್ಬಲಗೊಳಿಸಿತು.

ಆದರೆ ಕಾಂಗ್ರೆಸ್‌ನ ಕುತಂತ್ರಗಳಿಂದಾಗಿ ಕ್ರಾಂತಿರಂಗದ ಗುಂಪು ಹೊರಬಂತು. ಕೇಂದ್ರ ಸರ್ಕಾರ ಈ ಮಂತ್ರಿಮಂಡಲವನ್ನು ಉರುಳಿಸಲು ಪ್ರಯತ್ನಿಸಿತು. 1984ರ ಚುನಾವಣೆಗಳು ಅಂತಿಮವಾಗಿ ಶ್ರೀಮತಿ ಗಾಂಧಿಯವರ ಹತ್ಯೆಯಿಂದ ಕಾಂಗ್ರೆಸ್ ಸಂಸದೀಯ ಚುನಾವಣೆಗಳಲ್ಲಿ 28ರಲ್ಲಿ 24 ಸ್ಥಾನ ಪಡೆದು ದೊಡ್ಡ ವಿಜಯ ಗಳಿಸುವಂತಾಯಿತು. ಹೆಗ್ಡೆ ರಾಜೀನಾಮೆ ನೀಡಿದರು. ಮಾರ್ಚ್‌ನಲ್ಲಿ ಮಧ್ಯಂತರ ಚುನಾವಣೆಗಳು ನಡೆದವು. ಬಿಜೆಪಿ ಮತ್ತು ಜನತಾ ನಡುವಿನ ಪರಸ್ಪರ ತಿಳುವಳಿಕೆ ಮುರಿದುಬಿತ್ತು. ಜನತಾ ಪಕ್ಷ ಸ್ಥಾನಗಳ ಹೊಂದಾಣಿಕೆ ಬಗ್ಗೆ ಸಿಪಿಐ (ಎಂ) ಹಾಗೂ ಸಿಪಿಐ ಜೊತೆ ಒಪ್ಪಂದಕ್ಕೆ ಬಂತು. ಸಂಸದೀಯ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಅಗಾಧ ವಿಜಯದ ಹಿನ್ನೆಲೆಯಲ್ಲಿ ಜನತಾ ಪಕ್ಷ ವಿಧಾನಸಭೆಯಲ್ಲಿ ನಿಚ್ಚಳ ಬಹುಮತ ಗೆದ್ದು ಕಾಂಗ್ರೆಸ್ಸಿಗೆ ಎರಡನೇ ಬಾರಿ ದೃಢಹೊಡೆತ ನೀಡಿತು. ಕಾಂಗ್ರೆಸ್ ವಿರೋಧಿ ಶಕ್ತಿಗಳ ಈ ವಿಜಯ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಗೊಳಿಸಿದೆ. ನಮ್ಮ ಪಕ್ಷ ಹಿಂದಿನ ಮೂರು ಸ್ಥಾನಗಳನ್ನು ಕಳೆದುಕೊಂಡು ಎರಡು ಸ್ಥಾನಗಳನ್ನು ಗೆದ್ದಿತು.

ಈ ಚುನಾವಣೆಗಳ ನಂತರ ಜನತಾ ಸರ್ಕಾರದ ಕಾರ್ಯನಿರ್ವಹಣೆ ಹಿಂಜರಿತ ಕಂಡಿತು. ಬಸ್ ಹಾಗೂ ವಿದ್ಯುಚ್ಛಕ್ತಿ ದರಗಳಲ್ಲಿ ಏರಿಕೆ, ಕ್ಯಾಪಿಟೇಶನ್ ಶುಲ್ಕದ ಬಗ್ಗೆ ಮಾತಿನಂತೆ ನಡೆಯದಿದ್ದುದು, ಭಾಷಾ ಸಂಕುಚಿತವಾದಿಗಳ ಒತ್ತಡಕ್ಕೆ ಬಲಿಬಿದ್ದದ್ದು ಮುಂತಾದ ಹಲವು ಜನ-ವಿರೋಧಿ ಕ್ರಮಗಳನ್ನು ಅವರ ಕೈಗೊಂಡರು.

ನಮ್ಮ ಪಕ್ಷ ಸ್ವತಂತ್ರವಾಗಿ ಮತ್ತು ಸಿಪಿಐ ಹಾಗೂ ಎಡ ಶಕ್ತಿಗಳೊಂದಿಗೆ ಸೇರಿಕೊಂಡು ಈ ಧೋರಣೆಗಳ ವಿರುದ್ಧ ಪ್ರತಿರೋಧ ನೀಡಲು ಹಾಗೂ ಜನರನ್ನು ಅಣಿನೆರೆಸಲು ಪ್ರಯತ್ನಿಸು

ಕೆಲಸವನ್ನು ಈಗ ಕೈಗೆತ್ತಿಕೊಳ್ಳಬೇಕು.

ಕೊನೆಯದಾಗಿ ರಾಜ್ಯ ಪಕ್ಷದ ಕೇಂದ್ರದ ಸಂಘಟನೆ ಸುಧಾರಣೆಗೊಳ್ಳಬೇಕಾಗಿದೆ. ಯಾಕೆಂದರೆ 1979ರ ಮೊದಲಿನ ನಗ್ನ ಅಧಿಕಾರಶಾಹಿ ಈಗ ಉಳಿದಿಲ್ಲವಾದರೂ ಪ್ರಜಾಸತ್ತಾತ್ಮಕ ಕೇಂದ್ರವಾದ ಇನ್ನೂ ಸ್ಥಾಪನೆಯಾಗಬೇಕಿದೆ. ವೈಯಕ್ತಿಕ ಜವಾಬ್ದಾರಿಯೊಂದಿಗೆ ಸಾಮೂಹಿಕ ಕಾರ್ಯನಿರ್ವಹಣೆ, ರಾಜ್ಯ ಸಮಿತಿ ಮತ್ತು ಸೆಕ್ರೆಟೇರಿಯೇಟ್ ಸದಸ್ಯರ ಕೆಲಸದ ಸತತ ಪರಿಶೀಲನೆ. ಜಿಲ್ಲಾ ಮತ್ತು ಕೆಳಮಟ್ಟದ ಸಮಿತಿಗಳಿಗೆ ಸೆಕ್ರೆಟೇರಿಯೇಟ್‌ನಿಂದ ಸಾಮೂಹಿಕ ಮಾರ್ಗದರ್ಶನ ಇವೆಲ್ಲಾ ಆಗುವಂತೆ ನೋಡಿಕೊಳ್ಳಬೇಕಾಗಿದೆ. ಕಳೆದ ಕೆಲವು ತಿಂಗಳಲ್ಲಿ ಆಗಿರುವ ಸುಧಾರಣೆಯನ್ನು ಮಾನ್ಯಮಾಡುತ್ತಾ ಈ ದಿಸೆಯಲ್ಲಾದ ಕೆಲಸವನ್ನೂ ಮುಂದುವರಿಸಬೇಕು.

ವಿಜಯವಾಡ ಮಹಾಧಿವೇಶನ ಕರ್ನಾಟಕಕ್ಕೆ ನೀಡಿದ ಮಾರ್ಗದರ್ಶನ, ಅದು ಕಾರ್ಯಗತವಾದ ಬಗ್ಗೆ–ಈ ಬಗ್ಗೆ ಕಲ್ಕತ್ತಾ ಮಹಾಧಿವೇಶನ ವಿಮರ್ಶಿಸಿತ್ತು. ಹಾಗೂ ರಾಜಕೀಯ-ಸಂಘಟನಾತ್ಮಕ ಆದೇಶ ನೀಡಿತು.

13ನೇ ಮಹಾಧಿವೇಶನದ ಮುನ್ನ ಈ ಕರ್ತವ್ಯಗಳ ಬಗ್ಗೆ ಚಿಂತನ, ಮಥನ, ಹಾಗೂ ವಿಮರ್ಶೆ ವಿವಿಧ ಮಟ್ಟದ ಸಮ್ಮೇಳನಗಳಲ್ಲಿ ನಡೆಯಬೇಕಾಗಿದೆ.

1985ರ ಡಿಸೆಂಬರ್ 25ರಿಂದ 30ರ ವರೆಗೆ ಜರುಗಿದ

12 ನೇ ಮಹಾಧಿವೇಶನದ

ರಾಜಕೀಯ-ಸಂಘಟನಾ ವರದಿಯ

ಕರ್ನಾಟಕದ ಕುರಿತಾದ ವರದಿಯನ್ನು ಮತ್ತೊಮ್ಮೆ ನೋಡೋಣ

ತ್ತಿದೆ. ಅದೇ ಹೊತ್ತಿಗೆ ವಿಚ್ಛಿದ್ರತೆ ಹಾಗೂ ಪರಿಸ್ಥಿತಿಯ ದುರ್ಲಾಭಪಡೆಯುವ ಕಾಂಗ್ರೆಸ್ (ಐ) ಪ್ರಯತ್ನಗಳನ್ನು ಎದುರಿಸುತ್ತಿದೆ.

ರಾಜ್ಯದ ಅಭಿವೃದ್ಧಿಯ ಬಗ್ಗೆ ಕೇಂದ್ರದ ಮಲತಾಯಿ ಧೋರಣೆಯ ವಿರುದ್ಧ ಜುಲೈ 1985ರ ಚಳುವಳಿಯಲ್ಲಿ ಪಕ್ಷದ ಕರೆಯ ಮೇರೆಗೆ ರಾಜ್ಯಾದ್ಯಂತ 20 ಸಾವಿರ ಜನ ರೈಲು ತಡೆ ಹಾಗೂ ಅಂಚೆ ಕಛೇರಿಗಳ ಪಿಕೆಟಿಂಗ್‌ನಲ್ಲಿ ಭಾಗವಹಿಸಿದರು. ಆಗಸ್ಟ್ 9 ರಂದು ಕನಿಷ್ಠ ಕೂಲಿ ನಿಗಧಿಗಾಗಿ ಕಾರ್ಮಿಕ ಸಂಘಗಳ ಮಟ್ಟದಲ್ಲಿ ಒಂದು ದೊಡ್ಡ ಆಂದೋಲನ ನಡೆಯಿತು. 30 ಸಾವಿರ ಮಂದಿ ರಾಜ್ಯ ಸರ್ಕಾರದ ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿದರು. 5 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಆ ದಿನ ಮುಷ್ಕರ ನಡೆಸಿದರು.

ರಾಜ್ಯ ಸಮಿತಿ ಹಾಗೂ ಕಾರ್ಯದರ್ಶಿ ಮಂಡಳಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳೊಂದಿಗೆ ಅತಿ ಎಡ ಹಾಗೂ ಕ್ರಿಶ್ಚಿಯನ್ ಎಡ ವ್ಯಕ್ತಿಗಳು ನುಸುಳಿದ್ದನ್ನು ಗಂಭೀರವಾಗಿ ಪರಿಗಣಿಸಬೇಕಾಗಿ ಬಂತು. ರಾಜ್ಯ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ ಮಂಡಳಿಯ ಒಂದು ತಪ್ಪು ತಿಳಿವು ಹಾಗೂ ಉದಾರವಾದದಿಂದಾಗಿ ಕೇಂದ್ರ ಸಮಿತಿ ಈ ಬಗ್ಗೆ ವಿಚಾರಣೆ ನಡೆಸಲು ಮೂರು ಸದಸ್ಯರ ಆಯೋಗವೊಂದನ್ನು ರಚಿಸಬೇಕಾಯಿತು. ಆಯೋಗದ ಶಿಫಾರಸನ್ನು ಆಧರಿಸಿ ಸಂಘಟನೆಯಲ್ಲಿ ನುಸುಳುವುದನ್ನು ತಡೆಯಲು ಹಾಗೂ ಪಟ್ಟ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಪರ ಪ್ರಭಾವವನ್ನು ಎದುರಿಸಲು ಇಡೀ ಪಕ್ಷಕ್ಕೆ ಶಿಕ್ಷಣ ನೀಡಲು ಕ್ರಮಕೈಗೊಳ್ಳಬೇಕೆಂದು ಕೇಂದ್ರ ಸಮಿತಿ ನಿರ್ದೇಶನ ನೀಡಿತು. ರಾಜ್ಯ ಕಾರ್ಯದರ್ಶಿಯವರನ್ನು ಬದಲಿಸಲಾಯ್ತು. ಕೆಲವು ಸಮಿತಿಗಳನ್ನು ಪುನರ್‌ರಚಿಸಲಾಯಿತು. ಹನ್ನೊಂದನೇ ಅಧಿವೇಶನದ ರಾಜಕೀಯ–ಸಂಘಟನಾತ್ಮಕ ವರದಿ ಈ ಅಪಾಯದ ಬಗ್ಗೆ ಎಚ್ಚರಿಸಿತ್ತು. ಕಳೆದೆರಡು ವರ್ಷ ಕ್ರಿಶ್ಚಿಯನ್ ಎಡ, ದಲಿತ ಹಾಗೂ ನಕ್ಸಲೈಟ್ ಪ್ರಭಾವಗಳನ್ನು ಎದುರಿಸಲು ಪಕ್ಷಕ್ಕೆ ಶಿಕ್ಷಣ ನೀಡಲಾಯಿತು. ಶಿಕ್ಷಣದ ಈ ಪ್ರಕ್ರಿಯೆ ಮುಂದುವರಿಯಬೇಕು. ಮಾರ್ಕ್ಸ್‌ವಾದ ಲೆನಿನ್‌ವಾದದ ಸಂಘಟನಾ ನೀತಿಗಳಿಗೆ ವಿರೋಧವಾದ ಹಳಬರ ವಿರುದ್ಧ ಯುವಕರು ಎಂಬ ಪ್ರವೃತ್ತಿಯ ವಿರುದ್ಧ ಭವಿಷ್ಯದಲ್ಲಿ ರಾಜ್ಯಸಮಿತಿ ಜಾಗರೂಕವಾಗಿರಬೇಕು.

ಐಕ್ಯರಂಗ ವಾರಪತ್ರಿಕೆಯ ಪ್ರಸಾರ ಕೇವಲ 2300. ಅದರ ವಿಷಯ, ವಸ್ತು ಮತ್ತು ಪ್ರಸಾರ ಸುಧಾರಿಸಲು ಹೆಚ್ಚು ಪ್ರಯತ್ನ ನಡೆಸಬೇಕು.

ಕಾರ್ಮಿಕರ ನಡುವೆ ಸಿಐಟಿಯುನ ಪ್ರಭಾವ ಬೆಳೆಯುತ್ತಿದೆ. ಸಾರ್ವಜನಿಕ ವಲಯದ ಘಟಕಗಳಿಗೆ ಸಂಬಂಧಪಟ್ಟಂತೆ ಸ್ವಲ್ಪ ಪ್ರಗತಿಯಾಗಿದೆ. ಬೆಂಗಳೂರಿನಲ್ಲಿ ಅಖಿಲ ಭಾರತ ಸಾರ್ವಜನಿಕ ವಲಯದ ಸಮಾವೇಶ ಯಶಸ್ವಿಯಾಗಿ ಜರುಗಿತು.

ಪಕ್ಷದ ಸದಸ್ಯತ್ವ 1981ರಲ್ಲಿ 2196ರಿಂದ 1985ರಲ್ಲಿ 2432ಕ್ಕಷ್ಟೇ ಏರಿತು. ಸದಸ್ಯತ್ವ ಏರಿಕೆ ಪಕ್ಷ ಹೊಂದಿರುವ ಪ್ರಭಾವಕ್ಕೆ ಅನುಗುಣವಾಗಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿ ಸದಸ್ಯತ್ವ 200ಕ್ಕೂ ಕಡಿಮೆ.

ಸಾಮೂಹಿಕ ಸಂಘಟನೆಗಳಲ್ಲಿ ಕಿಸಾನ್‌ಸಭಾ ಸದಸ್ಯತ್ವದಲ್ಲಿ ಒಳ್ಳೆಯ ಪ್ರಗತಿ ಕಂಡುಬಂದಿದೆ. 1981–82ರ 30,000 1984–85ರಲ್ಲಿ 83,900 ಆಗಿದೆ.

ಎಸ್‌ಎಫ್‌ಐ ಕೂಡಾ ತನ್ನ ಪ್ರಭಾವ ಹಾಗೂ ಸದಸ್ಯತ್ವ ಹೆಚ್ಚಿಸಿದೆ. 1981ರ 5172ರಿಂದ ಅದು 1984ರಲ್ಲಿ 15191 ಆಗಿದೆ. ಡಿವೈಎಫ್‌ಐ ಸದಸ್ಯತ್ವ 1984ರಲ್ಲಿ 6553.

ಮಹಿಳಾರಂಗ ಹಾಗೂ ಸಾಂಸ್ಕೃತಿಕ ರಂಗದಲ್ಲಿನ ಕೆಲಸವನ್ನು ಹಿಂದಿನ ಅನುಭವದ ಆಧಾರದ ಮೇಲೆ ವಿಮರ್ಶಿಸಿ ಎಡಸೋಗಿನ ಹಾಗೂ ಅತಿ ಎಡ ಪ್ರವೃತ್ತಿಗಳು ಈ ಸಂಘಟನೆಗಳನ್ನು ಹಳಿ ತಪ್ಪಿಸದಂತೆ ಅವಕ್ಕೆ ಮರು ನಿರ್ದೇಶನ ಒದಗಿಸಬೇಕೆಂದು ರಾಜ್ಯ ಸಮ್ಮೇಳನ ನಿರ್ಧರಿಸಿದೆ.

ಪೀಪಲ್ಸ್ ಡೆಮಾಕ್ರಸಿಯ ಪ್ರಸಾರ ರಾಜ್ಯದಲ್ಲಿ ಕೇವಲ 374. ಈ ಅಂಶದ ಮೇಲೆ ಗಮನ ನೀಡಿಲ್ಲ.

ಕರ್ನಾಟಕದಲ್ಲಿ ಪಕ್ಷದೊಳಗಿನ ಪರಿಸ್ಥಿತಿ ಹಾಗೂ ಸಂಘಟನೆಯಲ್ಲಿ ಬಹಳಷ್ಟು ಸುಧಾರಣೆ ಅಗತ್ಯ. ಬೆಂಗಳೂರು ಜಿಲ್ಲಾ ಸಮಿತಿ ಹೆಚ್ಚಿನ ಹೊಂದಾಣಿಕೆಯಿಂದ ಸಾಮೂಹಿಕ ಕಾರ್ಯನಿರ್ವಹಣೆಯ ಭಾವನೆಯಿಂದ ಕೆಲಸ ಮಾಡುವಂತೆ ನೋಡಿಕೊಳ್ಳುವುದು ಅತ್ಯಗತ್ಯ.

ಗುಂಪುಗಾರಿಕೆ, ವೈಯಕ್ತಿಕತೆ ಮತ್ತು ಅಧಿಕಾರಶಾಹಿ ವರ್ತನೆ ಆಗಾಗ ವ್ಯಕ್ತಗೊಳ್ಳುತ್ತಿವೆ. ಅವು ಪಕ್ಷದ ಪ್ರಗತಿಗೆ ತಡೆಯುಂಟು ಮಾಡುತ್ತವೆ. ಪಕ್ಷದ ನೀತಿ-ನಿಯಮಗಳನ್ನು ಸಮಯಸಾಧಕತನದಿಂದ ಉಲ್ಲಂಘಿಸುವವರ ಬಗ್ಗೆ ಉದಾರವಾದ ಇದರ ಜತೆಗಿದೆ. ಪಕ್ಷದ ಕಾರ್ಯದರ್ಶಿ ಮಂಡಳಿಯ ಮಟ್ಟದಲ್ಲಿ ಸಿಐಟಿಯು ಹಾಗೂ ಟ್ರೇಡ್ ಯೂನಿಯನ್ ಮಟ್ಟಗಳಲ್ಲಿ ಹೆಚ್ಚಿನ ಸಾಮೂಹಿಕ ಕಾರ್ಯನಿರ್ವಹಣೆಯ ಅಗತ್ಯವಿದೆ.

ಪ್ರಾಥಮಿಕ ಘಟಕದ ಮಹತ್ವ

ಪಕ್ಷದ ಪ್ರಾಥಮಿಕ ಘಟಕ ಅರ್ಥಾತ್ ಶಾಖೆಯ ಕಾರ್ಯನಿರ್ವಹಣೆಯ ಬಗ್ಗೆ ವಿಶೇಷ ಗಮನ ನೀಡಬೇಕು, ವಿಶೇಷವಾಗಿ ಪಕ್ಷ ದುರ್ಬಲವಾಗಿರುವ ರಾಜ್ಯಗಳಲ್ಲಿ. ಶಾಖೆಗಳ ಕೆಲಸದಲ್ಲಿನ ದೌರ್ಬಲ್ಯ ಹೊಸ ಸದಸ್ಯರ ಭರ್ತಿಯಲ್ಲಿ, ಪಕ್ಷದ ಪತ್ರಿಕೆಗಳ ಮಾರಾಟದಲ್ಲಿ ಮತ್ತು ಸಾಮೂಹಿಕ ಸಂಘಟನೆಗಳ ಪ್ರಾಥಮಿಕ ಘಟಕಗಳ ಕೆಲಸದಲ್ಲಿ ಸ್ಥಗಿತತೆ ಉಂಟಾಗಲು ಒಂದು ಕಾರಣ.

ಪಕ್ಷದ ವರ್ಗ ಸಂಯೋಜನೆ

ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳಿಂದ ಬಂದ ಸದಸ್ಯರ ಪ್ರಮಾಣವನ್ನು ಹೆಚ್ಚಿಸುವ ಪ್ರಶ್ನೆಯತ್ತ ಗಮನ ಕೊಡುವಾಗಲೇ, ಬೂರ್ಜ್ವಾ ಶಬ್ದಕೋಶದಲ್ಲಿ "ದುರ್ಬಲ ವಿಭಾಗಗಳು" ಎಂದೆನಿಸಿಕೊಳ್ಳಲು ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು, ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ಮಹಿಳೆಯರು ಈ ವಿಭಾಗಗಳಿಂದ ಬರುವ ಕಾರ್ಯಕರ್ತರನ್ನು ಯೋಜನಾಬದ್ಧ ರೀತಿಯಲ್ಲಿ ಪಕ್ಷಕ್ಕೆ ಭರ್ತಿ ಮಾಡಿಕೊಳ್ಳುವ, ಶಿಕ್ಷಣ ನೀಡುವ, ಉಚ್ಚ ಜವಾಬ್ದಾರಿಗಳಿಗೇರಿಸುವ ಕೆಲಸ ನಮ್ಮ ಸಾಮಾಜಿಕ ಪರಿಸ್ಥಿತಿಯಲ್ಲಿ ಪಕ್ಷದ ವಿಸ್ತರಣೆಗೆ ಅಗತ್ಯ. ಈ ಬಗ್ಗೆ ಗಮನ ನೀಡುವುದು ನಮ್ಮ ಪಕ್ಷದ ವರ್ಗ ಸಂಯೋಜನೆಯನ್ನು ಬದಲಿಸುವ ಪ್ರಯತ್ನದ ಅವಿಭಾಜ್ಯ ಅಂಗ.

–13ನೇ ಮಹಾಧಿವೇಶನದ ರಾಜಕೀಯ ಸಂಘಟನಾ ವರದಿಯ ಭಾಗ II ರಿಂದ

XIII
ಡಿಸೆಂಬರ್ 25-30 1985

ಇದು ಲೆನಿನ್‌ರವರು ವಿಪೆರ್ಯೋದ್ (ಮುನ್ನಡೆ) ಎಂಬ ಪತ್ರಿಕೆಯಲ್ಲಿ ಮಾರ್ಚ್ 8, 1905 ರಂದು ಬರೆದ ಲೇಖನ. ಆಗ ರಷ್ಯಾದ ಪ್ರಥಮ ಕ್ರಾಂತಿ ಆರಂಭವಾಗಿದ್ದ ಕಾಲ. ಎರಡು ವರ್ಷಗಳ ಹಿಂದೆ ಪಕ್ಷದ ಸಂಘಟನಾ [illegible] ನಿಯಮಗಳನ್ನು ಅಂಗೀಕರಿಸಿದ ಎರಡನೇ ಮಹಾಧಿವೇಶನ ನಡೆದಿತ್ತು. ಮೂರನೇ ಮಹಾಧಿವೇಶನ [illegible] ವಾಗಿತ್ತು. ಈ ಹಿನ್ನೆಲೆಯಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿಯ ರಂಗತಾಲೀಮು [illegible] ಕ್ರಾಂತಿಯ ವಾತಾವರಣ ರಶ್ಯಾದಲ್ಲೆಲ್ಲಾ ವ್ಯಾಪಿಸಿದ್ದ ಕಾಲವದು. ಕಾರ್ಮಿಕ ವರ್ಗದ ಹೊಸ-ಹೊಸ ಜನಗಳು [illegible] ಹೋರಾಡುತ್ತಿದ್ದವು. ರೈತಾಪಿ ವರ್ಗಗಳಲ್ಲಿ, ಇತರ ಪ್ರಜಾಪ್ರಭುತ್ವವಾದಿಗಳ ವಿಭಾಗಗಳಲ್ಲೂ ಕ್ರಾಂತಿಕಾರಿ ಮನೋಭಾವ ವ್ಯಕ್ತಗೊಳ್ಳುತ್ತಿತ್ತು. 1905-87ರ ಈ ಅವಧಿಯಲ್ಲಿ ರಶ್ಯನ್ ಪಕ್ಷ ಗಳಿಸಿದ ಅನುಭವ 1917ರ ಚಾರಿತ್ರಿಕ ಸಾಧನೆಗೆ ಅಡಿಗಲ್ಲು ಹಾಕಿತು.

ಲೆನಿನ್‌ರವರು ಈ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಈ ಲೇಖನದ ಮೂಲಕ ನೀಡಿದ ಮಾರ್ಗದರ್ಶನ ಈಗ, ಮುಖ್ಯವಾಗಿ ಡಿಸೆಂಬರ್ 9ರ ಚಾರಿತ್ರಿಕ ರ್‍ಯಾಲಿಯ ನಂತರ ದೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ಸನ್ನಿವೇಶದಲ್ಲಿ ನಮಗೂ ಮಾರ್ಗದರ್ಶಕವಾಗಬಲ್ಲವು ಎಂಬ ಉದ್ದೇಶದಿಂದ ಕಾಂ. ಪಿ. ರಾಮಚಂದ್ರರಾವ್ ಇದನ್ನು ಅನುವಾದಿಸಿದ್ದಾರೆ.

ಈ ಲೇಖನದಲ್ಲಿ ಬರುವ ಸಮಾಜವಾದೀ-ಪ್ರಜಾಪ್ರಭುತ್ವವಾದಿಗಳು ಅಥವಾ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳೆಂದರೆ ಈಗಿನ ಸೋವಿಯತ್ ಕಮ್ಯುನಿಸ್ಟ್ ಪಕ್ಷವೇ. ಕ್ರಾಂತಿಯ ನಂತರ 1918 ರಲ್ಲಿ ಏಳನೇ ಮಹಾಧಿವೇಶನ ನಡೆಯುವವರೆಗೆ ಸೋವಿಯತ್ ರಷ್ಯದ ಕಮ್ಯುನಿಸ್ಟ್ ಪಕ್ಷದ ಹೆಸರು "ರಷ್ಯನ್ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಕಾರ್ಮಿಕ ಪಕ್ಷ" ಎಂದೇ ಇತ್ತು ಎಂಬುದನ್ನು ಗಮನಿಸಬೇಕು.

ಹೊಸ ಕರ್ತವ್ಯಗಳು - ಹೊಸ ಶಕ್ತಿಗಳು

[redacted]ವಾದಿ – ಪ್ರಜಾಪ್ರಭುತ್ವದ [redacted]ಗೆ ಸಂಬಂಧಿಸಿ ರಷ್ಯಾದಲ್ಲಿ ಸಾಮೂಹಿಕ ಕಾರ್ಮಿಕ ವರ್ಗದ ಚಳುವಳಿಯ ಬೆಳವಣಿಗೆಯಲ್ಲಿ ಮೂರು ಪ್ರಮುಖ ಹಂತಗಳನ್ನು ಗುರುತಿಸಬಹುದು.

ಒಂದನೇಯದು. ಸಂಕುಚಿತ ಪ್ರಚಾರಾತ್ಮಕ ವರ್ತುಲಗಳಿಂದ ಜನ ಸಮೂಹಗಳ ಮಧ್ಯೆ ವಿಶಾಲವಾದ ಆರ್ಥಿಕ ಪ್ರಕ್ಷೋಭೆಗೆ ಪರಿವರ್ತನೆಯಾಗುವ ಹಂತ.

ಎರಡನೇಯದಾಗಿ. ವಿಶಾಲ ತಳಹದಿಯಲ್ಲಿ ರಾಜಕೀಯ ಪ್ರಕ್ಷೋಭೆ ಮತ್ತು ಪ್ರತ್ಯಕ್ಷ ಬೀದಿ ಪ್ರದರ್ಶನಗಳ ಹಂತ.

ಮೂರನೇಯದಾಗಿ ನಿಜವಾದ ಅಂತರಿಕ ಯುದ್ಧ, ನೇರ ಕ್ರಾಂತಿಕಾರಿ ಹೋರಾಟ. ಸಶಸ್ತ್ರ ಜನತಾ ಕ್ರಾಂತಿಯ ಹಂತ. ಈ ಪ್ರತಿಯೊಂದು ಪರಿವರ್ತನೆಯು ಒಂದೆಡೆ ಮುಖ್ಯತಃ ಒಂದೇ ದಿಕ್ಕಿನಲ್ಲಿ ಕಾರ್ಯನೆಸಗುವ ಸಮಾಜವಾದಿ ಚಿಂತನೆಯಿಂದ ತಯಾರುಗೊಳ್ಳುವುದು.

ಈಗ ಹೊಸ ಉತ್ಕ್ರಾಂತಿಗಳು ಎದ್ದು ಬರುತ್ತಿರುವ ಸಮಯದಲ್ಲಿ ಅನೇ ಹಳಸಲು ಸಿದ್ಧಾಂತಗಳು, ಅಭಿಪ್ರಾಯಗಳು ಬೇರೆ ರೂಪಗಳಲ್ಲಿ ಮತ್ತೊಮ್ಮೆ ಕಾಣಬರುತ್ತಿವೆ. ಈ ಚಳುವಳಿಯು ಮತ್ತೊಮ್ಮೆ ಈ ಎಲ್ಲಾ ಹಳಸಲಾದ, ಸತ್ತ ವಿಚಾರಗಳ ಪಳೆಯುಳಿಕೆಗಳನ್ನು ಬದಿಗೆ ತಳ್ಳಿ ಮುಂದುವರೆಯಲಿದೆ.

ಇನ್ನೊಂದೆಡೆ ಜನತೆಯ ಜೀವನದಲ್ಲಿ ಉಂಟಾಗುವ ಆಳವಾದ ಬದಲಾವಣೆಗಳಿಂದ, ಕಾರ್ಮಿಕ ವರ್ಗದ ಇಡೀ ಮನೋಭಾವದಲ್ಲುಂಟಾಗುವ ಬದಲಾವಣೆಗಳಿಂದ ಮತ್ತು ಹೆಚ್ಚೆಚ್ಚು ವಿಶಾಲವಾದ ಕಾರ್ಮಿಕ ವರ್ಗದ ವಿಭಾಗಗಳು ಹೆಚ್ಚೆಚ್ಚು ಜಾಗೃತವಾಗಿ ಸಕ್ರಿಯ ಹೋರಾಟಗಳನ್ನು ಮಾಡುವ ಮೂಲಕ ತಯಾರುಗೊಳ್ಳುವುದು. ಕೆಲವೊಮ್ಮೆ ಈ ಬದಲಾವಣೆಗಳು ಅಗೋಚರವಾಗಿ ನಡೆಯುವುದು. ಕಾರ್ಮಿಕ ವರ್ಗವು ತನ್ನ ಶಕ್ತಿಗಳನ್ನು ತೆರೆಮರೆಯಲ್ಲಿ ಯಾವ ಕೋಲಾಹಲವೂ ಇಲ್ಲದೆ ಅಣಿ ನೆರೆಸುವುದು. ಆ ಕಾರಣದಿಂದಾಗಿ ಬುದ್ಧಿಜೀವಿಗಳಿಗೆ ಹಲವು ಬಾರಿ ಸಾಮೂಹಿಕ ಚಳುವಳಿಯ ಜೀವಂತ ಶಕ್ತಿ ಮತ್ತು ದೀರ್ಘ ಕಾಲ ಬಾಳುವ ಗುಣದ ಕುರಿತು ಸಂಶಯ ಪಡುವಂತಾಗುತ್ತದೆ. ಆಗ ಒಂದು ತಿರುವು ಬಿಂದು ಉಂಟಾಗುವುದು. ಇಡೀ ಕ್ರಾಂತಿಕಾರಿ ಚಳುವಳಿಯು ಏಕಾಏಕಿ ಎಂಬಂತೆ ಒಂದು ಹೊಸ ಮತ್ತು ಮೇಲಿನ ಘಟ್ಟಕ್ಕೆ ಏರುವುದು. ಕಾರ್ಮಿಕ ವರ್ಗ ಮತ್ತು ಅದರ ಸಮಾಜವಾದಿ-ಪ್ರಜಾಪ್ರಭುತ್ವದ ಮುಂದಿಳ ಹೊಸ ಪ್ರಾಯೋಗಿಕ ಕರ್ತವ್ಯಗಳನ್ನು ಎದುರಿಸಬೇಕಾಗುವುದು, ಅವುಗಳನ್ನು ಎದುರಿಸಲು ಹೊಸ ಶಕ್ತಿಗಳು ನೆಲದೊಳಗಿಂದಲೋ ಎಂಬಂತೆ ಎದ್ದು ಬರುತ್ತವೆ; ತಿರುವು ಬಿಂದುವಿನ ಸ್ವಲ್ಪ ಮೊದಲು ಅಂಥ ಶಕ್ತಿಗಳು ಅಸ್ತಿತ್ವದಲ್ಲಿ ಇವೆ ಎಂಬುದನ್ನು ಊಹಿಸಲು ಅಸಾಧ್ಯವಾಗಿತ್ತು.

ಆದರೆ ಇದೆಲ್ಲಾ ಒಂದೇ ಸಲ ಸಂಭವಿಸಲಿಲ್ಲ. ಸಮಾಜವಾದಿ–ಪ್ರಜಾಪ್ರಭುತ್ವ ಚಳುವಳಿಯೊಳಗೆ ಹಲವಾರು ಪ್ರವಾಹಗಳ ನಡುವಿನ ಹೋರಾಟಗಳಿಲ್ಲದೆ, ಚಂಚಲತೆಗಳಿಲ್ಲದೆ. ಬಹಳ ಕಾಲದ ಹಿಂದೆಯೇ ಅಳಿದು ಹೋಗಿವೆ ಎಂದು ಅಂದುಕೊಂಡಿದ್ದ ಅಭಿಪ್ರಾಯಗಳ ಮರುಕಳುಹಿಸುವಿಕೆಯಿಲ್ಲದೆ ಇದೆಲ್ಲಾ ನಡೆಯಲಿಲ್ಲ.

ರಷ್ಯಾದಲ್ಲಿ ಮತ್ತೊಮ್ಮೆ ಸಮಾಜವಾದಿ ಪ್ರಜಾಪ್ರಭುತ್ವವು ಚಂಚಲತೆಯ ಕಾಲ ಘಟ್ಟವನ್ನು ಹಾದುಹೋಗುತ್ತಿದೆ. ರಾಜಕೀಯ ಚಳುವಳಿ ಸಮಯಸಾಧಕ ಸಿದ್ಧಾಂತಗಳನ್ನು ಭೇದಿಸಿಕೊಂಡು ಹೋಗಬೇಕಾಗಿದ್ದ ಕಾಲವೊಂದಿತ್ತು. ಆಗ "ವರ್ಗ'' ಎಂಬ ಪದವನ್ನು ಮತ್ತೆ ಮತ್ತೆ ವಿಪರೀತವಾಗಿ ಬಳಸಲಾಗುತ್ತಿತ್ತು. ಪಕ್ಷ ಕಾರ್ಮಿಕ ವರ್ಗದ ಬಾಲಹಿಡಿದು ಸಾಗುತ್ತಿದೆ ಎಂದು ಹೇಳುವ ಮೂಲಕ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಪಕ್ಷ ಕಾರ್ಮಿಕ ವರ್ಗದ ಬೇಡಿಕೆಗಳಿಗಿಂತ ಬಹಳ ಹಿಂದೆ ಬಿದ್ದಿದೆ. ಪಕ್ಷ ಹೊಸ ಕರ್ತವ್ಯಗಳನ್ನು ಈಡೇರಿಸುವ ಸಾಮರ್ಥ್ಯವಿಲ್ಲ ಎಂದೆಲ್ಲಾ ಹೇಳಲಾಗುತ್ತಿತ್ತು. ಆದರೆ ಚಳುವಳಿಯು ದಾರಿ ದೂರದೃಷ್ಟಿಯಿಲ್ಲದ ಈ ಎಲ್ಲ ಭಯಗಳನ್ನು ಹಿಂದುಳಿದ ವಿಚಾರಗಳನ್ನು ಬದಿಗೊತ್ತಿ ಮುನ್ನಡೆಯಿತು.

ಈಗ ಹೊಸ ಉತ್ಕ್ರಾಂತಿಗಳು ಎದ್ದು ಬರುತ್ತಿರುವ ಸಮಯದಲ್ಲಿ ಅನೇಕ ಸಿದ್ಧಾಂತಗಳು, ಅಭಿಪ್ರಾಯಗಳು ಸ್ವಲ್ಪ ಬೇರೆಯ ರೂಪಗಳಲ್ಲಿ ಮತ್ತೊಮ್ಮೆ ಕಾಣಬರುತ್ತಿವೆ. ನಮ್ಮ ಕಾರ್ಮಿಕತಂತ್ರ ಹಾಗೂ ಸಂಘಟನೆಯನ್ನು ನಮ್ಮ ಹೊಸ ಕರ್ತವ್ಯಗಳ ಈಡೇರಿಕೆಗೆ ಅನುಗುಣಗೊಳಿಸಲು ನಾವು "ಮೇಲ್ಮಟ್ಟದ ಪ್ರದರ್ಶನಗಳ'' ಮಾತಾಡುವ 'ಪೋಲೀಸ್ ಸಮಾಜವಾದಿ' (ಝುಬಾಟೋವ್)ಗಳ, ಮತ್ತಿತರ ಸಮಯಸಾಧಕ ಸಿದ್ಧಾಂತಗಳ ಪ್ರತಿರೋಧವನ್ನು, ಪ್ರತಿಗಾಮಿಗಳ 'ಭಯ'ವನ್ನು ಎದುರಿಸಿನಿಲ್ಲಬೇಕು ಪಕ್ಷ ಕಾರ್ಮಿಕ ವರ್ಗದ ತುರ್ತು ಅವಶ್ಯಕತೆಗಳಿಗಿಂತ ಹಿಂದೆ ಬಿದ್ದಿದೆ ಎಂದು ಮತ್ತೊಮ್ಮೆ ಹೇಳಲಾಗುತ್ತಿದೆ.

ಕೆಳಮಟ್ಟದ ಚಟುವಟಿಕೆಗಳ ರೂಪಗಳನ್ನು ಪೂಜಿಸುವ ಮಂದಿ, ಮೇಲ್ಮಟ್ಟದ ನಿಜವಾದ ಸಮಾಜವಾದಿ-ಪ್ರಜಾಪ್ರಭುತ್ವವಾದೀ ಸ್ವತಂತ್ರ ಚಟುವಟಿಕೆಯನ್ನು ಕಡೆಗಣಿಸುವ ಮಂದಿ ಕಾರ್ಮಿಕ ವರ್ಗದ ನಿಜವಾದ ಕ್ರಾಂತಿಕಾರಿ ಮುಂಚುವರ್ಜಿತನವನ್ನು ಕಡೆಗಣಿಸುವ ಮಂದಿ ಮತ್ತೊಮ್ಮೆ 'ಕಾರ್ಮಿಕರ ಸ್ವತಂತ್ರ ಚಟುವಟಿಕೆ' ಎಂಬ ಘೋಷಣೆಯ ದುರುಪಯೋಗ ನಡೆಸುತ್ತಿದ್ದಾರೆ.

ಈ ಚಳುವಳಿಯು, ಪುನಃ ಒಮ್ಮೆ ಈ ಎಲ್ಲಾ ಹಳಸಲಾದ ಮತ್ತು ಜೀವವಿಲ್ಲದ ಅಭಿಪ್ರಾಯಗಳ ಪಳೆಯುಳಿಕೆಗಳನ್ನು ಬದಿಗೊತ್ತಿಕೊಂಡು ಮುಂದೊತ್ತಿ ಬೆಳೆಯು

ದೊರೆಗಳ ಕಾನೂನು, ಪೋಲೀಸ್ ಮುಂತಾದ ಅಡ್ಡಿ ಆತಂಕಗಳನ್ನು ಎದುರಿಸಿ ಹೆಚ್ಚೆಚ್ಚು ಕಾರ್ಯಾಚರಣೆಯ ಸ್ವಾತಂತ್ರ್ಯ ಕಿತ್ತುಕೊಳ್ಳುತ್ತಾ ಬಂದದ್ದು ಸಮಾಜವಾದೀ - ಪ್ರಜಾಪ್ರಭುತ್ವವಾದದ ಚಾರಿತ್ರಿಕ ಬೆಳವಣಿಗೆಯ ಒಂದು ಪ್ರಮುಖ ಲಕ್ಷಣ.

ತ್ತದೆ ಎಂಬುಂದರಲ್ಲಿ ಸ್ವಲ್ಪ ಕೂಡಾ ಸಂಶಯವಿಲ್ಲ. ಇದನ್ನು ಕೇವಲ ಹಳೆಯ ತಪ್ಪುಗಳ ನಿರಾಕರಣೆ ಎಂಬುದಾಗಿ ಮಾತ್ರ ತಿಳಿಯಬಾರದು; ಬದಲು, ಬಹಳ ಮುಖ್ಯವಾಗಿ, ಅದರೆ ಹೊಸ ಕರ್ತವ್ಯಗಳನ್ನು ಪೂರೈಸುವ ಕ್ರಿಯಾತ್ಮಕ ಕ್ರಾಂತಿಕಾರಿ ಕೆಲಸದ ಸ್ವರೂಪನೀಡಬೇಕು. ಬಹಳಷ್ಟು ವಿಶಾಲ ಜನಸಮೂಹಗಳಾಗಿ ಕ್ರಾಂತಿಕಾರಿ ರಂಗದತ್ತ ಬರುತ್ತಿರುವ ಹೊಸ ಶಕ್ತಿಗಳನ್ನು ಪಾರ್ಟಿಯೊಳಗೆ ಆಕರ್ಷಿಸಿ ಉಪಯೋಗಿಸುವಂತೆ ನೋಡಿಕೊಳ್ಳಬೇಕು. ಮುಂದೆ ಬರುವ ಮೂರನೇ ಅಧಿವೇಶನದ ಕಾರ್ಯಕಲಾಪಗಳ ಪ್ರಮುಖ ವಿಷಯ ಈ ಕ್ರಿಯಾತ್ಮಕ ಕ್ರಾಂತಿಕಾರಿ ಕೆಲಸ ಹೇಗೆ ನಡೆಸಬೇಕು ಎಂಬುದೇ ಆಗಬೇಕು. ನಮ್ಮ ಎಲ್ಲಾ ಪಾರ್ಟಿ ಸದಸ್ಯರು ತಮ್ಮ ಪ್ರಾದೇಶಿಕ ಮತ್ತು ಸಾರ್ವತ್ರಿಕ ಕೆಲಸಗಳಲ್ಲಿ ಈ ಪ್ರಶ್ನೆಗಳತ್ತ ಮುಖ್ಯ ಗಮನಹರಿಸಬೇಕು.

ಇನ್ನು ನಮ್ಮನ್ನೆದುರಿಸುವ ಈ ಕರ್ತವ್ಯಗಳ ಕುರಿತು ನಾವು ಹಲವು ಬಾರಿ ಸ್ಥೂಲವಾಗಿ ಮಾತಾಡಿದ್ದೇವೆ. ನವ ಪ್ರಕ್ಷೋಭೆಯನ್ನು ಪೇಟೆಯ ಮತ್ತು ಗ್ರಾಮಾಂತರದ ಬಡವರ ಹೊಸ ಪದರುಗಳ ಮಧ್ಯೆ ಒಯ್ಯಬೇಕು; ಒಂದು ವಿಶಾಲವಾದ ಹೆಚ್ಚು ಸುಲಭ ನಿರ್ವಹಣೆಯ ಮತ್ತು ಹೆಚ್ಚು ಬಲಿಷ್ಠವಾದ ಸಂಘಟನೆಯನ್ನು ಕಟ್ಟಬೇಕು; ದಂಗೆಗೆ ತಯಾರು ಮಾಡಿ ಜನತೆಯನ್ನು ಸಶಸ್ತ್ರಗೊಳಿಸಬೇಕು; ಮತ್ತು ಈ ಉದ್ದೇಶಗಳಿಗಾಗಿ, ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿಗಳ ಜತೆ ಒಪ್ಪಂದ ಮಾಡಿಕೊಳ್ಳಬೇಕು. ಈ ಕರ್ತವ್ಯಗಳನ್ನು ಪೂರೈಸುವುದಕ್ಕಾಗಿ ಹೊಸ ಶಕ್ತಿಗಳು ಎದ್ದು ಬಂದಿವೆ ಎಂಬುದು ರಷ್ಯಾದಲ್ಲೆಲ್ಲಾ ಸಾರ್ವತ್ರಿಕ ಮುಷ್ಕರಗಳು ನಡೆಯುತ್ತಿರುವ ವರದಿಗಳಿಂದ ನಿಸ್ಸಂಶಯವಾಗಿ ಸಾಬೀತಾಗುತ್ತದೆ; ಮತ್ತು ಪ್ರಜಾಪ್ರಭುತ್ವವಾದಿ ಬುದ್ಧಿಜೀವಿಗಳ ಯುವಕರ ಮುಷ್ಕರ ಮತ್ತು ಕ್ರಾಂತಿಕಾರಿ ಮನೋಭಾವದಿಂದ ಸ್ಪಷ್ಟವಾಗುತ್ತದೆ; ಬಂಡವಾಳಶಾಹಿಯ ಹಲವಾರು ವಿಭಾಗಗಳಲ್ಲಿ ಕೂಡಾ ಈ ಕ್ರಾಂತಿಕಾರಿ ಮನೋಭಾವವನ್ನು ಕಾಣಬಹುದು.

ಈ ಮಹತ್ವದ ಹೊಸ ಶಕ್ತಿಗಳು ಹಾಗೂ ಇದುವರೆಗೆ ಕಾರ್ಮಿಕ ಮತ್ತು ರೈತಾಪಿ ವರ್ಗಗಳಲ್ಲಿನ ಅತ್ಯಂತ ಚಿಂತಿಸ್ಸರೂಪದ ಸತ್ವದ ಒಂದು ಸಣ್ಣ ಪ್ರಮಾಣವಷ್ಟೇ ಈ ಅಭೂತಪೂರ್ವ ಉತ್ಸಾಹದಲ್ಲಿ ಭಾಗವಹಿಸಿದೆ ಎಂಬ ಸಂಗತಿ ಈ ಹೊಸ ಕರ್ತವ್ಯಗಳನ್ನು ಯಶಸ್ವಿಯಾಗಿ ಈಡೇರಿಸಲು ಸಾಧ್ಯ ಎಂಬ ಭರವಸೆ ನೀಡುತ್ತಿವೆ.

ನಮ್ಮೆದುರು ಇರುವ ಪ್ರಶ್ನೆಯೆಂದರೆ. ಮೊದಲನೆಯದಾಗಿ, ಹೇಗೆ ಈ ಹೊಸ ಶಕ್ತಿಗಳನ್ನು ಬಳಸುವುದು. ಒಂದಾಗಿಸುವುದು ಮತ್ತು ಸಂಘಟಿಸುವುದು? ಹಳೆಯ ಬಂಡವಾಳಶಾಹೀ ಶೋಷಣೆ ಇರುವವರೆಗೆ ನಾವು ಎದುರಿಸಲೇಬೇಕಾದ ದಿನನಿತ್ಯದ ಸಾಮಾನ್ಯ ಕರ್ತವ್ಯಗಳನ್ನು ಒಂದು ಕ್ಷಣವೂ ಮರೆಯದೆ ಹೇಗೆ ಈಗಿನ ಮೇಲ್ಮಟ್ಟದ ಕರ್ತವ್ಯಗಳತ್ತ ಗಮನ ಕೇಂದ್ರೀಕರಿಸುವುದು ?

ಈ ಪ್ರಶ್ನೆಯನ್ನು ಬಗೆಹರಿಸುವ ಹಲವು ವಿಧಾನಗಳನ್ನು ಸೂಚಿಸಲು ಒಂದು ನಿರ್ದಿಷ್ಟ ಉದಾಹರಣೆಯಿಂದ ಆರಂಭಿಸೋಣ. 'ಈಗಿನ ಸಮಾಜವಾದೀ-ಪ್ರಜಾಪ್ರಭುತ್ವವಾದಿಗಳಿಗೆ ಶೈಕ್ಷಣಿಕ ಕೆಲಸದ ಬಗ್ಗೆ, ಕಾನೂನು ಬದ್ಧ ದಾರಿಗಳನ್ನು ಬಳಸುವ ಬಗ್ಗೆ ಬಹಳ ಭಯ. ಕಾರ್ಮಿಕ ಆಂದೋಲನಗಳ ರಾಜಕೀಯೇತರ ರೂಪಗಳ ಬಗ್ಗೆ ಅವರಿಗೆ ಭಯ. ಆದ್ದರಿಂದ ಅವರು ಭ್ರಮಾಲೋಕದಲ್ಲಿದ್ದಾರೆ' ಎಂದು ಬೂರ್ಜ್ವಾ ಉದಾರವಾದಿಗಳು ನಮ್ಮ ಬಗ್ಗೆ ಹೇಳುತ್ತಿದ್ದಾರೆ. ಜತೆಗೇ ಕಾರ್ಮಿಕ ಆಂದೋಲನ ಕಟ್ಟಲು ಮುಂದಾಗಬೇಕು, ನಮ್ಮನ್ನು (ಸಮಾಜವಾದಿ-ಪ್ರಜಾಪ್ರಭುತ್ವವಾದಿಗಳನ್ನು) ವಿರೋಧಿಸಿಯಲ್ಲ. ನಮ್ಮ ಹೆಗಲಿಗೆ ಹೆಗಲು ಕೊಟ್ಟು ಮುಂದಾಗಬೇಕು ಎಂದೂ ಅವರು ತಮ್ಮ ಅನುಯಾಯಿಗಳನ್ನು ವಿನಂತಿಸಿಕೊಳ್ಳುತ್ತಾರೆ.

ಎಲ್ಲೆಲ್ಲೂ ಎಲ್ಲಾ ರೀತಿಯ ಕ್ರಾಂತಿಕಾರೀ ಸ್ವತಂತ್ರ ಚಟುವಟಿಕೆಗಳು ಹೆಚ್ಚುತ್ತಾ ಹೋದಂತೆ ಸಮಯ ಸಾಧಕ ಸುಧಾರಣಾವಾದಿ ಸಿದ್ಧಾಂತಿಗಳ ಆಕರ್ಷಕ ಪದಗಳ ಟೊಳ್ಳುತನ ಹೆಚ್ಚೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ. ಆಗ ಕಾರ್ಮಿಕ ಪಕ್ಷದ ಸ್ವತಂತ್ರ ಚಟುವಟಿಕೆಯ ಅರ್ಥ ಹೆಚ್ಚೆಚ್ಚು ಪ್ರಾಮುಖ್ಯ ಗಳಿಸುತ್ತದೆ.

ಇಲ್ಲಿ ಮೊದಲನೆಯದಾಗಿ ಸ್ಪಷ್ಟಪಡಿಸಬೇಕಾದ ಅಂಶವೆಂದರೆ ನಮಗೆ ಕಾನೂನು ಬದ್ಧ ಚಟುವಟಿಕೆಗಳ ಬಗ್ಗೆ 'ಭಯ' ಅಥವಾ 'ಭ್ರಮೆ'ಯಿಲ್ಲ. 1902ರಷ್ಟು ಹಿಂದೆಯೇ ನಾವು 'ಸಮಾಜವಾದಿಯಲ್ಲದ, ರಾಜಕೀಯೇತರ ಕಾರ್ಮಿಕ ಸಂಘಗಳ ಕಾನೂನೀಕರಣ ರಷ್ಯಾದಲ್ಲಿ ಶುರುವಾಗಿದೆ ಎಂದು ಹೇಳಿ ವರ್ಗ ಶಾಮೀಲಿನ ಕುರಿತು ವರ್ಗಸಾಮರಸ್ಯದ ಉದಾರವಾದೀ ಭಾಷಣಗಳನ್ನೆಲ್ಲಾ ಬಯಲಿಗೆಳೆಯಬೇಕು. ಈ ಮೂಲಕ ಈ ಕಾನೂನೀಕರಣ ಮುಂದೆ ನಮಗೆ ಪ್ರಯೋಜನಕಾರಿ, ಕ್ರಾಂತಿಕಾರಿಗಳಿಗೆ ಸತ್ಯದಿಂದ ಹೊಟ್ಟನ್ನು ಪ್ರತ್ಯೇಕಿಸುವ ಮೇಲ್ಮಟ್ಟದ ಕೆಲಸಗಳಿಗೆ ಇದರಿಂದ ಹೆಚ್ಚಿನ ಸಮಯಾವಕಾಶ ಸಿಗುತ್ತದೆಂದು ಹೇಳಿದ್ದೆವು. ಈಗಿನ ಬೂರ್ಜ್ವಾ ಉದಾರವಾದಿಗಳು ಈ ಹೇಳಿಕೆಯ ಮೂಲಕ ವಾಸ್ತವವಾಗಿ ಸಮಾಜವಾದಿ ಪ್ರಜಾಪ್ರಭುತ್ವವಾದಿಗಳು ಬೂರ್ಜ್ವಾ ಉದಾರವಾದಿಗಳ ವರ್ಗ ಮೂಲವನ್ನು ಬಯಲಿಗೆಳೆಯುತ್ತಾರೆ ಎಂಬ ಭಯ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರಷ್ಟೆ.

ಆದರೆ ನಮ್ಮ ಈಗಿನ ಕರ್ತವ್ಯಗಳ ದೃಷ್ಟಿಯಿಂದ ನಮಗೀಗ ಅತ್ಯಂತ ಆಸಕ್ತಿಯ ಪ್ರಶ್ನೆಯೆಂದರೆ, ಕ್ರಾಂತಿಕಾರಿಗಳನ್ನು ತಮ್ಮ ಕೆಲವು ಕೆಲಸ ಕಾರ್ಯಗಳಿಂದ ಬಿಡುಗಡೆಗೊಳಿಸುವುದು ? ನಾವು ಈಗ ಕ್ರಾಂತಿಯ ಆರಂಭವನ್ನು ಅನುಭವಿಸುತ್ತಿರುವಾಗ ಈ ಪ್ರಶ್ನೆ ನಿರ್ದಿಷ್ಟವಾಗಿ ಸಕಾಲಿಕವೂ, ವ್ಯಾಪಕ ಪ್ರಾಮುಖ್ಯತೆಯನ್ನೂ ಪಡೆದ ಪ್ರಶ್ನೆಯಾಗಿದೆ.

'ನಾವು ಎಷ್ಟು ಉತ್ಸಾಹದಿಂದ ನಮ್ಮ ಕ್ರಾಂತಿಕಾರಿ ಕೆಲಸವನ್ನು ಮಾಡುತ್ತಾ ಹೋಗುತ್ತೇವೋ ಅಷ್ಟೇ ತ್ವರಿತವಾಗಿ ಸರಕಾರ ಕಾರ್ಮಿಕ ಸಂಘಗಳ ಒಂದು ಭಾಗವನ್ನು ಕಾನೂನು ಬದ್ಧಗೊಳಿಸಲೇಬೇಕಾಗಿ ಬರುತ್ತದೆ. ಆ ಮೂಲಕ ನಮ್ಮ ಮೇಲಿನ ಹೊರೆಯ ಒಂದು ಭಾಗ ಜಾರಿ ಹಗುರವಾಗುತ್ತದೆ' ಎಂದುನಾವುಹಿಂದೇನೇ ಹೇಳಿದ್ದೆವು. ಉತ್ಸಾಹಪೂರ್ಣ ಕ್ರಾಂತಿಕಾರೀ ಹೋರಾಟ ಇನ್ನೂ ಹಲವು ರೀತಿಗಳಲ್ಲಿ ನಮ್ಮ ಹೊರೆಯನ್ನು ಹಗುರಗೊಳಿಸುತ್ತದೆ. ಈಗಿನ ಸನ್ನಿವೇಶ ಹಿಂದೆ ನಿಷೇಧಕ್ಕೊಳಗಾಗಿದ್ದ ಬಹಳಷ್ಟು ಸಂಗತಿಗಳನ್ನು ಕಾನೂನುಬದ್ಧಗೊಳಿಸಿರುವುದು ಮಾತ್ರವಲ್ಲ, ಆಂದೋಲನವನ್ನು ಎಷ್ಟೊಂದು ವ್ಯಾಪಕಗೊಳಿಸಿದೆಯೆಂದರೆ ಹಿಂದೆ ಕೇವಲ ಕ್ರಾಂತಿಕಾರಿಗಳ ಕೈಗೆ ಮಾತ್ರ ಎಟಕುವ ಸಂಗತಿಯೆನಿಸಿಕೊಂಡದ್ದು ಈಗ ಜನಸಮೂಹಗಳಿಗೂ ಸಾಧ್ಯವಿರುವ ಸಾಂಪ್ರದಾಯಿಕ ಸಂಗತಿಗಳಾಗಿ ಬಿಟ್ಟಿವೆ. ಝಾರ್ ದೊರೆಗಳ ಪೋಲೀಸ್, ಕಾನೂನು ಏನೇ ಇರಲಿ, ಎಲ್ಲಾ ಅಡ್ಡಿ-ಆತಂಕಗಳನ್ನು ಎದುರಿಸಿ ಹೆಚ್ಚೆಚ್ಚು ಕಾರ್ಯಾಚರಣೆಯ ಸ್ವಾತಂತ್ರ್ಯ ಗಳಿಸುತ್ತಾ ಬಂದದ್ದು ಸಮಾಜವಾದೀ - ಪ್ರಜಾಪ್ರಭುತ್ವವಾದದ

([illegible])

ನಮ್ಮೆದುರು ಇರುವ ಪ್ರಶ್ನೆಯೆಂದರೆ ಹೇಗೆ ಈ ಹೊಸಶಕ್ತಿಗಳನ್ನು ಬಳಸುವುದು, ಒಂದಾಗಿಸುವುದು ಮತ್ತು ಸಂಘಟಿಸುವುದು ? ಬಂಡವಾಳಶಾಹೀ ಶೋಷಣೆ ಇರುವವರೆಗೆ ನಾವು ಎದುರಿಸಲೇಬೇಕಾದ ದಿನನಿತ್ಯದ ಕರ್ತವ್ಯಗಳನ್ನು ಒಂದು ಕ್ಷಣವೂ ಮರೆಯದೆ ಹೇಗೆ ಮೇಲ್ಮಟ್ಟದ ಕರ್ತವ್ಯಗಳತ್ತ ಗಮನ ಕೇಂದ್ರೀಕರಿಸುವುದು ?

ಮಹಾಧಿವೇಶನಗಳು ಕಂಡಂತೆ

...ರಂಗದಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ರಾಜ್ಯ ಸಮಿತಿಗೆ ನೆರವಾಗಬೇಕು.

ತೀವ್ರಗಾಮಿ ವಿಚಾರಗಳ ಯುವಕರನ್ನು ಗೆದ್ದುಕೊಳ್ಳಲು ಪ್ರಯತ್ನಿಸುತ್ತಿರುವ ಕೆಲವು ಪೇಟಿಬ್ಲೋಟಕ್ಕೆ. 'ಎಡಪಂಥೀಯ' ಹೆಸರಿನಲ್ಲಿ ಕಂಡುಬರುವ ಪ್ರವೃತ್ತಿಗಳು ಹಾಗೂ ಆಂದೋಲನಗಳ ವಿರುದ್ಧ ಒಂದು ದೃಢ ಹೋರಾಟ ನಡೆಸಬೇಕಾಗಿದೆ ಎಂದು ಈಗಾಗಲೇ ಹೇಳಲಾಗಿದೆ. ಈ ಪ್ರವೃತ್ತಿಗಳನ್ನು ಹಾಗೂ ಆಂದೋಲನಗಳನ್ನು ಪ್ರತಿನಿಧಿಸುವವರ ವಿರುದ್ಧ ಪಕ್ಷದ ಮುಖಂಡತ್ವ ಒಂದು ಅವಿರತ ಹೋರಾಟ ನಡೆಸಬೇಕಾಗಿದೆ. ಈ ವಿಷಯದಲ್ಲಿ ರಾಜ್ಯದ ಮುಖಂಡತ್ವದಲ್ಲಿ ಜಾಗರೂಕತೆಯ ಅಭಾವ ಕಂಡುಬರುತ್ತಿದೆ. ಈ ಗುಂಪುಗಳತ್ತ ಒಂದು ಉದಾರ ನಿಯಮ ತಳೆಯುತ್ತಿದೆ. ಈ ದೌರ್ಬಲ್ಯವನ್ನು ನಿವಾರಿಸಿ ಕೊಂಡು ಈ ಗುಂಪುಗಳ ಮುಖಂಡರು ನಡೆಸುತ್ತಿರುವ ಸುಳ್ಳು ಪ್ರಚಾರಗಳಿಗೆ ಮಾರುಹೋಗುತ್ತಿರುವವರನ್ನು ಗೆದ್ದುಕೊಳ್ಳಲು ಸೂಕ್ತ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳಬೇಕು.

ಇದೇ ರೀತಿ ಕರ್ನಾಟಕದಲ್ಲಿ ಹಿಂದೆ ಕಂಡುಬಂದ, ಮುಂದೆ ಕಾಣಿಸಿಕೊಳ್ಳಬಹುದಾದ ಬೂರ್ಜ್ವಾ ಹಾಗೂ ಪರಿಷ್ಕರಣವಾದೀ ತತ್ವ ವಿಚಾರಗಳ ಕೆಲವು ವಿಶಿಷ್ಟ ಅವತರಣಿಕೆಗಳ ವಿರುದ್ಧವೂ ಸತತ ಹೋರಾಟ ನಡೆಸಬೇಕು. ಈ ಸೈದ್ಧಾಂತಿಕ ಹೋರಾಟವನ್ನು ಹೇಗೆ ಸಾಮಾಜಿಕ, ಆರ್ಥಿಕ, ರಾಜಕೀಯ ರಂಗಗಳಲ್ಲಿನ ಎಲ್ಲಾ ತೀವ್ರಗಾಮೀ ಶಕ್ತಿಗಳೊಂದಿಗೆ ಐಕ್ಯ ಕಾರ್ಯಾಚರಣೆಯೊಂದಿಗೆ ಬೆಸೆಯುವುದು ಎಂಬುದು ರಾಜ್ಯಸಮಿತಿ ಪಾಲಿಟ್‌ಬ್ಯೂರೊ ಮತ್ತು ಕೇಂದ್ರ ಸಮಿತಿಯ ಮಾರ್ಗದರ್ಶನದಲ್ಲಿ ಪರಿಶೀಲಿಸಬೇಕಾದ ಪ್ರಶ್ನೆ.

ಇಷ್ಟೇ ಮಹತ್ವದ ಇನ್ನೊಂದು ಸಮಸ್ಯೆಯಿದೆ. ಪಕ್ಷದ ಹಿಂದಿನ ನಾಯಕತ್ವದ ಜಾಗದಲ್ಲಿ 1978ರಲ್ಲಿ ಒಂದು ಹೊಸ ನಾಯಕತ್ವ ಬಂದಂದಿನಿಂದ 1979ರ ಹಿಂದಿನ ಪಕ್ಷದ ಚರಿತ್ರೆಯೆಲ್ಲಾ ನಿಷ್ಪ್ರಯೋಜಕ ಎಂದು ತಳ್ಳಿಬಿಡಬೇಕೆಂಬ ಭಾವನೆ ಸೃಷ್ಟಿಯಾಗಿದೆ. 1980 ಪ್ಲೀನಂ ಹಾಗೂ 1981ರ ರಾಜ್ಯಸಮ್ಮೇಳನದಲ್ಲೂ ಈ ದನಿ ಕೇಳಿ ಬಂತು. ನಲ್ವತ್ತು ವರ್ಷಕ್ಕೂ ಹಿಂದೆ ಪಕ್ಷದ ಮೊದಲ ಪಥ ಪ್ರದರ್ಶಕರು ಪಡಬೇಕಾದ ಕಠಿಣ ಶ್ರಮ. ನಲವತ್ತರ ಮತ್ತು ಐವತ್ತರ ದಶಕಗಳಲ್ಲಿ ಕೆಲವು ಪ್ರದೇಶಗಳಲ್ಲಿ ಸಾಮೂಹಿಕ ಸಂಘಟನೆಗಳನ್ನು ಕಟ್ಟಿದ್ದು. ಈ ಸಮಸ್ತ ಅವಧಿಯಲ್ಲಿ ಪಕ್ಷದ ಬೆಳವಣಿಗೆಯನ್ನು ಪ್ರತಿನಿಧಿಸುವ ಮುಖಂಡರು, ಸದಸ್ಯರು ಹಾಗೂ ಬೆಂಬಲಿಗರು ಈಗಲೂ ಇರುವುದು ಇವನೆಲ್ಲಾ ಪಕ್ಷ 1979ರಲ್ಲಿ ಹೊಸದಾಗಿ ಹುಟ್ಟಿತೇನೋ ಎಂಬಂತೆ ಮರೆಸಿ ಬಿಡಲಾಗುತ್ತಿದೆ. ವಾಸ್ತವವಾಗಿ ರಾಜ್ಯ ಪ್ಲೀನಂ ಹಾಗೂ ನಂತರದ ಸಮ್ಮೇಳನದಲ್ಲಿ ಚರ್ಚೆಗಳಲ್ಲಿ ಭಾಗವಹಿಸಿದ ಕೆಲವು ಸಂಗಾತಿಗಳು ಈ ಸಮಸ್ಯೆಯನ್ನು ಒರಟಾಗಿ ಮುಂದಿಟ್ಟ ರೀತಿ ಹೀಗಿದೆ: ನರೆತಕೂದಲಿನವರು (ಹಳೆಯ ಮುಖಂಡರು ಮತ್ತು ಸದಸ್ಯರು) ಕಪ್ಪು ಕೂದಲಿನವರಿಗೆ (ಹೊಸ ಮುಖಂಡರು ಮತ್ತು ಸದಸ್ಯರಿಗೆ) ದಾರಿ ಕೊಡಬೇಕು. ವರ್ಗ ಹೋರಾಟದ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ಸಿದ್ಧಾಂತದ ಸ್ಥಾನದಲ್ಲಿ "ಪೀಳಿಗೆಯ ಅಂತರ"ದ ಬೂರ್ಜ್ವಾ ಸಿದ್ಧಾಂತ ತರುವ ಈ ಶೂನ್ಯವಾದೀ ಮಾರ್ಗದ ವಿರುದ್ಧ ಸಾಕಷ್ಟು ಶಕ್ತಿಯುತವಾಗಿ ಹೋರಾಟ ನಡೆದಿಲ್ಲ. ಈ...

ಕಲ್ಕತ್ತಾ ಅಧಿವೇಶನ

1983ರ ಚುನಾವಣೆಗಳಲ್ಲಿ ಸ್ವಾತಂತ್ರ್ಯಾನಂತರ ಮೊತ್ತ ಮೊದಲ ಬಾರಿಗೆ ಕಾಂಗ್ರೆಸ್ (ಐ) ಸೋತಾಗ ಕರ್ನಾಟಕದ ರಾಜಕೀಯ ಒಂದು ಮಹತ್ವದ ತಿರುವನ್ನು ಕಂಡಿತು. ಸಿಪಿಐ (ಎಂ), ಸಿಪಿಐ ಮತ್ತು ಬಿಜೆಪಿ ಬೆಂಬಲದೊಂದಿಗೆ ಜನತಾ ಸರಕಾರ ಅಸ್ತಿತ್ವಕ್ಕೆ ಬಂತು. ಚುನಾವಣೆಗಳಲ್ಲಿ ಜನತಾದೊಂದಿಗೆ ಪರಸ್ಪರ ತಿಳುವಳಿಕೆಯಾಯಿತು. ಮೊತ್ತ ಮೊದಲ ಬಾರಿಗೆ ನಾವು ವಿಧಾನಮಂಡಲದಲ್ಲಿ ಮೂರು ಸ್ಥಾನಗಳನ್ನು ಪಡೆದೆವು. ಈ ವಿಜಯ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೊಂದು ದೊಡ್ಡ ಉತ್ತೇಜನ ನೀಡಿತು. ಆಂಧ್ರದಲ್ಲಿನ ಸೋಲಿನ ಜೊತೆಗೆ ಇದು ದಕ್ಷಿಣದಲ್ಲಿ ಸರ್ವಾಧಿಕಾರಿ ಪಕ್ಷದ ಹಿಡಿತವನ್ನು ದುರ್ಬಲಗೊಳಿಸಿತು.

ಆದರೆ ಕಾಂಗ್ರೆಸ್‌ನ ಕುತಂತ್ರಗಳಿಂದಾಗಿ ಕ್ರಾಂತಿರಂಗದ ಗುಂಪು ಹೊರಬಂತು. ಕೇಂದ್ರ ಸರ್ಕಾರ ಈ ಮಂತ್ರಿಮಂಡಲವನ್ನು ಉರುಳಿಸಲು ಪ್ರಯತ್ನಿಸಿತು. 1984ರ ಚುನಾವಣೆಗಳು ಅಂತಿಮವಾಗಿ ಶ್ರೀಮತಿ ಗಾಂಧಿಯವರ ಹತ್ಯೆಯಿಂದ ಕಾಂಗ್ರೆಸ್ ಸಂಸದೀಯ ಚುನಾವಣೆಗಳಲ್ಲಿ 28ರಲ್ಲಿ 24 ಸ್ಥಾನ ಪಡೆದು ದೊಡ್ಡ ವಿಜಯ ಗಳಿಸುವಂತಾಯಿತು. ಹೆಗ್ಡೆ ರಾಜೀನಾಮೆ ನೀಡಿದರು. ಮಾರ್ಚ್‌ನಲ್ಲಿ ಮಧ್ಯಂತರ ಚುನಾವಣೆಗಳು ನಡೆದವು. ಬಿಜೆಪಿ ಮತ್ತು ಜನತಾ ನಡುವಿನ ಪರಸ್ಪರ ತಿಳುವಳಿಕೆ ಮುರಿದುಬಿತ್ತು. ಜನತಾ ಪಕ್ಷ ಸ್ಥಾನಗಳ ಹೊಂದಾಣಿಕೆ ಬಗ್ಗೆ ಸಿಪಿಐ (ಎಂ) ಹಾಗೂ ಸಿಪಿಐ ಜೊತೆ ಒಪ್ಪಂದಕ್ಕೆ ಬಂತು. ಸಂಸದೀಯ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಅಗಾಧ ವಿಜಯದ ಹಿನ್ನೆಲೆಯಲ್ಲಿ ಜನತಾ ಪಕ್ಷ ವಿಧಾನ ಸಭೆಯಲ್ಲಿ ನಿಚ್ಚಳ ಬಹುಮತ ಗೆದ್ದು ಕಾಂಗ್ರೆಸ್ಸಿಗೆ ಎರಡನೇ ಬಾರಿ ದೃಢಹೊಡೆತ ನೀಡಿದ್ದು ಕಾಂಗ್ರೆಸ್ ವಿರೋಧಿ ಶಕ್ತಿಗಳ ಈ ವಿಜಯ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಗೊಳಿಸಿದೆ. ನಮ್ಮ ಪಕ್ಷ ಹಿಂದಿನ ಮೂರು ಸ್ಥಾನಗಳನ್ನು ಕಳೆದುಕೊಂಡು ಎರಡು ಸ್ಥಾನಗಳನ್ನು ಗೆದ್ದಿತು.

ಈ ಚುನಾವಣೆಗಳ ನಂತರ ಜನತಾ ಸರ್ಕಾರದ ಕಾರ್ಯನಿರ್ವಹಣೆ ಹಿಂಜರಿತ ಕಂಡಿತು. ಬಸ್ ಹಾಗೂ ವಿದ್ಯುಚ್ಛಕ್ತಿ ದರಗಳಲ್ಲಿ ಏರಿಕೆ, ಕ್ಯಾಪಿಟೇಶನ್ ಶುಲ್ಕದ ಬಗ್ಗೆ ಮೃದುನೀತಿ ತಳೆಯುದಿದ್ದುದು, ಭಾಷಾ ಸಂಕುಚಿತವಾದಿಗಳ ಒತ್ತಡಕ್ಕೆ ಬಲಿಬಿದ್ದದ್ದು ಮುಂತಾದ ಹಲವು ಜನ-ವಿರೋಧಿ ಕ್ರಮಗಳನ್ನು ಅವರ ಕೈಗೊಂಡರು.

ನಮ್ಮ ಪಕ್ಷ ಸ್ವತಂತ್ರವಾಗಿ ಮತ್ತು ಸಿಪಿಐ ಹಾಗೂ ಎಡ ಶಕ್ತಿಗಳೊಂದಿಗೆ ಸೇರಿಕೊಂಡು ಈ ಧೋರಣೆಗಳ ವಿರುದ್ಧ ಪ್ರತಿರೋಧ ನೀಡಲು ಹಾಗೂ ಜನರನ್ನು ಅಣಿನೆರೆಸಲು ಪ್ರಯತ್ನಿಸುವ ಕೆಲಸವನ್ನು ಈಗ ಕೈಗೆತ್ತಿಕೊಳ್ಳಬೇಕು.

ಕೊನೆಯದಾಗಿ ರಾಜ್ಯ ಪಕ್ಷದ ಕೇಂದ್ರದ ಸಂಘಟನೆ ಸುಧಾರಣೆಗೊಳ್ಳಬೇಕಾಗಿದೆ. ಯಾಕೆಂದರೆ 1979ರ ಮೊದಲಿನ ನಗ್ನ ಅಧಿಕಾರಶಾಹಿ ಈಗ ಉಳಿದಿಲ್ಲವಾದರೂ ಪ್ರಜಾಸತ್ತಾತ್ಮಕ ಕೇಂದ್ರವಾದ ಇನ್ನೂ ಸ್ಥಾಪನೆಯಾಗಬೇಕಿದೆ. ವೈಯಕ್ತಿಕ ಜವಾಬ್ದಾರಿಯೊಂದಿಗೆ ಸಾಮೂಹಿಕ ಕಾರ್ಯನಿರ್ವಹಣೆ, ರಾಜ್ಯ ಸಮಿತಿ ಮತ್ತು ಸೆಕ್ರೆಟರಿಯೇಟ್ ಸದಸ್ಯರ ಕೆಲಸದ ಸತತ ಪರಿಶೀಲನೆ, ಜಿಲ್ಲಾ ಮತ್ತು ಕೆಳಮಟ್ಟದ ಸಮಿತಿಗಳಿಗೆ ಸೆಕ್ರೆಟರಿಯೇಟ್‌ನಿಂದ ಸಾಮೂಹಿಕ ಮಾರ್ಗದರ್ಶನ ಇವೆಲ್ಲಾ ಆಗುವಂತೆ ನೋಡಿಕೊಳ್ಳಬೇಕಾಗಿದೆ. ಕಳೆದ ಕೆಲವು ತಿಂಗಳಲ್ಲಿ ಆಗಿರುವ ಸುಧಾರಣೆಯನ್ನು ಮಾನ್ಯಮಾಡುತ್ತಾ ಈ ದಿಸೆಯಲ್ಲಾದ ಕೆಲಸವನ್ನು ಮುಂದುವರಿಸಬೇಕು.

ವಿಜಯವಾಡ ಮಹಾಧಿವೇಶನ ಕರ್ನಾಟಕಕ್ಕೆ ನೀಡಿದ ಮಾರ್ಗದರ್ಶನ, ಅದು ಕಾರ್ಯಗತವಾದ ಬಗ್ಗೆ–ಈ ಬಗ್ಗೆ ಕಲ್ಕತ್ತಾ ಮಹಾಧಿವೇಶನ ವಿಮರ್ಶಿಸಿತ್ತು. ಹಾಗೂ ರಾಜಕೀಯ-ಸಂಘಟನಾತ್ಮಕ ಆದೇಶ ನೀಡಿತು.

13ನೇ ಮಹಾಧಿವೇಶನದ ಮುನ್ನ ಈ ಕರ್ತವ್ಯಗಳ ಬಗ್ಗೆ ಚಿಂತನ, ಮಥನ, ಹಾಗೂ ವಿಮರ್ಶೆ ವಿವಿಧ ಮಟ್ಟದ ಸಮ್ಮೇಳನಗಳಲ್ಲಿ ನಡೆಯಬೇಕಾಗಿದೆ.

1985ರ ಡಿಸೆಂಬರ್ 25ರಿಂದ 30ರ ವರೆಗೆ ಜರುಗಿದ

12 ನೇ ಮಹಾಧಿವೇಶನದ

ರಾಜಕೀಯ-ಸಂಘಟನಾ ವರದಿಯ

ಕರ್ನಾಟಕದ ಕುರಿತಾದ ವರದಿಯನ್ನು ಮತ್ತೊಮ್ಮೆ ನೋಡೋಣ

...ತ್ತಿದೆ. ಅದೇ ಹೊತ್ತಿಗೆ ವಿಚ್ಛಿದ್ರತೆ ಹಾಗೂ ಪರಿಸ್ಥಿತಿಯ ದುರ್ಲಾಭಪಡೆಯುವ ಕಾಂಗ್ರೆಸ್ (ಐ) ಪ್ರಯತ್ನಗಳನ್ನು ಎದುರಿಸುತ್ತಿದೆ.

ರಾಜ್ಯದ ಅಭಿವೃದ್ಧಿಯ ಬಗ್ಗೆ ಕೇಂದ್ರದ ಮಲತಾಯಿ ಧೋರಣೆಯ ವಿರುದ್ಧ ಜುಲೈ 1985ರ ಚಳುವಳಿಯಲ್ಲಿ ಪಕ್ಷದ ಕರೆಯ ಮೇರೆಗೆ ರಾಜ್ಯಾದ್ಯಂತ 20 ಸಾವಿರ ಜನ ರೈಲು ತಡೆ ಹಾಗೂ ಅಂಚೆ ಕಛೇರಿಗಳ ಪಿಕೆಟಿಂಗ್‌ನಲ್ಲಿ ಭಾಗವಹಿಸಿದರು. ಆಗಸ್ಟ್ 9 ರಂದು ಕನಿಷ್ಟ ಕೂಲಿ ನಿಗಧಿಗಾಗಿ ಕಾರ್ಮಿಕ ಸಂಘಗಳ ಮಟ್ಟದಲ್ಲಿ ಒಂದು ದೊಡ್ಡ ಆಂದೋಲನ ನಡೆಯಿತು. 30 ಸಾವಿರ ಮಂದಿ ರಾಜ್ಯ ಸರ್ಕಾರದ ಕಛೇರಿಗಳ ಮುಂದೆ ಪಿಕೆಟಿಂಗ್ ನಡೆಸಿದರು. 5 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಆ ದಿನ ಮುಷ್ಕರ ನಡೆಸಿದರು.

ರಾಜ್ಯ ಸಮಿತಿ ಹಾಗೂ ಕಾರ್ಯದರ್ಶಿ ಮಂಡಳಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳೊಂದಿಗೆ ಅತಿ ಎಡ ಹಾಗೂ ಕ್ರಿಶ್ಚಿಯನ್ ಎಡ ವ್ಯಕ್ತಿಗಳು ನುಸುಳಿದ್ದನ್ನು ಗಂಭೀರವಾಗಿ ಪರಿಗಣಿಸಬೇಕಾಗಿ ಬಂತು. ರಾಜ್ಯ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ ಮಂಡಳಿಯ ಒಂದು ತಪ್ಪು ತಿಳಿವು ಹಾಗೂ ಉದಾರವಾದದಿಂದಾಗಿ ಕೇಂದ್ರ ಸಮಿತಿ ಈ ಬಗ್ಗೆ ವಿಚಾರಣೆ ನಡೆಸಲು ಮೂರು ಸದಸ್ಯರ ಆಯೋಗವೊಂದನ್ನು ರಚಿಸಬೇಕಾಯಿತು. ಆಯೋಗದ ಶಿಫಾರಸನ್ನು ಆಧರಿಸಿ ಸಂಘಟನೆಯಲ್ಲಿ ನುಸುಳುವುದನ್ನು ತಡೆಯಲು ಹಾಗೂ ಪುಟ್ಟ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಪರ ಪ್ರಭಾವವನ್ನು ಎದುರಿಸಲು ಇಡೀ ಪಕ್ಷಕ್ಕೆ ಶಿಕ್ಷಣ ನೀಡಲು ಕ್ರಮಕೈಗೊಳ್ಳಬೇಕೆಂದು ಕೇಂದ್ರ ಸಮಿತಿ ನಿರ್ದೇಶನ ನೀಡಿತು. ರಾಜ್ಯ ಕಾರ್ಯದರ್ಶಿಯವರನ್ನು ಬದಲಿಸಲಾಯ್ತು. ಕೆಲವು ಸಮಿತಿಗಳನ್ನು ಪುನರ್ರಚಿಸಲಾಯಿತು. ಹನ್ನೊಂದನೇ ಅಧಿವೇಶನದ ರಾಜಕೀಯ–ಸಂಘಟನಾತ್ಮಕ ವರದಿ ಈ ಅಪಾಯದ ಬಗ್ಗೆ ಎಚ್ಚರಿಸಿತ್ತು. ಕಳೆದೆರಡು ವರ್ಷ ಕ್ರಿಶ್ಚಿಯನ್ ಎಡ, ದಲಿತ ಹಾಗೂ ನಕ್ಸಲೈಟ್ ಪ್ರಭಾವಗಳನ್ನು ಎದುರಿಸಲು ಪಕ್ಷಕ್ಕೆ ಶಿಕ್ಷಣ ನೀಡಲಾಯಿತು. ಶಿಕ್ಷಣದ ಈ ಪ್ರಕ್ರಿಯೆ ಮುಂದುವರಿಯಬೇಕು. ಮಾರ್ಕ್ಸ್‌ವಾದ ಲೆನಿನ್‌ವಾದದ ಸಂಘಟನಾ ನೀತಿಗಳಿಗೆ ಪರಕೀಯವಾದ ಹಳಬರ ವಿರುದ್ಧ ಯುವಕರು ಎಂಬ ಪ್ರವೃತ್ತಿಯ ವಿರುದ್ಧ ಭವಿಷ್ಯದಲ್ಲಿ ರಾಜ್ಯಸಮಿತಿ ಜಾಗರೂಕವಾಗಿರಬೇಕು.

ಐಕ್ಯರಂಗ ವಾರಪತ್ರಿಕೆಯ ಪ್ರಸಾರ ಕೇವಲ 2300. ಅದರ ವಿಷಯ, ವಸ್ತು ಮತ್ತು ಪ್ರಸಾರ ಸುಧಾರಿಸಲು ಹೆಚ್ಚು ಪ್ರಯತ್ನ ನಡೆಸಬೇಕು.

ಕಾರ್ಮಿಕರ ನಡುವೆ ಸಿಐಟಿಯು ಪ್ರಭಾವ ಬೆಳೆಯುತ್ತಿದೆ. ಸಾರ್ವಜನಿಕ ವಲಯದ... ಘಟಕಗಳಿಗೆ ಸಂಬಂಧಪಟ್ಟಂತೆ ಸ್ವಲ್ಪ ಪ್ರಗತಿಯಾಗಿದೆ. ಬೆಂಗಳೂರಿನಲ್ಲಿ ಅಖಿಲ ಭಾರತ ಸಾರ್ವಜನಿಕ ವಲಯದ ಸಮಾವೇಶ ಯಶಸ್ವಿಯಾಗಿ ಜರುಗಿತು.

ಪಕ್ಷದ ಸದಸ್ಯತ್ವ 1981ರಲ್ಲಿ 2196ರಿಂದ 1985ರಲ್ಲಿ 2432ಕ್ಕಷ್ಟೇ ಏರಿತು. ಸದಸ್ಯತ್ವ ಏರಿಕೆ ಪಕ್ಷ ಹೊಂದಿರುವ ಪ್ರಭಾವಕ್ಕೆ ಅನುಗುಣವಾಗಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿ ಸದಸ್ಯತ್ವ 200ಕ್ಕೂ ಕಡಿಮೆ.

ಸಾಮೂಹಿಕ ಸಂಘಟನೆಗಳಲ್ಲಿ ಕಿಸಾನ್‌ಸಭಾ ಸದಸ್ಯತ್ವದಲ್ಲಿ ಒಳ್ಳೆಯ ಪ್ರಗತಿ ಕಂಡುಬಂದಿದೆ. 1981–82ರ 30,000 1984–85ರಲ್ಲಿ 83,900 ಆಗಿದೆ.

ಎಸ್‌ಎಫ್‌ಐ ಕೂಡಾ ತನ್ನ ಪ್ರಭಾವ ಹಾಗೂ ಸದಸ್ಯತ್ವ ಹೆಚ್ಚಿಸಿದೆ. 1981ರ 5172ರಿಂದ ಅದು 1984ರಲ್ಲಿ 15191 ಆಗಿದೆ. ಡಿವೈಎಫ್‌ಐ ಸದಸ್ಯತ್ವ 1984ರಲ್ಲಿ 6553.

ಮಹಿಳಾರಂಗ ಹಾಗೂ ಸಾಂಸ್ಕೃತಿಕ ರಂಗದಲ್ಲಿನ ಕೆಲಸವನ್ನು ಹಿಂದಿನ ಅನುಭವದ ಆಧಾರದ ಮೇಲೆ ವಿಮರ್ಶಿಸಿ ಎಡಸೋಗಿನ ಹಾಗೂ ಅತಿ ಎಡ ಪ್ರವೃತ್ತಿಗಳು ಈ ಸಂಘಟನೆಗಳನ್ನು ಹಾಳುಮಾಡದಂತೆ ಅವಕ್ಕೆ ಮರು ನಿರ್ದೇಶನ ಒದಗಿಸಬೇಕೆಂದು ರಾಜ್ಯ ಸಮ್ಮೇಳನ ನಿರ್ಧರಿಸಿದೆ.

ಪೀಪಲ್ಸ್ ಡೆಮಾಕ್ರಸಿಯ ಪ್ರಸಾರ ರಾಜ್ಯದಲ್ಲಿ ಕೇವಲ 374. ಈ ಅಂಶದ ಮೇಲೆ ಗಮನ ನೀಡಿಲ್ಲ.

ಕರ್ನಾಟಕದಲ್ಲಿ ಪಕ್ಷದೊಳಗಿನ ಪರಿಸ್ಥಿತಿ ಹಾಗೂ ಸಂಘಟನೆಯಲ್ಲಿ ಬಹಳಷ್ಟು ಸುಧಾರಣೆ ಅಗತ್ಯ. ಬೆಂಗಳೂರು ಜಿಲ್ಲಾ ಸಮಿತಿ ಹೆಚ್ಚಿನ ಹೊಂದಾಣಿಕೆಯಿಂದ ಸಾಮೂಹಿಕ ಕಾರ್ಯನಿರ್ವಹಣೆಯ ಭಾವನೆಯಿಂದ ಕೆಲಸ ಮಾಡುವಂತೆ ನೋಡಿಕೊಳ್ಳುವುದು ಅತ್ಯಗತ್ಯ.

ಗುಂಪುಗಾರಿಕೆ, ವೈಯಕ್ತಿಕತೆ ಮತ್ತು ಅಧಿಕಾರಶಾಹಿ ವರ್ತನೆ ಆಗಾಗ ವ್ಯಕ್ತಗೊಳ್ಳುತ್ತಿವೆ. ಅವು ಪಕ್ಷದ ಪ್ರಗತಿಗೆ ತಡೆಯುಂಟು ಮಾಡುತ್ತವೆ. ಪಕ್ಷದ ನೀತಿ-ನಿಯಮಗಳನ್ನು ಸಮಯಸಾಧಕತನದಿಂದ ಉಲ್ಲಂಘಿಸುವವರ ಬಗ್ಗೆ ಉದಾರವಾದ ಇದರ ಜತೆಗಿದೆ. ಪಕ್ಷದ ಕಾರ್ಯದರ್ಶಿ ಮಂಡಳಿಯ ಮಟ್ಟದಲ್ಲಿ ಸಿಐಟಿಯು ಹಾಗೂ ಟ್ರೇಡ್ ಯೂನಿಯನ್ ಮಟ್ಟಗಳಲ್ಲಿ ಹೆಚ್ಚಿನ ಸಾಮೂಹಿಕ ಕಾರ್ಯನಿರ್ವಹಣೆಯ ಅಗತ್ಯವಿದೆ.


ಪ್ರಾಥಮಿಕ ಘಟಕದ ಮಹತ್ವ

ಪಕ್ಷದ ಪ್ರಾಥಮಿಕ ಘಟಕ ಅರ್ಥಾತ್ ಶಾಖೆಯ ಕಾರ್ಯನಿರ್ವಹಣೆಯ ಬಗ್ಗೆ ವಿಶೇಷ ಗಮನ ನೀಡಬೇಕು, ವಿಶೇಷವಾಗಿ ಪಕ್ಷ ದುರ್ಬಲವಾಗಿರುವ ರಾಜ್ಯಗಳಲ್ಲಿ. ಶಾಖೆಗಳ ಕೆಲಸದಲ್ಲಿನ ದೌರ್ಬಲ್ಯ ಹೊಸ ಸದಸ್ಯರ ಭರ್ತಿಯಲ್ಲಿ, ಪಕ್ಷದ ಪತ್ರಿಕೆಗಳ ಮಾರಾಟದಲ್ಲಿ ಮತ್ತು ಸಾಮೂಹಿಕ ಸಂಘಟನೆಗಳ ಪ್ರಾಥಮಿಕ ಘಟಕಗಳ ಕೆಲಸದಲ್ಲಿ ಸ್ಥಗಿತತೆ ಉಂಟಾಗಲು ಒಂದು ಕಾರಣ.

ಪಕ್ಷದ ವರ್ಗ ಸಂಯೋಜನೆ

ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳಿಂದ ಬಂದ ಸದಸ್ಯರ ಪ್ರಮಾಣವನ್ನು ಹೆಚ್ಚಿಸುವ ಪ್ರಶ್ನೆಯತ್ತ ಗಮನ ಕೊಡುವಾಗಲೇ, ಬೂರ್ಜ್ವಾ ತಬಕೋಶದಲ್ಲಿ "ದುರ್ಬಲ ವಿಭಾಗಗಳು" ಎಂದೆನಿಸಿಕೊಳ್ಳಲು ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು, ಧಾರ್ಮಿಕ ಅಲ್ಪಸಂಖ್ಯಾತರು ಹಾಗೂ ಮಹಿಳೆಯರು ಈ ವಿಭಾಗಗಳಿಂದ ಬರುವ ಕಾರ್ಯಕರ್ತರನ್ನು ಯೋಜನಾಬದ್ಧ ರೀತಿಯಲ್ಲಿ ಪಕ್ಷಕ್ಕೆ ಭರ್ತಿ ಮಾಡಿಕೊಳ್ಳುವ, ಶಿಕ್ಷಣ ನೀಡುವ, ಉಚ್ಚ ಜವಾಬ್ದಾರಿಗಳಿಗೇರಿಸುವ ಕೆಲಸ ನಮ್ಮ ಸಾಮಾಜಿಕ ಪರಿಸ್ಥಿತಿಯಲ್ಲಿ ಪಕ್ಷದ ವಿಸ್ತರಣೆಗೆ ಅಗತ್ಯ. ಈ ಬಗ್ಗೆ ಗಮನ ನೀಡುವುದು ನಮ್ಮ ಪಕ್ಷದ ವರ್ಗ ಸಂಯೋಜನೆಯನ್ನು ಬದಲಿಸುವ ಪ್ರಯತ್ನದ ಅವಿಭಾಜ್ಯ ಅಂಗ.

— 13ನೇ ಮಹಾಧಿವೇಶನದ ರಾಜಕೀಯ ಸಂಘಟನಾ ವರದಿಯ ಭಾಗ II ರಿಂದ



... ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಂಬಂಧಿಸಿ ರಷ್ಯಾದಲ್ಲಿ ... ಕಾರ್ಮಿಕ ವರ್ಗದ ಚಳುವಳಿಯ ಬೆಳವಣಿಗೆಯಲ್ಲಿ ಮೂರು ಪ್ರಮುಖ ಹಂತಗಳನ್ನು ಗುರುತಿಸಬಹುದು.

ಒಂದನೇಯದು, ಸಂಕುಚಿತ ಪ್ರಚಾರಾತ್ಮಕ ವರ್ತುಲಗಳಿಂದ ಜನ ಸಮೂಹಗಳ ಮಧ್ಯೆ ವಿಶಾಲವಾದ ಆರ್ಥಿಕ ಪ್ರಕ್ಷೋಭೆಗೆ ಪರಿವರ್ತನೆಯಾಗುವ ಹಂತ.

ಎರಡನೇಯದಾಗಿ, ವಿಶಾಲ ತಳಹದಿಯುಳ್ಳ ರಾಜಕೀಯ ಪ್ರಕ್ಷೋಭೆ ಮತ್ತು ಪ್ರತ್ಯಕ್ಷ ಬೀದಿ ಪ್ರದರ್ಶನಗಳ ಹಂತ.

ಮೂರನೇಯದಾಗಿ ನಿಜವಾದ ಅಂತರ್ಯುದ್ಧ, ನೇರ ಕ್ರಾಂತಿಕಾರಿ ಹೋರಾಟ, ಸಶಸ್ತ್ರ ಜನತಾ ಕ್ರಾಂತಿಯ ಹಂತ. ಈ ಪ್ರತಿಯೊಂದು ಪರಿವರ್ತನೆಯು ಒಂದೆಡೆ ಮುಖ್ಯತಃ ಒಂದೇ ದಿಕ್ಕಿನಲ್ಲಿ ಕಾರ್ಯವೆಸಗುವ ಸಮಾಜವಾದಿ ಚಿಂತನೆಯಿಂದ ತಯಾರುಗೊಳ್ಳುವುದು.

> ಈಗ ಹೊಸ ಉತ್ಕ್ರಾಂತಿಗಳು ಎದ್ದು ಬರುತ್ತಿರುವ ಸಮಯದಲ್ಲಿ ಅನೇ ಹಳಸಲು ಸಿದ್ಧಾಂತಗಳು, ಅಭಿಪ್ರಾಯಗಳು ಬೇರೆ ರೂಪಗಳಲ್ಲಿ ಮತ್ತೊಮ್ಮೆ ಕಾಣಬರುತ್ತಿವೆ. ಈ ಚಳುವಳಿಯು ಮತ್ತೊಮ್ಮೆ ಈ ಎಲ್ಲಾ ಹಳಸಲಾದ, ಸತ್ತ ವಿಚಾರಗಳ ಪಳೆಯುಳಿಕೆಗಳನ್ನು ಬದಿಗೆ ತಳ್ಳಿ ಮುಂದುವರೆಯಲಿದೆ.

ಇನ್ನೊಂದೆಡೆ ಜನತೆಯ ಜೀವನದಲ್ಲಿ ಉಂಟಾಗುವ ಆಳವಾದ ಬದಲಾವಣೆಗಳಿಂದ, ಕಾರ್ಮಿಕ ವರ್ಗದ ಇಡೀ ಮನೋಭಾವದಲ್ಲುಂಟಾಗುವ ಬದಲಾವಣೆಗಳಿಂದ ಮತ್ತು ಹೆಚ್ಚೆಚ್ಚು ವಿಶಾಲವಾದ ಕಾರ್ಮಿಕ ವರ್ಗದ ವಿಭಾಗಗಳು ಹೆಚ್ಚೆಚ್ಚು ಜಾಗೃತರಾಗಿ ಸಕ್ರಿಯ ಹೋರಾಟಗಳನ್ನು ಮಾಡುವ ಮೂಲಕ ತಯಾರುಗೊಳ್ಳುವುದು. ಕೆಲವೊಮ್ಮೆ ಈ ಬದಲಾವಣೆಗಳು ಅಗೋಚರವಾಗಿ ನಡೆಯುವುದು. ಕಾರ್ಮಿಕ ವರ್ಗವು ತನ್ನ ಶಕ್ತಿಗಳನ್ನು ತೆರೆಮರೆಯಲ್ಲಿ ಯಾವ ಕೋಲಾಹಲವೂ ಇಲ್ಲದೆ ಅಣಿ ನೆರೆಸುವುದು. ಆ ಕಾರಣದಿಂದಾಗಿ ಬುದ್ಧಿಜೀವಿಗಳಿಗೆ ಹಲವು ಬಾರಿ ಸಾಮೂಹಿಕ ಚಳುವಳಿಯ ಜೀವಂತ ಶಕ್ತಿ ಮತ್ತು ದೀರ್ಘ ಕಾಲ ಬಾಳುವ ಗುಣದ ಕುರಿತು ಸಂಶಯ ಪಡುವಂತಾಗುತ್ತದೆ. ಆಗ ಒಂದು ತಿರುವು ಬಿಂದು ಉಂಟಾಗುವುದು. ಇಡೀ ಕ್ರಾಂತಿಕಾರಿ ಚಳುವಳಿಯು ಏಕಾಏಕಿ ಎಂಬಂತೆ ಒಂದು ಹೊಸ ಮತ್ತು ಮೇಲಿನ ಘಟ್ಟಕ್ಕೆ ಏರುವುದು. ಕಾರ್ಮಿಕ ವರ್ಗ ಮತ್ತು ಅದರ ಸಮಾಜವಾದಿ-ಪ್ರಜಾಪ್ರಭುತ್ವದ ಮುಂದಳ ಹೊಸ ಪ್ರಾಯೋಗಿಕ ಕರ್ತವ್ಯಗಳನ್ನು ಎದುರಿಸಬೇಕಾಗುವುದು. ಅವುಗಳನ್ನು ಎದುರಿಸಲು ಹೊಸ ಶಕ್ತಿಗಳು ನೆಲದೊಳಗಿಂದಲೋ ಎಂಬಂತೆ ಎದ್ದು ಬರುತ್ತವೆ; ತಿರುವು ಬಿಂದುವಿನ ಸ್ವಲ್ಪ ಮೊದಲು ಅಂಥ ಶಕ್ತಿಗಳು ಅಸ್ತಿತ್ವದಲ್ಲಿ ಇವೆ ಎಂಬುದನ್ನು ಊಹಿಸಲು ಅಸಾಧ್ಯವಾಗಿತ್ತು.

ಆದರೆ ಇದೆಲ್ಲಾ ಒಂದೇ ಸಲ ಸಂಭವಿಸಲಿಲ್ಲ. ಸಮಾಜವಾದಿ–ಪ್ರಜಾಪ್ರಭುತ್ವ ಚಳುವಳಿಯೊಳಗೆ ಹಲವಾರು ಪ್ರವಾಹಗಳ ನಡುವಿನ ಹೋರಾಟಗಳಿಲ್ಲದೆ, ಚಂಚಲತೆಗಳಿಲ್ಲದೆ, ಬಹಳ ಕಾಲದ ಹಿಂದೆಯೇ ಅಳಿದು ಹೋಗಿವೆ ಎಂದು ಅಂದುಕೊಂಡಿದ್ದ ಅಭಿಪ್ರಾಯಗಳ ಮರುಕಳಿಸುವಿಕೆಯಿಲ್ಲದೆ ಇದೆಲ್ಲಾ ನಡೆಯಲಿಲ್ಲ.

ರಷ್ಯಾದಲ್ಲಿ ಮತ್ತೊಮ್ಮೆ ಸಮಾಜವಾದಿ ಪ್ರಜಾಪ್ರಭುತ್ವವು ಚಂಚಲತೆಯ ಕಾಲಘಟ್ಟವನ್ನು ಹಾದುಹೋಗುತ್ತಿದೆ. ರಾಜಕೀಯ ಚಳುವಳಿ ಸಮಯಸಾಧಕ ಸಿದ್ಧಾಂತಗಳನ್ನು ಭೇದಿಸಿಕೊಂಡು ಹೋಗಬೇಕಾಗಿದ್ದ ಕಾಲವೊಂದಿತ್ತು. ಆಗ "ವರ್ಗ" ಎಂಬ ಪದವನ್ನು ಮತ್ತೆ ಮತ್ತೆ ವಿಪರೀತವಾಗಿ ಬಳಸಲಾಗುತ್ತಿತ್ತು. ಪಕ್ಷ ಕಾರ್ಮಿಕ ವರ್ಗದ ಬಾಲಹಿಡಿಯುತ್ತಾಗುತ್ತಿದೆ ಎಂದು ಹೇಳುವ ಮೂಲಕ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಪಕ್ಷ ಕಾರ್ಮಿಕ ವರ್ಗದ ಬೇಡಿಕೆಗಳಿಗಿಂತ ಬಹಳ ಹಿಂದೆ ಬಿದ್ದಿದೆ. ಪಕ್ಷ ಹೊಸ ಕರ್ತವ್ಯಗಳನ್ನು ಈಡೇರಿಸುವ ಸಾಮರ್ಥ್ಯವಿಲ್ಲ ಎಂದೆಲ್ಲಾ ಹೇಳಲಾಗುತ್ತಿತ್ತು. ಆದರೆ ಚಳುವಳಿಯ ದಾರಿ ದೂರದೃಷ್ಟಿಯಿಲ್ಲದ ಈ ಎಲ್ಲ ಭಯಗಳನ್ನು ಹಿಂದುಳಿದ ವಿಚಾರಗಳನ್ನು ಬದಿಗೊತ್ತಿ ಮುನ್ನಡೆಯಿತು.

ಈಗ ಹೊಸ ಉತ್ಕ್ರಾಂತಿಗಳು ಎದ್ದು ಬರುತ್ತಿರುವ ಸಮಯದಲ್ಲಿ ಅವೇ ಸಿದ್ಧಾಂತಗಳು, ಅಭಿಪ್ರಾಯಗಳು ಸ್ವಲ್ಪ ಬೇರೆಯ ರೂಪಗಳಲ್ಲಿ ಮತ್ತೊಮ್ಮೆ ಕಾಣಬರುತ್ತಿವೆ. ನಮ್ಮ ಕಾರ್ಮಿಕತಂತ್ರ ಹಾಗೂ ಸಂಘಟನೆಯನ್ನು ನಮ್ಮ ಹೊಸ ಕರ್ತವ್ಯಗಳ ಈಡೇರಿಕೆಗೆ ಅನುಗುಣಗೊಳಿಸಲು ನಾವು "ಮೇಲ್ಮಟ್ಟದ ಪ್ರದರ್ಶನಗಳ" ಮಾತಾಡುವ 'ಪೊಲೀಸ್ ಸಮಾಜವಾದಿ' (ಝುಬಟೋವ್‌)ಗಳ, ಮತ್ತಿತರ ಸಮಯಸಾಧಕ ಸಿದ್ಧಾಂತಗಳ ಪ್ರತಿರೋಧವನ್ನು, ಪ್ರತಿಗಾಮಿಗಳ ಭಯವನ್ನು ಎದುರಿಸಿನಿಲ್ಲಬೇಕು. ಪಕ್ಷ ಕಾರ್ಮಿಕ ವರ್ಗದ ತುರ್ತು ಅವಶ್ಯಕತೆಗಳಿಗಿಂತ ಹಿಂದೆ ಬಿದ್ದಿದೆ ಎಂದು ಮತ್ತೊಮ್ಮೆ ಹೇಳಲಾಗುತ್ತಿದೆ.

ಕೆಳಮಟ್ಟದ ಚಟುವಟಿಕೆಗಳ ರೂಪಗಳನ್ನು ಪೂಜಿಸುವ ಮಂದಿ, ಮೇಲ್ಮಟ್ಟದ ನಿಜವಾದ ಸಮಾಜವಾದಿ–ಪ್ರಜಾಪ್ರಭುತ್ವವಾದೀ ಸ್ವತಂತ್ರ ಚಟುವಟಿಕೆಯನ್ನು ಕಡೆಗಣಿಸುವ ಮಂದಿ ಕಾರ್ಮಿಕ ವರ್ಗದ ನಿಜವಾದ ಕ್ರಾಂತಿಕಾರಿ ಮುತುವರ್ಜಿತನವನ್ನು ಕಡೆಗಣಿಸುವ ಮಂದಿ ಮತ್ತೊಮ್ಮೆ 'ಕಾರ್ಮಿಕರ ಸ್ವತಂತ್ರ ಚಟುವಟಿಕೆ' ಎಂಬ ಘೋಷಣೆಯ ದುರುಪಯೋಗ ನಡೆಸುತ್ತಿದ್ದಾರೆ.

ಈ ಚಳುವಳಿಯು, ಪುನಃ ಒಮ್ಮೆ ಈ ಎಲ್ಲಾ ಹಳಸಲಾದ ಮತ್ತು ಜೀವವಿಲ್ಲದ ಅಭಿಪ್ರಾಯಗಳ ಪಳೆಯುಳಿಕೆಗಳನ್ನು ಬದಿಗೊತ್ತಿಕೊಂಡು ಮುಂದೊತ್ತಿ ಬೆಳೆಯುತ್ತದೆ ಎಂಬುದರಲ್ಲಿ ಸ್ವಲ್ಪ ಕೂಡಾ ಸಂಶಯವಿಲ್ಲ. ಇದನ್ನು ಕೇವಲ ಹಳೆಯ ತಪ್ಪುಗಳ ನಿರಾಕರಣೆ ಎಂಬುದಾಗಿ ಮಾತ್ರ ತಿಳಿಯಬಾರದು; ಬದಲು, ಬಹಳ ಮುಖ್ಯವಾಗಿ, ಅದರೆ ಹೊಸ ಕರ್ತವ್ಯಗಳನ್ನು ಪೂರೈಸುವ ಕ್ರಿಯಾತ್ಮಕ ಕ್ರಾಂತಿಕಾರಿ ಕೆಲಸದ ಸ್ವರೂಪನೀಡಬೇಕು. ಬಹಳಷ್ಟು ವಿಶಾಲ ಜನಸಮೂಹಗಳಾಗಿ ಕ್ರಾಂತಿಕಾರಿ ರಂಗದತ್ತ ಬರುತ್ತಿರುವ ಹೊಸ ಶಕ್ತಿಗಳನ್ನು ಪಾರ್ಟಿಯೊಳಗೆ ಆಕರ್ಷಿಸಿ ಉಪಯೋಗಿಸುವಂತೆ ನೋಡಿಕೊಳ್ಳಬೇಕು. ಮುಂದೆ ಬರುವ ಮೂರನೇ ಅಧಿವೇಶನದ ಕಾರ್ಯಕಲಾಪಗಳ ಪ್ರಮುಖ ವಿಷಯ ಈ ಕ್ರಿಯಾತ್ಮಕ ಕ್ರಾಂತಿಕಾರಿ ಕೆಲಸ ಹೇಗೆ ನಡೆಸಬೇಕು ಎಂಬುದೇ ಆಗಬೇಕು. ನಮ್ಮ ಎಲ್ಲಾ

> ದೊರೆಗಳ ಕಾನೂನು, ಪೊಲೀಸ್ ಮುಂತಾದ ಅಡ್ಡಿ ಆತಂಕಗಳನ್ನು ಎದುರಿಸಿ ಹೆಚ್ಚೆಚ್ಚು ಕಾರ್ಯಾಚರಣೆಯ ಸ್ವಾತಂತ್ರ್ಯ ಕಿತ್ತುಕೊಳ್ಳುತ್ತಾ ಬಂದದ್ದು ಸಮಾಜವಾದೀ - ಪ್ರಜಾಪ್ರಭುತ್ವವಾದದ ಚಾರಿತ್ರಿಕ ಬೆಳವಣಿಗೆಯ ಒಂದು ಪ್ರಮುಖ ಲಕ್ಷಣ.

ಇದು ಲೆನಿನ್‌ರವರು ವಪೆರ್ಯೋಡ್ (ಮುನ್ನಡೆ) ಎಂಬ ಪತ್ರಿಕೆಯಲ್ಲಿ ಮಾರ್ಚ್ 8, 1905 ರಲ್ಲಿ ಬರೆದ ಲೇಖನ. ಆಗ ರಷ್ಯಾದ ಪ್ರಥಮ ಕ್ರಾಂತಿ ಆರಂಭವಾಗಿದ್ದ ಕಾಲ. ಎರಡು ವರ್ಷಗಳ ಹಿಂದೆ ಪಕ್ಷದ ಸಂವಿಧಾನ, ಕಾರ್ಯಕ್ರಮ ಹಾಗೂ ನಿಯಮಗಳನ್ನು ಅಂಗೀಕರಿಸಿದ ಎರಡನೇ ಮಹಾಧಿವೇಶನ ನಡೆದಿತ್ತು. ಮೂರನೇ ಮಹಾಧಿವೇಶನಕ್ಕೆ ಸಿದ್ಧತೆ ಆಗಲೇ ಆರಂಭವಾಗಿತ್ತು. ಈ ಹಿನ್ನೆಲೆಯಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿಯ ರಂಗತಾಲೀಮು ಎನಿಸಿಕೊಂಡ ಪ್ರಥಮ ಕ್ರಾಂತಿಯ ವಾತಾವರಣ ರಷ್ಯಾದಲ್ಲೆಲ್ಲಾ ವ್ಯಾಪಿಸಿದ್ದ ಕಾಲವದು. ಕಾರ್ಮಿಕ ವರ್ಗದ ಹೊಸ-ಹೊಸ ತಂಡಗಳು ಬೀದಿಗಿಳಿದು ಹೋರಾಡುತ್ತಿದ್ದವು. ರೈತಾಪಿ ವರ್ಗಗಳಲ್ಲಿ, ಇತರ ಪ್ರಜಾಪ್ರಭುತ್ವವಾದಿಗಳ ವಿಭಾಗಗಳಲ್ಲೂ ಕ್ರಾಂತಿಕಾರಿ ಮನೋಭಾವ ವ್ಯಕ್ತಗೊಳ್ಳುತ್ತಿತ್ತು. 1905-87ರ ಈ ಅವಧಿಯಲ್ಲಿ ರಶ್ಯನ್ ಪಕ್ಷ ಗಳಿಸಿದ ಅನುಭವ 1917ರ ಚಾರಿತ್ರಿಕ ಸಾಧನೆಗೆ ಅಡಿಗಲ್ಲು ಹಾಕಿತು.

ಲೆನಿನ್‌ರವರು ಈ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಈ ಲೇಖನದ ಮೂಲಕ ನೀಡಿದ ಮಾರ್ಗದರ್ಶನ ಈಗ, ಮುಖ್ಯವಾಗಿ ಡಿಸೆಂಬರ್ 9ರ ಚಾರಿತ್ರಿಕ ರ್‍ಯಾಲಿಯ ನಂತರ ದೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ಸನ್ನಿವೇಶದಲ್ಲಿ ನಮಗೂ ಮಾರ್ಗದರ್ಶಕವಾಗಬಲ್ಲವು ಎಂಬ ಉದ್ದೇಶದಿಂದ ಕಾಂ. ಪಿ. ರಾಮಚಂದ್ರರಾವ್ ಇದನ್ನು ಅನುವಾದಿಸಿದ್ದಾರೆ.

ಈ ಲೇಖನದಲ್ಲಿ ಬರುವ ಸಮಾಜವಾದೀ-ಪ್ರಜಾಪ್ರಭುತ್ವವಾದಿಗಳು ಅಥವಾ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳೆಂದರೆ ಈಗಿನ ಸೋವಿಯತ್ ಕಮ್ಯುನಿಸ್ಟ್ ಪಕ್ಷವೇ. ಕ್ರಾಂತಿಯ ನಂತರ 1918 ರಲ್ಲಿ ಏಳನೇ ಮಹಾಧಿವೇಶನ ನಡೆಯುವವರೆಗೆ ಸೋವಿಯತ್ ರಷ್ಯದ ಕಮ್ಯುನಿಸ್ಟ್ ಪಕ್ಷದ ಹೆಸರು 'ರಷ್ಯನ್ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಕಾರ್ಮಿಕ ಪಕ್ಷ' ಎಂದೇ ಇತ್ತು ಎಂಬುದನ್ನು ಗಮನಿಸಬೇಕು.

ಹೊಸ ಕರ್ತವ್ಯಗಳು - ಹೊಸ ಶಕ್ತಿಗಳು

ಪಾರ್ಟಿ ಸದಸ್ಯರು ತಮ್ಮ ಪ್ರಾದೇಶಿಕ ಮತ್ತು ಸಾರ್ವತ್ರಿಕ ಕೆಲಸಗಳಲ್ಲಿ ಈ ಪ್ರಶ್ನೆಗಳತ್ತ ಮುಖ್ಯ ಗಮನಹರಿಸಬೇಕು.

ಇನ್ನು ನಮ್ಮನ್ನೆದುರಿಸುವ ಈ ಕರ್ತವ್ಯಗಳ ಕುರಿತು ನಾವು ಹಲವು ಬಾರಿ ಸ್ಥೂಲವಾಗಿ ಮಾತಾಡಿದ್ದೇವೆ. ಸಮಪ್ರಕ್ಷೋಭೆಯನ್ನು ಹೇಟಿಯ ಮತ್ತು ಗ್ರಾಮಾಂತರದ ಬಡವರ ಹೊಸ ಪದರುಗಳ ಮಧ್ಯೆ ಒಯ್ಯಬೇಕು; ಒಂದು ವಿಶಾಲವಾದ ಹೆಚ್ಚು ಸುಲಭ ನಿರ್ವಹಣೆಯ ಮತ್ತು ಹೆಚ್ಚು ಬಲಿಷ್ಠವಾದ ಸಂಘಟನೆಯನ್ನು ಕಟ್ಟಬೇಕು; ದಂಗೆಗೆ ತಯಾರು ಮಾಡಿ ಜನತೆಯನ್ನು ಸಶಸ್ತ್ರಗೊಳಿಸಬೇಕು; ಮತ್ತು ಈ ಉದ್ದೇಶಗಳಿಗಾಗಿ, ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿಗಳ ಜತೆ ಒಪ್ಪಂದ ಮಾಡಿಕೊಳ್ಳಬೇಕು. ಈ ಕರ್ತವ್ಯಗಳನ್ನು ಪೂರೈಸುವುದಕ್ಕಾಗಿ ಹೊಸ ಶಕ್ತಿಗಳು ಎದ್ದು ಬಂದಿವೆ ಎಂಬುದು ರಷ್ಯಾದಲ್ಲೆಲ್ಲಾ ಸಾರ್ವತ್ರಿಕ ಮುಷ್ಕರಗಳು ನಡೆಯುತ್ತಿರುವ ವರದಿಗಳಿಂದ ನಿಸ್ಸಂಶಯವಾಗಿ ಸಾಬೀತಾಗುತ್ತದೆ; ಮತ್ತು ಪ್ರಜಾಪ್ರಭುತ್ವವಾದಿ ಬುದ್ಧಿಜೀವಿಗಳ ಯುವಕರ ಮುಷ್ಕರ ಮತ್ತು ಕ್ರಾಂತಿಕಾರಿ ಮನೋಭಾವದಿಂದ ಸ್ಪಷ್ಟವಾಗುತ್ತದೆ; ಬಂಡವಾಳಶಾಹಿಯ ಹಲವಾರು ವಿಭಾಗಗಳಲ್ಲಿ ಕೂಡಾ ಈ ಕ್ರಾಂತಿಕಾರಿ ಮನೋಭಾವವನ್ನು ಕಾಣಬಹುದು.

ಈ ಮಹತ್ವದ ಹೊಸ ಶಕ್ತಿಗಳು ಹಾಗೂ ಇದುವರೆಗೆ ಕಾರ್ಮಿಕ ಮತ್ತು ರೈತಾಪಿ ವರ್ಗಗಳಲ್ಲಿನ ಅತ್ಯಂತ ಚಿಕ್ಕಸ್ವರೂಪದ ಸತ್ವದ ಒಂದು ಸಣ್ಣ ಪ್ರಮಾಣವಷ್ಟೇ ಈ ಅಭೂತಪೂರ್ವ ಉತ್ಸಾಹದಲ್ಲಿ ಭಾಗವಹಿಸಿದೆ ಎಂಬ ಸಂಗತಿ ಈ ಹೊಸ ಕರ್ತವ್ಯಗಳನ್ನು ಯಶಸ್ವಿಯಾಗಿ ಈಡೇರಿಸಲು ಸಾಧ್ಯ ಎಂಬ ಭರವಸೆ ನೀಡುತ್ತಿವೆ.

ನಮ್ಮೆದುರು ಇರುವ ಪ್ರಶ್ನೆಯೆಂದರೆ, ಮೊದಲನೆಯದಾಗಿ, ಹೇಗೆ ಈ ಹೊಸ ಶಕ್ತಿಗಳನ್ನು ಬಳಸುವುದು, ಒಂದಾಗಿಸುವುದು ಮತ್ತು ಸಂಘಟಿಸುವುದು? ಹಳೆಯ ಬಂಡವಾಳಶಾಹೀ ಶೋಷಣೆ ಇರುವವರೆಗೆ ನಾವು ಎದುರಿಸಲೇಬೇಕಾದ ದಿನನಿತ್ಯದ ಸಾಮಾನ್ಯ ಕರ್ತವ್ಯಗಳನ್ನು ಒಂದು ಕ್ಷಣವೂ ಮರೆಯದೆ ಹೇಗೆ ಈಗಿನ ಮೇಲ್ಮಟ್ಟದ ಕರ್ತವ್ಯಗಳತ್ತ ಗಮನ ಕೇಂದ್ರೀಕರಿಸುವುದು?

ಈ ಪ್ರಶ್ನೆಯನ್ನು ಬಗೆಹರಿಸುವ ಹಲವು ವಿಧಾನಗಳನ್ನು ಸೂಚಿಸಲು ಒಂದು ನಿರ್ದಿಷ್ಟ ಉದಾಹರಣೆಯಿಂದ ಆರಂಭಿಸೋಣ. ಈಗಿನ ಸಮಾಜವಾದೀ-ಪ್ರಜಾಪ್ರಭುತ್ವವಾದಿಗಳಿಗೆ ಶೈಕ್ಷಣಿಕ ಕೆಲಸದ ಬಗ್ಗೆ, ಕಾನೂನು ಬದ್ಧ ದಾರಿಗಳನ್ನು

> ಎಲ್ಲೆಲ್ಲೂ ಎಲ್ಲಾ ರೀತಿಯ ಕ್ರಾಂತಿಕಾರೀ ಸ್ವತಂತ್ರ ಚಟುವಟಿಕೆಗಳು ಹೆಚ್ಚುತ್ತಾ ಹೋದಂತೆ ಸಮಯ ಸಾಧಕ ಸುಧಾರಣಾವಾದಿ ಸಿದ್ಧಾಂತಿಗಳ ಆಕರ್ಷಕ ಪದಗಳ ಟೊಳ್ಳುತನ ಹೆಚ್ಚೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ. ಆಗ ಕಾರ್ಮಿಕ ಪಕ್ಷದ ಸ್ವತಂತ್ರ ಚಟುವಟಿಕೆಯ ಅರ್ಥ ಹೆಚ್ಚೆಚ್ಚು ಪ್ರಾಮುಖ್ಯ ಗಳಿಸುತ್ತದೆ.

ಬಳಸುವ ಬಗ್ಗೆ ಬಹಳ ಭಯ. ಕಾರ್ಮಿಕ ಆಂದೋಲನಗಳ ರಾಜಕೀಯೇತರ ರೂಪಗಳ ಬಗ್ಗೆ ಅವರಿಗೆ ಭಯ. ಆದ್ದರಿಂದ ಅವರು ಭ್ರಮಾಲೋಕದಲ್ಲಿದ್ದಾರೆ ಎಂದು ಬೂರ್ಜ್ವಾ ಉದಾರವಾದಿಗಳು ನಮ್ಮ ಬಗ್ಗೆ ಹೇಳುತ್ತಿದ್ದಾರೆ. ಜತೆಗೇ ಕಾರ್ಮಿಕ ಆಂದೋಲನ ಕಟ್ಟಲು ಮುಂದಾಗಬೇಕು, ನಮ್ಮನ್ನು (ಸಮಾಜವಾದಿ-ಪ್ರಜಾಪ್ರಭುತ್ವವಾದಿಗಳನ್ನು) ವಿರೋಧಿಸಿಯಲ್ಲ, ನಮ್ಮ ಹೆಗಲಿಗೆ ಹೆಗಲು ಕೊಟ್ಟು ಮುಂದಾಗಬೇಕು ಎಂದೂ ಅವರು ತಮ್ಮ ಅನುಯಾಯಿಗಳನ್ನು ವಿನಂತಿಸಿಕೊಳ್ಳುತ್ತಾರೆ.

ಇಲ್ಲಿ ಮೊದಲನೆಯದಾಗಿ ಸ್ಪಷ್ಟಪಡಿಸಬೇಕಾದ ಅಂಶವೆಂದರೆ ನಮಗೆ ಕಾನೂನು ಬದ್ಧ ಚಟುವಟಿಕೆಗಳ ಬಗ್ಗೆ 'ಭಯ' ಅಥವಾ 'ಭ್ರಮೆ'ಯಿಲ್ಲ. 1902ರಷ್ಟು ಹಿಂದೆಯೇ ನಾವು 'ಸಮಾಜವಾದಿಯಲ್ಲದ, ರಾಜಕೀಯೇತರ ಕಾರ್ಮಿಕ ಸಂಘಗಳ ಕಾನೂನೀಕರಣ ರಷ್ಯಾದಲ್ಲಿ ಶುರುವಾಗಿದೆ ಎಂದು ಹೇಳಿ ವರ್ಗ ಶಾಂತಿಯ ಕುರಿತು ವರ್ಗಸಾಮರಸ್ಯದ ಉದಾರವಾದೀ ಭಾಷಣಗಳನ್ನೆಲ್ಲಾ ಬಯಲಿಗೆಳೆಯಬೇಕು. ಈ ಮೂಲಕ ಈ ಕಾನೂನೀಕರಣ ಮುಂದೆ ನಮಗೆ ಪ್ರಯೋಜನಕಾರಿ, ಕ್ರಾಂತಿಕಾರಿಗಳಿಗೆ ಸತ್ಯದಿಂದ ಹೊಟ್ಟನ್ನು ಪ್ರತ್ಯೇಕಿಸುವ ಮೇಲ್ಮಟ್ಟದ ಕೆಲಸಗಳಿಗೆ

> ನಮ್ಮೆದುರು ಇರುವ ಪ್ರಶ್ನೆಯೆಂದರೆ ಹೇಗೆ ಈ ಹೊಸಶಕ್ತಿಗಳನ್ನು ಬಳಸುವುದು, ಒಂದಾಗಿಸುವುದು ಮತ್ತು ಸಂಘಟಿಸುವುದು ? ಬಂಡವಾಳಶಾಹೀ ಶೋಷಣೆ ಇರುವವರೆಗೆ ನಾವು ಎದುರಿಸಲೇಬೇಕಾದ ದಿನನಿತ್ಯದ ಕರ್ತವ್ಯಗಳನ್ನು ಒಂದು ಕ್ಷಣವೂ ಮರೆಯದೆ ಹೇಗೆ ಮೇಲ್ಮಟ್ಟದ ಕರ್ತವ್ಯಗಳತ್ತ ಗಮನ ಕೇಂದ್ರೀಕರಿಸುವುದು ?

ಇದರಿಂದ ಹೆಚ್ಚಿನ ಸಮಯಾವಕಾಶ ಸಿಗುತ್ತದೆಂದು ಹೇಳಿದ್ದೆವು. ಈಗಿನ ಬೂರ್ಜ್ವಾ ಉದಾರವಾದಿಗಳು ಈ ಹೇಳಿಕೆಯ ಮೂಲಕ ವಾಸ್ತವವಾಗಿ ಸಮಾಜವಾದಿ ಪ್ರಜಾಪ್ರಭುತ್ವವಾದಿಗಳು ಬೂರ್ಜ್ವಾ ಉದಾರವಾದಿಗಳ ವರ್ಗ ಮೂಲವನ್ನು ಬಯಲಿಗೆಳೆಯುತ್ತಾರೆ ಎಂಬ ಭಯ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರಷ್ಟೆ.

ಆದರೆ ನಮ್ಮ ಈಗಿನ ಕರ್ತವ್ಯಗಳ ದೃಷ್ಟಿಯಿಂದ ನಮಗೀಗ ಅತ್ಯಂತ ಆಸಕ್ತಿಯ ಪ್ರಶ್ನೆಯೆಂದರೆ, ಕ್ರಾಂತಿಕಾರಿಗಳನ್ನು ತಮ್ಮ ಕೆಲವು ಕೆಲಸ ಕಾರ್ಯಗಳಿಂದ ಬಿಡುಗಡೆಗೊಳಿಸುವುದು ? ನಾವು ಈಗ ಕ್ರಾಂತಿಯ ಆರಂಭವನ್ನು ಅನುಭವಿಸುತ್ತಿರುವಾಗ ಈ ಪ್ರಶ್ನೆ ನಿರ್ದಿಷ್ಟವಾಗಿ ಸಕಾಲಿಕವೂ, ವ್ಯಾಪಕ ಪ್ರಾಮುಖ್ಯತೆಯನ್ನೂ ಪಡೆದ ಪ್ರಶ್ನೆಯಾಗಿದೆ.

'ನಾವು ಎಷ್ಟು ಉತ್ಸಾಹದಿಂದ ನಮ್ಮ ಕ್ರಾಂತಿಕಾರಿ ಕೆಲಸವನ್ನು ಮಾಡುತ್ತಾ ಹೋಗುತ್ತೇವೋ ಅಷ್ಟೇ ತ್ವರಿತವಾಗಿ ಸರಕಾರ ಕಾರ್ಮಿಕ ಸಂಘಗಳ ಒಂದು ಭಾಗವನ್ನು ಕಾನೂನು ಬದ್ಧಗೊಳಿಸಲೇಬೇಕಾಗಿ ಬರುತ್ತದೆ. ಆ ಮೂಲಕ ನಮ್ಮ ಮೇಲಿನ ಹೊರೆಯ ಒಂದು ಭಾಗ ಜಾರಿ ಹಗುರವಾಗುತ್ತದೆ' ಎಂದು ನಾವು ಹಿಂದೆಯೇ ಹೇಳಿದ್ದೆವು. ಉತ್ಸಾಹಪೂರ್ಣ ಕ್ರಾಂತಿಕಾರೀ ಹೋರಾಟ ಇನ್ನೂ ಹಲವು ರೀತಿಗಳಲ್ಲಿ ನಮ್ಮ ಹೊರೆಯನ್ನು ಹಗುರಗೊಳಿಸುತ್ತದೆ. ಈಗಿನ ಸನ್ನಿವೇಶ ಹಿಂದೆ ನಿಷೇಧಕ್ಕೊಳಗಾಗಿದ್ದ ಬಹಳಷ್ಟು ಸಂಗತಿಗಳನ್ನು ಕಾನೂನುಬದ್ಧಗೊಳಿಸಿರುವುದು ಮಾತ್ರವಲ್ಲ, ಆಂದೋಲನವನ್ನು ಎಷ್ಟೊಂದು ವ್ಯಾಪಕಗೊಳಿಸಿದೆಯೆಂದರೆ ಹಿಂದೆ ಕೇವಲ ಕ್ರಾಂತಿಕಾರಿಗಳ ಕೈಗೆ ಮಾತ್ರ ಎಟಕುವ ಸಂಗತಿಯೆನಿಸಿಕೊಂಡದ್ದು ಈಗ ಜನಸಮೂಹಗಳಿಗೂ ಸಾಧ್ಯವಿರುವ ಸಾಂಪ್ರದಾಯಿಕ ಸಂಗತಿಗಳಾಗಿ ಬಿಟ್ಟಿವೆ. ಝಾರ್ ದೊರೆಗಳ ಪೊಲೀಸ್, ಕಾನೂನು ಏನೇ ಇರಲಿ, ಎಲ್ಲಾ ಅಡ್ಡಿ-ಆತಂಕಗಳನ್ನು ಎದುರಿಸಿ ಹೆಚ್ಚೆಚ್ಚು ಕಾರ್ಯಾಚರಣೆಯ ಸ್ವಾತಂತ್ರ್ಯ ಗಳಿಸುತ್ತಾ ಬಂದದ್ದು ಸಮಾಜವಾದೀ - ಪ್ರಜಾಪ್ರಭುತ್ವವಾದದ

(ಮುಂದಿನ ಸಂಚಿಕೆಗೆ)

ಚಾರಿತ್ರಿಕ ಬೆಳವಣಿಗೆಯ ಒಂದು ಸ್ವಾಭಾವಿಕ ಲಕ್ಷಣ.

ಕ್ರಾಂತಿಕಾರಿ ಕಾರ್ಮಿಕ ವರ್ಗದ ಸುತ್ತ ಸರ್ಕಾರದ ಯೋಚಿಸಲೂ ಸಾಧ್ಯವಾಗದಂತಹ ಒಂದು ಸಹಾನುಭೂತಿ ಮತ್ತು ಬೆಂಬಲದ ವಾತಾವರಣ ಬೆಳೆದು ನಿಂತಿದೆ. ಈ ಸಹಾನುಭೂತಿ ಮತ್ತು ಬೆಂಬಲ ಕಾರ್ಮಿಕ ವರ್ಗದ ಒಳಗಿನಿಂದ ಮಾತ್ರವೇ ಅಲ್ಲ, ಇತರ ವರ್ಗಗಳಿಂದಲೂ ದೊರೆಯುತ್ತಿದೆ (ಅವರು ಕಾರ್ಮಿಕ ವರ್ಗದ ಪ್ರಜಾಪ್ರಭುತ್ವವಾದಿಗಳ ಬೇಡಿಕೆಗಳ ಸಣ್ಣ ಅಂಶವನ್ನು ಮಾತ್ರ ಒಪ್ಪುತ್ತಾರೆಂಬುದು ಬೇರೆ ಮಾತು).

ಆರಂಭದಲ್ಲಿ ನಾವು ಕಾರ್ಮಿಕರಿಗೆ ಅಕ್ಷರಾಭ್ಯಾಸ ಕಲಿಸಬೇಕಾಗಿತ್ತು. ಈಗ ರಾಜಕೀಯ ಸಾಕ್ಷರತೆ ಎಷ್ಟು ಅಗಾಧವಾಗಿ ಬೆಳೆದಿದೆಯೆಂದರೆ ನಾವು ಮೇಲ್ಮಟ್ಟದ ಸಮಾಜವಾದಿ--ಪ್ರಜಾಪ್ರಭುತ್ವದ ಧ್ಯೇಯಸಾಧನೆಯತ್ತ ಗಮನ ಕೇಂದ್ರೀಕರಿಸಲು ಸಾಧ್ಯವಾಗಿದೆ.

ಆರಂಭದ ಹಂತಗಳಲ್ಲಿ ಒಬ್ಬ ಸಮಾಜವಾದೀ ಪ್ರಜಾಪ್ರಭುತ್ವವಾದಿ ಬಹಳಷ್ಟು ಪಾಲು ಸಾಂಸ್ಕೃತಿಕವೆನ್ನಬಹುದಾದ ಕೆಲಸವನ್ನೇ, ಅಥವಾ ಸುಮಾರಾಗಿ ಆರ್ಥಿಕ ಚಳುವಳಿಯ ಮೇಲೇನೆ ಗಮನ ಕೇಂದ್ರೀಕರಿಸಬೇಕಾಗಿತ್ತು. ಈಗ ಈ ಕೆಲಸಗಳು ಒಂದೊಂದಾಗಿ ಆಂದೋಲನವನ್ನು ಸೇರಿಕೊಳ್ಳುತ್ತಿರುವ ಹೊಸ ಶಕ್ತಿಗಳು, ವ್ಯಾಪಕ ವಿಭಾಗಗಳ ಕೈಗೆ ಹೋಗುತ್ತಿವೆ. ಕ್ರಾಂತಿಕಾರೀ ಸಂಘಟನೆಗಳು ಈಗ ಹೆಚ್ಚೆಚ್ಚಾಗಿ ನಿಜವಾದ ರಾಜಕೀಯ ನೇತೃತ್ವದ, ಕಾರ್ಮಿಕರ ಪ್ರತಿಭಟನೆ, ಜನತೆಯ ಅಸಂತೃಪ್ತಿಯಿಂದ ಸಮಾಜವಾದೀ ಪ್ರಜಾಪ್ರಭುತ್ವವಾದಿ ತೀರ್ಮಾನಗಳಿಗೆ ಬರುವ ಕೆಲಸಗಳನ್ನು ಮಾಡುತ್ತಿವೆ.

ಆರಂಭದಲ್ಲಿ ಕಾರ್ಮಿಕರಿಗೆ ನಾವು ಅಆ ಇಈ ಕಲಿಸಬೇಕಾಗುತ್ತಿತ್ತು. ಇದು ಅಕ್ಷರಶಃ ಕೂಡಾ ಸತ್ಯ. ಈಗ ರಾಜಕೀಯ ಸಾಕ್ಷರತೆಯ ಮಟ್ಟ ಎಷ್ಟು ಅಗಾಧವಾಗಿ ಬೆಳೆದಿದೆಯೆಂದರೆ ನಮ್ಮೆಲ್ಲಾ ಶಕ್ತಿಗಳನ್ನು ಕ್ರಾಂತಿಕಾರೀ ಪ್ರವಾಹಕ್ಕೆ ಒಂದು ಸಂಘಟಿತ ದಿಕ್ಕು ನೀಡುವ ಹೆಚ್ಚು ನೇರವಾದ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಧ್ಯೇಯ ಸಾಧನೆಯತ್ತ ಕೇಂದ್ರೀಕರಿಸಲು ಸಾಧ್ಯವಾಗಿದೆ ಮತ್ತು ಕೇಂದ್ರೀಕರಿಸಬೇಕು ಕೂಡಾ. ಇದುವರೆಗೆ ನಾವು ಬಹಳಷ್ಟು ಶಕ್ತಿ ವ್ಯಯಿಸಬೇಕಾಗಿದ್ದ 'ಪೂರ್ವಸಿದ್ಧತೆ' ಕೆಲಸವನ್ನು ಉದಾರವಾದಿಗಳು ಮತ್ತು ಕಾನೂನುಬದ್ಧ ಪತ್ರಿಕೆಗಳೇ ಬಹಳಷ್ಟು ಮಾಡುತ್ತಿವೆ. ದುರ್ಬಲಗೊಂಡ ಸರಕಾರ ಪ್ರಜಾಪ್ರಭುತ್ವವಾದೀ ವಿಚಾರಗಳ ಬಹಿರಂಗ ಪ್ರಚಾರಕ್ಕೆ ಕಿರುಕುಳ ಕೊಡುತ್ತಿಲ್ಲ. ಈ ವಿಚಾರಗಳು ಎಷ್ಟು ವ್ಯಾಪಕವಾಗಿ ಪ್ರಚಾರವಾಗಿವೆಯೆಂದರೆ ನಾವು ಈ ಆಂದೋಲನದ ಹೊಸ ಸಾಧ್ಯತೆಗಳೊಂದಿಗೆ ಹೊಂದಿಕೊಳ್ಳಲು ಕಲಿಯಬೇಕಾಗಿ ಬಂದಿದೆ. ಸಹಜವಾಗಿಯೇ ಈ ಪೂರ್ವಸಿದ್ಧತೆಯ ಕೆಲಸದಲ್ಲಿ ಸತ್ವವೂ ಇದೆ, ಟೊಳ್ಳೂ ಇದೆ. ಸಹಜವಾಗಿಯೇ ಸಮಾಜವಾದಿ-ಪ್ರಜಾಪ್ರಭುತ್ವವಾದಿಗಳು ಈಗ ಕಾರ್ಮಿಕರ ಮೇಲೆ ಬೂರ್ಜ್ವಾ ಪ್ರಜಾಪ್ರಭುತ್ವವಾದಿಗಳ ಪ್ರಭಾವವನ್ನು ಎದುರಿಸಲು ಹೆಚ್ಚು ಗಮನ ನೀಡಬೇಕು. ಆದರೆ ಈ ಕೆಲಸದಲ್ಲೇ ನಾವು ಹಿಂದೆ ಮಾಡುತ್ತಿದ್ದ ರಾಜಕೀಯ ಪ್ರಜ್ಞೆಯಿಲ್ಲದ ಜನಸಮೂಹಗಳನ್ನು ಜಾಗೃತಗೊಳಿಸುವ ಕೆಲಸಕ್ಕಿಂತ ಹೆಚ್ಚು ಸಮಾಜವಾದೀ-ಪ್ರಜಾಪ್ರಭುತ್ವವಾದೀ ಸತ್ವವಿರುತ್ತದೆ.

ಎಷ್ಟು ಹೆಚ್ಚು ಜನತೆಯ ಚಳುವಳಿ ಹರಡುತ್ತದೋ, ಅಷ್ಟೇ ಸ್ಪಷ್ಟವಾಗಿ ವಿವಿಧ ವರ್ಗಗಳ ನಿಜವಾದ ಸ್ವಭಾವ ಬಯಲಿಗೆ ಬರುತ್ತದೆ. ಕಾರ್ಮಿಕ ವರ್ಗದ ಪಕ್ಷದ ಕರ್ತವ್ಯ ಕೂಡಾ ಘಟನೆಗಳ ಬಾಲ ಹಿಡಿದು ಹೋಗುವ ಬದಲು ತನ್ನ ವರ್ಗಕ್ಕೆ ನೇತೃತ್ವ ಕೊಡುವಲ್ಲಿ, ಅದರ ಸಂಘಟಕನಾಗುವಲ್ಲಿ ಹೆಚ್ಚುತ್ತಾ ಹೋಗುತ್ತದೆ. ಎಲ್ಲೆಲ್ಲೂ ಎಲ್ಲಾ ರೀತಿಯ ಕ್ರಾಂತಿಕಾರೀ ಸ್ವತಂತ್ರ ಚಟುವಟಿಕೆಗಳು ಹೆಚ್ಚುತ್ತಾ ಹೋದಂತೆ ಸಮಯಸಾಧಕ ಸುಧಾರಣಾವಾದಿ ಸಿದ್ಧಾಂತಿಗಳ ಆಕರ್ಷಕ ಪದಗಳ ಟೊಳ್ಳುತನ ಹೆಚ್ಚೆಚ್ಚು ಸ್ಪಷ್ಟವಾಗುತ್ತಾ ಹೋಗುತ್ತದೆ.

ಆಗ ಸಮಾಜವಾದಿಪ್ರಜಾಪ್ರಭುತ್ವವಾದಿಗಳ ಸ್ವತಂತ್ರ ಚಟುವಟಿಕೆಯ ಅರ್ಥವು ಹೆಚ್ಚೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ.

ಸಾಮಾಜಿಕ ಚಳುವಳಿಯ ಹೊಸ ಪ್ರವಾಹಗಳು ವಿಸ್ತೃತವಾದಂತೆ, ಈ ಪ್ರವಾಹಗಳಿಗೆ ಹೊಸ ಕಾಲುವೆಗಳನ್ನು ಸೃಷ್ಟಿಸುವ ಸಾಮರ್ಥ್ಯವುಳ್ಳ ಒಂದು ಬಲಿಷ್ಠವಾದ ಸಮಾಜವಾದಿ-ಪ್ರಜಾಪ್ರಭುತ್ವವಾದೀ ಸಂಘಟನೆಯ ಪ್ರಾಮುಖ್ಯತೆಯು ಹೆಚ್ಚೆಚ್ಚಾಗುವುದು.

ಸರಳ ಮಾತುಗಳಲ್ಲಿ ಹೇಳುವುದಾದಲ್ಲಿ ನೂರು ಪಟ್ಟು ಹೆಚ್ಚಿದ ಜನತೆಯ ಕ್ರಾಂತಿಕಾರಿ ಶಕ್ತಿಯ ಪ್ರವಾಹಕ್ಕೆ ಅನುಗುಣವಾಗಿ ನಾವು ಪಕ್ಷದ ಸದಸ್ಯ ಸಂಖ್ಯೆಯನ್ನು ಸಾಮೂಹಿಕ ಸಂಘಟನೆಗಳ ಸದಸ್ಯಸಂಖ್ಯೆಯನ್ನು ಹೆಚ್ಚಿಸಬೇಕು.

ಸಮಾಜವಾದಿ—ಪ್ರಜಾಪ್ರಭುತ್ವವಾದಿಗಳಿಗೆ ಒಂದು ಕ್ರಾಂತಿಕಾರಿ ಕಾಲಘಟ್ಟವು ಒಂದು ಸೈನ್ಯಕ್ಕೆ ಯುದ್ಧ ಕಾಲ ಇದ್ದಂತೆ. ನಾವು ನಮ್ಮ ಸೈನ್ಯದ ಕಾರ್ಯಕರ್ತರನ್ನು ವಿಸ್ತರಿಸಬೇಕು. ನಾವು ಅವರನ್ನು ಶಾಂತಿ ಕಾಲದ ಶಕ್ತಿಯಿಂದ ಯುದ್ಧ ಕಾಲದ ಶಕ್ತಿಗೆ ಮುನ್ನಡೆಸಬೇಕು. ಮೀಸಲು ಪಡೆಗಳನ್ನಾಗಿ ಇದ್ದವರನ್ನು ಅಣಿನೆರೆಸಬೇಕು. ವಿಸರ್ಜಿಸಿದ ಪಡೆಗಳನ್ನು ಪುನಃ ಕರೆಯಬೇಕು. ಹೊಸ ತುಕಡಿಗಳನ್ನು ಘಟಕಗಳನ್ನು ರಚಿಸಬೇಕು. ಯುದ್ಧ ಕಾಲದಲ್ಲಿ ಅವಶ್ಯಕವಾಗಿಯೂ ಅನಿವಾರ್ಯವಾಗಿಯೂ ಕಡಿಮೆ ತರಬೇತಿವುಳ್ಳವರನ್ನು ಭರ್ತಿಮಾಡಬೇಕಾಗುತ್ತದೆ ಎಂಬುದನ್ನು ನಾವು ಮರೆಯಬಾರದು. ಹಲವುಬಾರಿ ಸೈನ್ಯಾಧಿಕಾರಿಗಳ ಸ್ಥಾನಗಳಲ್ಲಿ ಸಾಮಾನ್ಯ ಯೋಧರನ್ನು ಭರ್ತಿಮಾಡಬೇಕಾಗುವುದು. ಸೈನ್ಯಾಧಿಕಾರಿಗಳ ಹುದ್ದೆಗೆ ಬಡ್ತಿಯನ್ನು ತ್ವರಿತಗೊಳಿಸಬೇಕು, ಸರಳಗೊಳಿಸಬೇಕು.

ಸಮಾಜವಾದಿ ಪ್ರಜಾಪ್ರಭುತ್ವವಾದಿಗಳು ಪರಿಣಾಮಕಾರಿಯಾಗಿ ಕೆಲಸಮಾಡಿದರೆ ಪತ್ರಿಕೆಗಳ ಈ ವೇದಿಕೆಗಳು ಘಟನೆಗಳ ಒತ್ತಡದಿಂದ ಮೊದಲು ಕಾರ್ಮಿಕರ ಪಕ್ಷದ ಪ್ರಜಾಪ್ರಭುತ್ವವಾದಿ ಸಹಾಯಕರಾಗಿ ನಂತರ ಪಕ್ಷವನ್ನು ಪೂರ್ಣವಾಗಿ ಒಪ್ಪಿದ ಸದಸ್ಯರಾಗಿ ಮಾರ್ಪಾಟುಗೊಳ್ಳುತ್ತವೆ.

ಅಲಂಕಾರ ಬಿಟ್ಟು ಸರಳ ಮಾತುಗಳಲ್ಲಿ ಹೇಳುವುದರಲ್ಲಿ ನೂರುಪಟ್ಟು ಹೆಚ್ಚಿದ ಜನತೆಯ ಕ್ರಾಂತಿಕಾರಿ ಶಕ್ತಿಯ ಪ್ರವಾಹಕ್ಕೆ ಅನುಗುಣವಾಗಿ ನಾವು ಪಕ್ಷದ ಸದಸ್ಯತನವನ್ನು, ಪಕ್ಷಕ್ಕೆ ಸಂಬಂಧಿಸಿದ ಸಂಘಟನೆಗಳ ಸಂಖ್ಯೆಯನ್ನೂ ಹೆಚ್ಚಿಸಬೇಕಾಗುತ್ತದೆ. ಇದರ ಅರ್ಥ ಮಾರ್ಕ್ಸ್‌ವಾದಿ ತತ್ವಗಳ ಕುರಿತು ಸತತವಾದ ತರಬೇತಿ ಮತ್ತು ಕ್ರಮಬದ್ಧವಾದ ಕಲಿಸುವಿಕೆಯನ್ನು ಬದಿಗೊತ್ತಿಬಿಡುವುದೆಂದಲ್ಲ. ಈಗಿನ ಕಾಲದಲ್ಲಿ ಸೈನಿಕ ಕಾರ್ಯಾಚರಣೆಗಳು ತರಬೇತಿ ಮತ್ತು ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚು ಪ್ರಾಮುಖ್ಯವಾಗಿದೆ ಎಂಬುದನ್ನು ನಾವು ಮರೆತುಬಿಡಬಾರದು. ಅವು ನಿರ್ದಿಷ್ಟವಾಗಿ ಮತ್ತು ಸಂಪೂರ್ಣವಾಗಿ ನಮ್ಮ ದೃಷ್ಟಿಯಿಂದಲೇ ತರಬೇತಿ ಕೊಡುತ್ತವೆ. ನಮ್ಮ ಮಾರ್ಕ್ಸ್‌ವಾದ ಕುರಿತಾದ 'ತಾತ್ವಿಕ ನಿಷ್ಠೆ'ಯನ್ನು ಕ್ರಾಂತಿಕಾರಿ ಘಟನೆಗಳ ಮುನ್ನಡೆಯು ದೃಢಗೊಳಿಸುತ್ತಿವೆ ಎಂಬುದನ್ನು ನಾವು ಮರೆಯಬಾರದು. ಈ ಘಟನೆಗಳು ಎಲ್ಲೆಡೆಗಳಲ್ಲಿ ಜನ ಸಮೂಹಗಳಿಗೆ ವಸ್ತುಸ್ಥಿತಿಯ ಪಾಠಗಳನ್ನು ಒದಗಿಸುತ್ತಿವೆ ಮತ್ತು ನಮ್ಮ 'ತತ್ವ' ಸರಿಯೆಂಬುದನ್ನೇ ಆ ಪಾಠಗಳು ಅವರಿಗೆ ಕಲಿಸಿಕೊಡುತ್ತಿವೆ. ಆದ್ದರಿಂದ ನಾವು 'ತತ್ವ'ವನ್ನು ತ್ಯಜಿಸಬೇಕು ಎಂದು ಹೇಳುವುದಿಲ್ಲ, ಅಥವಾ ಬೆಚ್ಚನೆಯ ವಿಚಾರಗಳಲ್ಲೇ ಮುಳುಗಿದ ಬುದ್ಧಿಜೀವಿಗಳ ಮತ್ತು ಗಾಳಿಯಲ್ಲಿ ಮಾತನಾಡುವ ಕ್ರಾಂತಿಕಾರಿಗಳ ಬಗ್ಗೆ ನಮ್ಮ ಅಪನಂಬಿಕೆ ಮತ್ತು ಸಂಶಯಾತ್ಮಕ ದೃಷ್ಟಿಕೋನವನ್ನು ಸಡಿಲಗೊಳಿಸಬೇಕೆಂದು ನಾವು ಹೇಳುವುದಿಲ್ಲ. ತದ್ವಿರುದ್ಧವಾಗಿ ನಾವು ತತ್ವವನ್ನು ಹೇಳುವ ಹೊಸ ವಿಧಾನಗಳ ಕುರಿತು ಮಾತನಾಡುತ್ತಿದ್ದೇವೆ. ಒಬ್ಬ ಸಮಾಜವಾದಿ ಪ್ರಜಾಪ್ರಭುತ್ವವಾದಿ ಇದನ್ನು ಮರೆಯುವುದು ಅಕ್ಷಮ್ಯ ಅಪರಾಧವಾಗುವುದು.

ಈ ಉದ್ದೇಶಕ್ಕೆ ನೂರಾರು ಹೊಸ ಸಂಘಟನೆಗಳನ್ನು ಏರ್ಪಡಿಸಬೇಕಾಗಿದೆ. ಹೌದು ನೂರಾರು. ಇದು ಉತ್ಪ್ರೇಕ್ಷೆಯಲ್ಲ. ಸಂಘಟನೆ ಮಾಡುವುದಕ್ಕೆ 'ಸಮಯ ಮೀರಿದೆ' ಎಂಬುದು ಯಾವತ್ತೂ ಇಲ್ಲ.


ಈಗ ಕ್ರಾಂತಿಕಾರಿ ಘಟನೆಗಳ ವಾಸ್ತವಿಕ ಪಾಠಗಳನ್ನು ಉಪಯೋಗಿಸುವ ಮಹತ್ವವನ್ನು ತಿಳಿಯಪಡಿಸುವ ಕುರಿತು ನಾವು ಮಾತಾಡುತ್ತಿದ್ದೇವೆ. ಹಿಂದೆ ಮಾಡುತ್ತಿದ್ದಂತೆ ಇವುಗಳನ್ನೂ ನಾವೀಗ ಕೇವಲ ಸೀಮಿತ ಅಧ್ಯಯನ ವಲಯಗಳಿಗೆ ತಿಳಿಯಪಡಿಸುವುದಿಲ್ಲ, ಒಟ್ಟು ಜನ ಸಮೂಹಗಳಿಗೆ ತಿಳಿಯಪಡಿಸಬೇಕು. ನಮ್ಮ ಹಿಂದಿನ 'ತತ್ವ'ಗಳ ಪಾಠಗಳನ್ನು ತಿಳಿಯಪಡಿಸಬೇಕು. ಉದಾಹರಣೆಗಾಗಿ ಕಾರ್ಯತಃ ಜನಸಮೂಹಗಳ ದಂಗೆಯೊಡನೆ ಭಯೋತ್ಪಾದನೆಯನ್ನೂ ವಿಲೀನಗೊಳಿಸುವ ಬಗ್ಗೆ ತಿಳಿಸಬೇಕು. ವಿದ್ಯಾವಂತ ರಷ್ಯನ್ ಸಮಾಜದ ಉದಾರವಾದದ ಹಿಂದೆ ಬೂರ್ಜ್ವಾ ವರ್ಗದ ವರ್ಗ ಗುಣಗಳನ್ನು ಕಾಣಲು ಸಮರ್ಥರಾಗಬೇಕು ಎಂದು ತಿಳಿಸಬೇಕು.

ಹೀಗೆ, ನಮ್ಮ ಸಮಾಜವಾದಿ-ಪ್ರಜಾಪ್ರಭುತ್ವವಾದದ ಸ್ಪಷ್ಟತೆಯನ್ನು ಸಡಿಲಗೊಳಿಸುವ ಪ್ರಶ್ನೆಯಿಲ್ಲ. ನಮ್ಮ ಸಂಪ್ರದಾಯಕ ಹಠಮಾರಿತನವನ್ನು ಕಡಿಮೆಮಾಡುವ ಪ್ರಶ್ನೆಯಿಲ್ಲ. ಬದಲು ತರಬೇತಿಯ ಹೊಸ ವಿಧಾನಗಳನ್ನೂ ಹೊಸ ದಾರಿಗಳನ್ನು ಬಲಪಡಿಸಬೇಕಾದ ಪ್ರಶ್ನೆಯಾಗಿದೆ. ಯುದ್ಧ ಕಾಲದಲ್ಲಿ, ನೇರ ಸೈನಿಕ ಕಾರ್ಯಾಚರಣೆಗಳ ಮೂಲಕ ಹೊಸದಾಗಿ ಸೇರ್ಪಡೆಯಾದ ಯೋಧರು ತಮ್ಮ ತರಬೇತಿಯನ್ನು ಪಡೆಯಬೇಕು. ಆದ್ದರಿಂದ ಸಂಗಾತಿಗಳು ಧೈರ್ಯದಿಂದ ತರಬೇತಿಯ ಹೊಸ ವಿಧಾನಗಳನ್ನು ಉಪಯೋಗಿಸಲು ಮುಂದಾಗಬೇಕು. ಮುಂದಕ್ಕೆ ನಡೆಯಿರಿ. ಹೆಚ್ಚೆಚ್ಚು ಸ್ಕ್ವಾಡುಗಳನ್ನು ಸಂಘಟಿಸಿರಿ. ಅವರನ್ನು ಯುದ್ಧಕ್ಕೆ ಕಳುಹಿಸಿರಿ. ಹೆಚ್ಚೆಚ್ಚು ಯುವ ಕಾರ್ಮಿಕರನ್ನು ಸೇರ್ಪಡೆ ಮಾಡಿರಿ. ಸಾಮಾನ್ಯವಾದ ಪಾರ್ಟಿ ಸಂಘಟನಾ ಚೌಕಟ್ಟನ್ನು ವಿಸ್ತರಿಸಿರಿ. ಕಮಿಟಿಗಳಿಂದ ಫ್ಯಾಕ್ಟರಿ ಗುಂಪುಗಳಿಗೆ ಟ್ರೇಡ್ ಯೂನಿಯನ್‌ಗಳಿಗೆ ಮತ್ತು ವಿದ್ಯಾರ್ಥಿ ವರ್ತುಲಗಳಿಗೆ ಪಾರ್ಟಿ ಚೌಕಟ್ಟನ್ನು ವಿಸ್ತರಿಸಿರಿ. ಈ ಕರ್ತವ್ಯದಲ್ಲಿ ಒಂದೊಂದು ನಿಮಿಷದ ವಿಳಂಬವೂ ಅನುಕೂಲ ಮಾಡಿಕೊಡುತ್ತದೆ. ಎನ್ನುವುದನ್ನು ನೆನಪಿನಲ್ಲಿಡಿರಿ. ಕಾರಣ, ಹೊಸ ಪ್ರವಾಹಗಳು ತುರ್ತಾಗಿ ಹೊರ ಹರಿಯುವುದಕ್ಕೆ ದಾರಿ ಹುಡುಕುತ್ತಿವೆ. ಅವುಗಳಿಗೆ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಕಾಲುವೆ ಕಂಡುಕೊಳ್ಳಲು ಸಾಧ್ಯವಾಗದಿದ್ದರೆ, ಬೇರೆ ಕಾಲುವೆಯಲ್ಲಿ ಹರಿಯತೊಡಗುವುವು. ಯಾವುದೇ ಕ್ರಾಂತಿಕಾರಿ ಚಳವಳಿಯ ಪ್ರತಿಯೊಂದು ಪ್ರಾಯೋಗಿಕ ಹೆಜ್ಜೆಯೂ ಅನಿವಾರ್ಯವಾಗಿ ಮತ್ತು ಖಂಡಿತವಾಗಿ ಹೊಸತಾಗಿ ಸೇರ್ಪಡೆಯಾದ ಯುವಕರಿಗೆ ಸಮಾಜವಾದಿ-ಪ್ರಜಾಪ್ರಭುತ್ವ ವಿಜ್ಞಾನದಲ್ಲಿ ಒಂದು ಪಾಠವನ್ನು ಕಲಿಸುತ್ತದೆ ಎಂಬುದನ್ನು ಮರೆಯಬೇಡಿ. ಕಾರಣ ಈ ವಿಜ್ಞಾನವು ವಿವಿಧ ವರ್ಗಗಳ ಶಕ್ತಿಗಳ ಮತ್ತು ಪ್ರವೃತ್ತಿಗಳ ಸರಿಯಾದ ವಸ್ತುನಿಷ್ಠ ಅಂದಾಜಿನ ಆಧಾರದಮೇಲೆ ನಿಂತಿದೆ. ಕ್ರಾಂತಿ ಕೂಡಾ ಹಳೆಯ ಮೇಲ್ ಸೌಧಗಳನ್ನು ಕಿತ್ತುಹಾಕಿ ವಿವಿಧ ವರ್ಗಗಳು ಅವುಗಳ ಸ್ಥಾನದಲ್ಲಿ ತಮ್ಮದೇ ಆದ ರೀತಿಯಲ್ಲಿ ಹೊಸ ಮೇಲ್ ಸೌಧಗಳನ್ನು ಕಟ್ಟಲು ನಡೆಸುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಆದರೆ, ನಮ್ಮ ಕ್ರಾಂತಿಕಾರಿ ವಿಜ್ಞಾನವನ್ನು ಕೇವಲ ಪುಸ್ತಕದ ಬದನೆಕಾಯಿಯಾಗಿ ಪರಿವರ್ತನೆ ಮಾಡಬೇಡಿ. ಅದನ್ನು ತಂತ್ರಗಳ ಪ್ರಕ್ರಿಯೆ ಮತ್ತು ಸಂಘಟನೆಯ ಪ್ರಕ್ರಿಯೆ ಎಂದು ಹೊಲಸು ಶಬ್ದ ಪುಂಜಗಳ ಮಟ್ಟಕ್ಕೆ ಇಳಿಸಿ ತುಚ್ಛಗೊಳಿಸಬೇಡಿ; ಗಲಿಬಿಲಿ, ಚಂಚಲತೆ ಮತ್ತು ಉತ್ಸಾಹಹೀನತೆ ಹರಡುವ ಪದಪುಂಜಗಳ ಹೀನ ಮಟ್ಟಕ್ಕಿಳಿಸಬೇಡಿ. ಅತ್ಯಧಿಕ ವೈವಿಧ್ಯಮಯ ಗುಂಪುಗಳಿಗೂ ವರ್ತುಲಗಳಿಗೂ ವಿವಿಧ ರೀತಿಯ ಚಟುವಟಿಕೆಗಳನ್ನು ಮಾಡಲು ಅಧಿಕ ಅಸ್ಪದಗಳನ್ನು ಕೊಡಿ. ನಮ್ಮ ಸಲಹೆಯಿಲ್ಲದೆ ಅದರ ಗೊಡವೆ ಇಲ್ಲದೆ ಕೂಡಾ ಕ್ರಾಂತಿಕಾರಿ ಘಟನೆಗಳ ಅನಿವಾರ್ಯ ಮುನ್ನಡೆಯು ಅವರನ್ನೆಲ್ಲಾ ಸರಿಯಾದ ದಾರಿಯಲ್ಲೇ ಇರಿಸುತ್ತವೆ ಎಂಬುದನ್ನು ಮರೆಯಬೇಡಿರಿ. ಒಂದು ಹಳೆಯ ನಾಣ್ಣುಡಿ ಇದೆ. ರಾಜಕೀಯದಲ್ಲಿ ನಾವು ನಮ್ಮ ವೈರಿಯಿಂದ ಕಲಿಯಬೇಕಾಗಿದೆ. ಹಾಗೆಯೇ ಕ್ರಾಂತಿಕಾರಿ ಕಾಲದಲ್ಲಿ ವೈರಿಯು ನಮ್ಮ ಮೇಲೆ ಸರಿಯಾದ ನಿಲುವುಗಳನ್ನು ತೆಗೆದುಕೊಳ್ಳುವಂತೆ ಒತ್ತಡ ಹೇರುತ್ತಾನೆ. ನಿರ್ದಿಷ್ಟವಾದ ಅರ್ಥವತ್ತಾದ ತ್ವರಿತವಾದ ಸರಿಯಾದ ನಿಲುವುಗಳನ್ನು ನಾವು ತೆಗೆದುಕೊಳ್ಳುವಂತೆ ವೈರಿಶಕ್ತಿ ಒತ್ತಡ ಹೇರುತ್ತದೆ.

ಒಟ್ಟಾಗಿ ಹೇಳುವುದಾದರೆ ನಾವು ಬೆಳೆಯುತ್ತಿರುವ ಚಳುವಳಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಅದು ನೂರು ಪಟ್ಟು ಹೆಚ್ಚಾಗಿದೆ: ಕೆಲಸದ ಹೊಸ ಸ್ಫೂರ್ತಿಯಿಂದ ಕೂಡಿದೆ; ಹೆಚ್ಚೆಚ್ಚು ಮುಕ್ತವಾದ ವಾತಾವರಣದಿಂದ ಕೂಡಿದೆ. ಚಟುವಟಿಕೆ ವಿಶಾಲ ಕ್ಷೇತ್ರಗಳಲ್ಲಿ ನಡೆಯುತ್ತಿದೆ. ಕೆಲಸಕ್ಕೆ ಸಂಪೂರ್ಣವಾಗಿ ಬೇರೆಯೇ ವಿಸ್ತಾರವನ್ನು ಕೊಡಬೇಕಾಗಿದೆ. ತರಬೇತಿಯ ವಿಧಾನಗಳನ್ನು ಶಾಂತಿ ಕಾಲದ ಕಲಿಕೆಯಿಂದ ಸೈನಿಕ ಕಾರ್ಯಾಚರಣೆಗಳ ದಿಕ್ಕಿನಲ್ಲಿ ಬದಲಾಯಿಸಬೇಕು. ನಮ್ಮ ಎಲ್ಲಾ ಮತ್ತು ಪ್ರತಿಯೊಂದು ತರಹದ ಸಂಘಟನೆಗಳಿಗೆ ಧೈರ್ಯದಿಂದ ವಿಶಾಲ ಪ್ರಮಾಣದಲ್ಲಿ ಮತ್ತು ತ್ವರಿತಗತಿಯಿಂದ ಸಮರ್ಥರಾದ ಯುವಕರುಗಳನ್ನು ರಿಕ್ರೂಟ್

[10ನೇ ಪುಟ ನೋಡಿ]

ಸಮಾಜವಾದಿ-ಪ್ರಜಾಪ್ರಭುತ್ವವಾದದ ನಿಖರತೆಯನ್ನು ಸಡಿಲಗೊಳಿಸುವ ಪ್ರಶ್ನೆಯಿಲ್ಲ. ನಮ್ಮ ಸಾಂಪ್ರದಾಯಿಕ ಹಠಮಾರಿತನವನ್ನು ಕಡಿಮೆ ಮಾಡುವ ಪ್ರಶ್ನೆಯೂ ಇಲ್ಲ. ಬದಲು ತರಬೇತಿಯ ಹೊಸ ವಿಧಾನಗಳನ್ನು, ಹೊಸ ದಾರಿಗಳನ್ನು ಬಲಪಡಿಸಬೇಕಾದ ಪ್ರಶ್ನೆಯಾಗಿದೆ. ಇದು. ಮುಂದಕ್ಕೆ ನಡೆಯಿರಿ, ಹೆಚ್ಚೆಚ್ಚು ತಂಡಗಳನ್ನು ಸಂಘಟಿಸಿರಿ. ಅವರನ್ನು ಕಾರ್ಯಾಚರಣೆಗಿಳಿಸಿ. ಹೆಚ್ಚೆಚ್ಚು ಯುವ ಕಾರ್ಮಿಕರನ್ನು ಸೇರ್ಪಡೆ ಮಾಡಿರಿ. ಸಾಮಾನ್ಯವಾದ ಪಾರ್ಟಿ ಸಂಘಟನಾ ಚೌಕಟ್ಟನ್ನು ವಿಸ್ತರಿಸಿರಿ. ಈ ಕರ್ತವ್ಯದಲ್ಲಿ ಒಂದೊಂದು ನಿಮಿಷದ ವಿಳಂಬವೂ ನಮ್ಮ ವೈರಿಗಳಿಗೆ ಅನುಕೂಲ ಮಾಡಿಕೊಡುತ್ತದೆ. ಕಾರಣ ಹೊಸ ಪ್ರವಾಹಗಳು ತುರ್ತಾಗಿ ಹೊರ ಹರಿಯುವುದಕ್ಕೆ ದಾರಿ ಹುಡುಕುತ್ತವೆ. ಅವುಗಳಿಗೆ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಕಾಲುವೆ ಕಂಡುಕೊಳ್ಳಲು ಸಾಧ್ಯವಾಗದಿದ್ದರೆ ಬೇರೆ ಕಾಲುವೆಗಳಲ್ಲಿ ಹರಿಯತೊಡಗುತ್ತವೆ.



ಹೊಸಕರ್ತವ್ಯಗಳು-ಹೊಸಶಕ್ತಿಗಳು

[9ನೇ ಪುಟದಿಂದ]

ಮಾಡಬೇಕಾಗಿದೆ. ಈ ಉದ್ದೇಶಕ್ಕೆ ಯಾವುದೇ ತಾವರಿಕೆಯಿಲ್ಲದೆ ನೂರಾರು ಹೊಸ ಸಂಘಟನೆಗಳನ್ನು ನಿರ್ಮಿಸಬೇಕಾಗಿದೆ. ಹೌದು, ನೂರಾರು; ಇದೇನು ಉತ್ಪ್ರೇಕ್ಷೆ ಅಲ್ಲ. ಅಂತಹ ವಿಶಾಲವಾದ ಸಂಘಟನಾತ್ಮಕ ಕೆಲಸವನ್ನು ಮಾಡಲಿಕ್ಕೆ 'ಸಮಯ ಮೀರಿದೆ' ಎಂದು ನಮಗೆ ಯಾರೂ ಹೇಳಬೇಕಾದುದಿಲ್ಲ. ಇಲ್ಲ, ಸಂಘಟನೆ ಮಾಡುವುದಕ್ಕೆ 'ಸಮಯ ಮೀರಿದೆ' ಎಂಬುದು ಯಾವತ್ತೂ ಇಲ್ಲ. ನಮಗೆ ಕಾನೂನುರೀತ್ಯ ದೊರಕಿದ ಸ್ವಾತಂತ್ರ್ಯವನ್ನು ನಾವು ಉಪಯೋಗಿಸಬೇಕು. ಜತೆಗೆ ಕಾನೂನನ್ನು ವಿರೋಧಿಸಿ ನಾವು ಗಳಿಸುವ ಸ್ವಾತಂತ್ರ್ಯವನ್ನೂ ಬಳಸಿ ಎಲ್ಲಾ ವಿಧಗಳ ಪಾರ್ಟಿ ಸಂಘಟನೆಗಳನ್ನು ಹೆಚ್ಚಿಸಬೇಕು ಮತ್ತು ಬಲಪಡಿಸಬೇಕು. ಕ್ರಾಂತಿ ಯಾವುದೇ ಹಾದಿ ಹಿಡಿಯಲಿ ಅಥವಾ ಪರಿಣಾಮ ಏನೇ ಆಗಲಿ, ಒಂದಿಲ್ಲೊಂದು ರೀತಿಯಲ್ಲಿ ಅದ್ದಿಯೇ ಬರಲಿ. ಕಾರ್ಮಿಕ ವರ್ಗ ಸಂಘಟಿತವಾಗಿರುವ ಮಟ್ಟಿಗೆ ಅದರ ನಿಜವಾದ ಸಾಧನೆಗಳು ಖಂಡಿತ ಭದ್ರಗೊಳ್ಳುತ್ತವೆ.

'ಸಂಘಟಿಸಿರಿ' ಎಂಬ ಘೋಷಣೆ ಬಹುಮತೀಯರು ಎರಡನೇ ಮಹಾಧಿವೇಶನದಲ್ಲಿ ಪೂರ್ಣವಾಗಿ ರೂಪಿಸಿದ, ಜಾರಿಗೊಳಿಸಬೇಕೆಂದು ಬಯಸಿದ ಘೋಷಣೆ ಕಾರ್ಯಗತಗೊಳಿಸಬೇಕಾಗಿದೆ. ಹೊಸ ಸಂಘಟನೆಗಳನ್ನು ನಿರ್ಮಿಸುವುದರಲ್ಲಿ ನಾವು ಧೈರ್ಯದಿಂದ ಮುಂತುವರ್ಜಿ ವಹಿಸುವುದರಲ್ಲಿ ವಿಫಲರಾದರೆ, ನಾವು ಮುಂದಳ'ದ ಪಾತ್ರ ವಹಿಸುವವರು ಎಂದೆಲ್ಲಾ ಹೇಳಿಕೊಳ್ಳುವ ಮಾತುಗಳು ಅರ್ಥರಹಿತ ಎಂದು ಬಿಟ್ಟುಬಿಡಬೇಕಾಗುತ್ತದೆ. ನಾವು ಈಗಾಗಲೇ ಸಾಧಿಸಿದ ಗುಂಪುಗಳ, ವರ್ತುಲಗಳ, ಸಭೆಗಳ ಮೇರೆಗಳಿಗೆ ನಮ್ಮನ್ನು ಸೀಮಿತಗೊಳಿಸಿ ನಿಸ್ಸಹಾಯಕರಾಗಿ ನಿಂತರೆ ನಾವು ನಮ್ಮ ಅಸಮರ್ಥತೆಯನ್ನಷ್ಟೇ ತೋರಿಸಿಕೊಟ್ಟಂತಾಗುತ್ತದೆ. ನಮ್ಮ ಸಹಾಯವಿಲ್ಲದೆ ಎಲ್ಲೆಡೆಗಳಲ್ಲಿ ಸಾವಿರಾರು ವರ್ತುಲಗಳು ಎದ್ದು ಬರುತ್ತಿವೆ. ಯಾವುದೇ ನಿರ್ದಿಷ್ಟ ಕಾರ್ಯಕ್ರಮ ಅಥವಾ ಉದ್ದೇಶವಿಲ್ಲದೆ ಸಾವಿರಾರು ವರ್ತುಲಗಳು ಸಂಘಟನೆಗಳ ಒತ್ತಡದಿಂದ ಹುಟ್ಟಿಬರುತ್ತಿವೆ. ಇಂತಹ ವರ್ತುಲಗಳಲ್ಲಿ ಅತ್ಯಧಿಕ ಸಂಖ್ಯೆಯ ವರ್ತುಲಗಳೊಡನೆ ಸಮಾಜವಾದಿ-ಪ್ರಜಾಪ್ರಭುತ್ವವಾದಿಗಳು ನೇರ ಸಂಪರ್ಕಗಳನ್ನು ಬೆಳೆಸಿ ಬಲಪಡಿಸಬೇಕಾಗಿದೆ; ಅವುಗಳಿಗೆ ಸಹಾಯ ಮಾಡಬೇಕು. ತಮ್ಮ ಸ್ವಂತ ಜ್ಞಾನದ ಪ್ರಯೋಜನವನ್ನು ಕೊಡಬೇಕು. ಅನುಭವದ ಪ್ರಯೋಜನವನ್ನು ಕೊಡಬೇಕು. ಅವನ್ನು ತಮ್ಮ ಕ್ರಾಂತಿಕಾರಿ ಮುಂತುವರ್ಜಿತನದಿಂದ ಅವುಗಳಲ್ಲಿ ಸ್ಫೂರ್ತಿ ತುಂಬಬೇಕು. ಅಂತಹ ಎಲ್ಲಾ ವರ್ತುಲಗಳು, ಅವುಗಳಲ್ಲಿ ಘಂಟಾಘೋಷವಾಗಿ ಸಮಾಜವಾದಿ-ಪ್ರಜಾಪ್ರಭುತ್ವಾತ್ಮಕವಲ್ಲದವುಗಳನ್ನು ಹೊರತುಪಡಿಸಿ, ಉಳಿದವೆಲ್ಲಾ ನೇರವಾಗಿ ಪಾರ್ಟಿಗೆ ಸೇರಲಿ ಅಥವಾ ಪಾರ್ಟಿಯ ಜತೆಯಲ್ಲಿ ಬಂದು ಸೇರಲಿ. ಪಾರ್ಟಿಯ ಜತೆಗೂಡಿ ಬರುವುದಾದರೆ ಅವರ ಮುಂದೆ ನಮ್ಮ ಕಾರ್ಯಕ್ರಮವನ್ನು ಒಪ್ಪಿಕೊಳ್ಳಬೇಕು ಎಂಬ ಬೇಡಿಕೆಯನ್ನು ನಾವು ಇಡಬಾರದು. ಅವರು ಸಂಘಟನಾತ್ಮಕವಾಗಿ ನಮ್ಮೊಡನೆ ಸಂಬಂಧವನ್ನು ಬೆಳೆಸಲೇಬೇಕು ಎಂದು ಹೇಳಬಾರದು. ಅವುಗಳ ಪ್ರತಿಭಟನಾ ಮನೋಭಾವ ಮತ್ತು ಅಂತರರಾಷ್ಟ್ರೀಯ ಕ್ರಾಂತಿಕಾರಿ ಸಮಾಜವಾದಿ-ಪ್ರಜಾಪ್ರಭುತ್ವದ ಬಗ್ಗೆ ಸಹಾನುಭೂತಿ ಇದ್ದರೆ ಸಾಕು. ಕಾರಣ, ಸಮಾಜವಾದಿ-ಪ್ರಜಾಪ್ರಭುತ್ವವಾದಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ, ಹಿತೈಷಿಗಳ ಈ ವೇದಿಕೆಗಳು ಘಟನೆಗಳ ಒತ್ತಡದಿಂದ ಮೊದಲು ಸಮಾಜವಾದಿ - ಪ್ರಜಾಪ್ರಭುತ್ವವಾದಿ ಕಾರ್ಮಿಕ ಪಕ್ಷದ ಪ್ರಜಾಪ್ರಭುತ್ವವಾದಿ ಸಹಾಯಕರಾಗಿ ನಂತರ ಪಕ್ಷವನ್ನು ಪೂರ್ಣವಾಗಿ ಒಪ್ಪಿದ ಸದಸ್ಯರಾಗಿ ಮಾರ್ಪಾಟುಗೊಳ್ಳುತ್ತವೆ.

ಜನರೆಯ ಸಮೂಹಗಳು ಧಾರಾಳ ಇವೆ. ನಮ್ಮಲ್ಲಿ ಜನಗಳ ಕೊರತೆಯಿದೆ. ಈ ವೈರುಧ್ಯವೇ ಸೂತ್ರವು ಸಮಾಜವಾದಿ-ಪ್ರಜಾಪ್ರಭುತ್ವವಾದಿ ಪಕ್ಷದ ಸಂಘಟನಾ ಜೀವನ ಮತ್ತು ಸಂಘಟನಾ ಅವಶ್ಯಕತೆಗಳ ನಡುವಿನ ವೈರುಧ್ಯವನ್ನು ದೀರ್ಘ ಕಾಲದಿಂದ ವ್ಯಕ್ತಪಡಿಸುತ್ತಾ ಬಂದಿದೆ. ಈಗ ಈ ವೈರುಧ್ಯ ಎಲ್ಲಾ ಕಾಲಕ್ಕಿಂತ ಹೆಚ್ಚು ಸ್ಪಷ್ಟವಾಗುತ್ತಿದೆ. ನಾವು ಎಲ್ಲಾ ಕಡೆಗಳಿಂದ ಹೊಸ ಶಕ್ತಿಗಳಿಗಾಗಿ ಭಾವನಾ ಪರವಶವಾದ ಬೇಡಿಕೆಗಳನ್ನು ಸಂಘಟನೆಯಲ್ಲಿ ಈ ಶಕ್ತಿಗಳ ಅಭಾವದ ಬಗ್ಗೆ ದೂರುಗಳನ್ನು ಆಗಾಗ ಹೇಳುತ್ತೇವೆ. ಅದೇ ಸಮಯದಲ್ಲಿ ಎಲ್ಲೆಡೆಗಳಲ್ಲಿ ವಿಶೇಷವಾಗಿ ಕಾರ್ಮಿಕ ವರ್ಗದ ಮಧ್ಯದಿಂದ ಯುವ ಶಕ್ತಿಗಳು ತಮ್ಮ ಸೇವೆಯನ್ನು ಅರ್ಪಿಸಲು ಅಪಾರ ಸಂಖ್ಯೆಯಲ್ಲಿ ಮುಂದೆ ಬರುತ್ತಿವೆ.

ಮಹಾನ್ ಫ್ರೆಂಚ್ ಕ್ರಾಂತಿ ತುತ್ತತುದಿಯಲ್ಲಿದ್ದಾಗ ಫ್ರಾನ್ಸಿನಲ್ಲಿ ಜನರಿಲ್ಲ; ಕುಬ್ಜರಿದ್ದಾರಷ್ಟೆ ಎಂದು ಬರೆದ ಶ್ರೀಮತಿ ರೋಲಂಡ್'ರ ಭ್ರಮೆ ಇಲ್ಲಿ ನೆನಪಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ಜನರ ಅಭಾವವಿದೆ ಎಂದು ದೂರುವ ರಾಜಕೀಯ ಸಂಘಟಕ ಇದೇ ಭ್ರಮೆಯಿಂದ ನರಳುತ್ತಿದ್ದಾನೆ. ಇಂತಹವರಿಗೆ ಮರಗಳೇ ಕಾಣುತ್ತವೆ. ಕಾಡು ಕಾಣುವುದಿಲ್ಲ.

ಆತವರು ಘಟನೆಗಳಿಂದ ಕಂಗೆಟ್ಟು ಹೋಗಿದ್ದಾನೆ. ಅವರು ಕ್ರಾಂತಿಕಾರಿಗಳಂತೆ ಘಟನೆಗಳನ್ನು ತಮ್ಮ ಮನಸ್ಸಿನ ಮೂಲಕ ಮತ್ತು ಕೃತಿಗಳ ಮೂಲಕ ನಿಯಂತ್ರಣ ಮಾಡುವುದಿಲ್ಲ. ಬದಲು ಘಟನೆಗಳು ಅವರನ್ನು ನಿಯಂತ್ರಿಸಿ ವಿಸ್ಮಯಗೊಳಿಸುತ್ತವೆ. ಅಂತಹ ಸಂಘಟಕರು ನಿವೃತ್ತರಾಗುವುದು ಉತ್ತಮ; ಅವರು ತಮ್ಮ ಕ್ರಾಂತಿಕಾರಿ ಉತ್ಸುಕತೆಯ ಮೂಲಕ ತಮ್ಮ ಅನುಭವದ ಕೊರತೆಯನ್ನು ಭರ್ತಿ ಮಾಡಿಕೊಳ್ಳುತ್ತಿರುವ ಯುವಕ ಶಕ್ತಿಗಳಿಗೆ ಕ್ಷೇತ್ರವನ್ನು ಬಿಟ್ಟುಕೊಡುವುದು ಉತ್ತಮ.

ಜನರ ಕೊರತೆಯಿಲ್ಲ ಹಿಂದೆಂದೂ ಕ್ರಾಂತಿಕಾರಿ ರಷ್ಯಾ ಈಗಿನಷ್ಟು ಜನಬಾಹುಳ್ಯ ಪಡೆದಿರಲಿಲ್ಲ. ಹಿಂದೆಂದೂ ಯಾವ ಕ್ರಾಂತಿಕಾರೀ ವರ್ಗವೂ ಪಡೆದಿರದಷ್ಟು ತಾತ್ಕಾಲಿಕ ಗೆಳೆಯರನ್ನು ಪ್ರಜಾಶೀಲ ಮಿತ್ರರನ್ನು ಹಾಗೂ ತಮಗೆ ಅರಿವಿಲ್ಲದೆಯೇ ಬೆಂಬಲಿಸುತ್ತಿರುವವರನ್ನು ರಷ್ಯಾದ ಕಾರ್ಮಿಕ ವರ್ಗ ಇಂದು ಹೊಂದಿದೆ. ಜನ ಸಮೂಹಗಳೇ ಇವೆ. ನಾವೀಗ ಮಾಡಬೇಕಾಗಿರುವುದು ಘಟನೆಗಳ ಜಾಲ ಹಿಡಿಯುವ ನಮ್ಮ ವಿಚಾರಗಳನ್ನು, ಪರಿಕಲ್ಪನೆಗಳನ್ನು ತೊರೆದು ಮುಂತುವರ್ಜಿಗೆ ಉತ್ಸಾಹಕ್ಕೆ ಯೋಜನೆಗಳಿಗೆ ಪೂರ್ಣ ಅಸ್ಪದ ನೀಡಿ. ಈ ಮೂಲಕ ನಾವು ಕ್ರಾಂತಿಕಾರಿ ವರ್ಗದ ಸುಯೋಗ್ಯ ಪ್ರತಿನಿಧಿಗಳು ಎಂದು ತೋರಿಸಿಕೊಡಬೇಕು. ಆಗ ರಷ್ಯಾದ ಕಾರ್ಮಿಕ ವರ್ಗ ಪೂರ್ಣ ಮಹಾನ್ ರಷ್ಯನ್ ಕ್ರಾಂತಿಯನ್ನು ಎಷ್ಟು ವೀರಾವೇಶದಿಂದ ಆರಂಭಿಸಿದೆಯೋ ಅಷ್ಟೇ ವೀರಾವೇಶದಿಂದ ಅದನ್ನು ನಡೆಸಿಕೊಡುತ್ತದೆ.

ನೆಲ್ಸನ್ ಮಂಡೆಲಾ ಬಿಡುಗಡೆಗೆ ಒತ್ತಾಯಿಸಿದ ಯುವ ತಂಡ
ರಾಮನಗರದ ಗಾಳಿಪಟ ಸ್ಪರ್ಧೆಯಲ್ಲಿ



ಕೇಂದ್ರ ಸರ್ಕಾರದ ಪಕ್ಷಪಾತ ನಿಲುವಿಗೆ ಮತ್ತೊಂದು ಉದಾಹರಣೆ

[1ನೇ ಪುಟದಿಂದ]

ಮಂತ್ರಿಗಳು ಸೋವಿಯೆತ್ ರಾಯಭಾರಿಗಳನ್ನು ವಿಚಾರಿಸಿದಾಗ ಅವರು ಇದನ್ನು ಪೂರ್ಣವಾಗಿ ನಿರಾಕರಿಸಿದು ಜ್ಯೋತಿಬಸು ರವರು ಕೇಂದ್ರ ಸರ್ಕಾರಕ್ಕೆ ಈ ನಿರಾಕರಣೆಗೆ ತಿಳಿಸಿ ಕೇಳಿದ್ದ ಸ್ಪಷ್ಟೀಕರಣಕ್ಕೆ ಇನ್ನೂ ಉತ್ತರ ಬಂದಿಲ್ಲ.

ಕೇಂದ್ರ ಸರ್ಕಾರದ ನಿಲುವನ್ನು ಸಮರ್ಥಿಸಿಕೊಳ್ಳುತ್ತಾ, ಅಕ್ಟೋಬರ್ 2 ರಂದು ವಸಂತ ಸಾಠೆಯವರು ನೀಡಿದ ಹೇಳಿಕೆಯಲ್ಲಿ ಎತ್ತಿದ ಅಂಶಗಳೆಂದರೆ. 1. ವಿದೇಶಗಳಿಂದ ಸಿಗುವ ನೆರವನ್ನು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಕಾರ್ಯಗತಗೊಳಿಸಲು ನೇರವಾಗಿ ರಾಜ್ಯ ಸರ್ಕಾರಗಳಿಗೆ ನೀಡಿದರೆ 'ವಿಚ್ಛಿದ್ರಕಾರಿ' ಶಕ್ತಿಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. 2. ಪಶ್ಚಿಮಬಂಗಾಳಕ್ಕೆ ಈ ಸಾಲ ಒದಗಿಸಿದರೆ, ಅದೊಂದು ಅಪವಾದವಾಗಿ ಉಳಿದ ರಾಜ್ಯಗಳ ಇಂತಹ ಸೌಲಭ್ಯ ಕೇಳಲಾರಂಭಿಸುತ್ತವೆ.

ಇದಕ್ಕೆ ಉತ್ತರವಾಗಿ ಜ್ಯೋತಿ ಬಸು ರವರು ಒಂದು ಹೇಳಿಕೆ ನೀಡಿ 1985 ರಲ್ಲಿ ಕೇಂದ್ರ ಸರ್ಕಾರ ಈ ಯೋಜನೆಗೆ ಒಪ್ಪಿಗೆ ನೀಡುವಾಗ ಈ ಎಲ್ಲಾ ಅಂಶಗಳನ್ನು ಏಕೆ ಗಮನಿಸಲಿಲ್ಲ ಎಂದು ತೀಕ್ಷ್ಣವಾಗಿ ಪ್ರಶ್ನಿಸುತ್ತಾ ಸಾಠೆಯವರ ಭಯ ಆಧಾರಹೀನ. ಏಕೆಂದರೆ ಯಾವ ರಾಜ್ಯ ಸರ್ಕಾರವೂ ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಈ ರೀತಿ ಸಾಲ ಒಪ್ಪಂದ ಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂಬ ಸಂಗತಿಯತ್ತ ಗಮನಸೆಳೆದಿದ್ದಾರೆ. ಅಲ್ಲದೆ ಈಗಾಗಲೇ 1986ರಲ್ಲಿ ಉತ್ತರಪ್ರದೇಶದ ಹಾಗೂ ಮಹಾರಾಷ್ಟ್ರದ ವಿದ್ಯುತ್ ಯೋಜನೆಗಳಿಗೆ ವಿದೇಶೀ ನೆರವು ಕೊಡಿಸಲಾಗಿದೆ ಎಂಬುದನ್ನು ಅವರು ಜ್ಞಾಪಿಸಿಕೊಟ್ಟಿದ್ದಾರೆ.

ಏಪ್ರಿಲ್ 1988ರಲ್ಲಿ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಪತ್ರಬರೆದು ಮೂರು ತಿಂಗಳೊಳಗೆ ವಿದೇಶೀ ಸಾಲವನ್ನು ರಾಜ್ಯ ಸರ್ಕಾರಕ್ಕೆ ಒದಗಿಸದಿದ್ದರೆ, ರಾಜ್ಯ ಸರ್ಕಾರ ತನ್ನ ಸಂಪನ್ಮೂಲಗಳಿಂದಲೇ ಆರಂಭಿಸುವುದೆಂದು ತಿಳಿಸಿದ್ದರು.

ಮೂರು ತಿಂಗಳೊಳಗೆ ಪ್ರಧಾನಮಂತ್ರಿಗಳಿಂದ ಏನೂ ಉತ್ತರ ಬರದಿದ್ದಾಗ ರಾಜ್ಯ ಸರ್ಕಾರ ತಾನೇ ಈ ಯೋಜನೆಗೆ ಸಂಪನ್ಮೂಲಗಳನ್ನು ಸಂಗ್ರಹಿಸಿ ಯೋಜನೆ ಆರಂಭಿಸಲು ನಿರ್ಧರಿಸಿತು. ತೆರಿಗೆಗಳ ಹಾಗೂ ಸಣ್ಣ ಉಳಿತಾಯಗಳ ಸಂಗ್ರಹಣೆಯಲ್ಲಿ ತೀವ್ರ ಸುಧಾರಣೆ ಕಂಡು ಬರುತ್ತಿದ್ದು ಅದರ ಸಂಪನ್ಮೂಲಗಳನ್ನು, ಜತೆಗೆ ಜನಸಾಮಾನ್ಯರಿಂದ ಹಣ ಸಂಗ್ರಹಿಸಿ ಈ ಯೋಜನೆಯನ್ನು ಕೇಂದ್ರ ಸರ್ಕಾರದ ನೆರವು, ಸಾಲವಿಲ್ಲದೇ ಈಗ ಕಾರ್ಯಗತಗೊಳಿಸಿ ಕೇಂದ್ರ ಸರ್ಕಾರಕ್ಕೆ ತಕ್ಕ ಉತ್ತರ ನೀಡಲಿದೆ ಎಂದು ಜ್ಯೋತಿಬಸು ಘೋಷಿಸಿದರು.

ಸೋಲ್ ಒಲಂಪಿಕ್ಸ್‌ನಲ್ಲಿ ಸಮಾಜವಾದಿ ಸುಗ್ಗಿ

[12ನೇ ಪುಟದಿಂದ]

'ಸೋವಿಯೆತ್ ಜನತೆಯಲ್ಲಿ ಕ್ರೀಡೆಗಳನ್ನು ಆಕರ್ಷಕ ಮಾಡಿ, ಪಾಲಿಸಿಪೋಷಿಸುವ, ಒಮ್ಮೆಗೆ ಹೂ ಚಿಮ್ಮುವ, ನಂದನವನವನ್ನಾಗಿಸುವ ವ್ಯವಸ್ಥೆ ಇದೆ. ಆದರೆ ಸಾಮರ್ಥ್ಯವಿಲ್ಲದೆ, ಅವಶ್ಯಕ ಅನುಕೂಲಗಳಿಲ್ಲದೆ ಕೇವಲ ಕ್ರೀಡಾ ವ್ಯವಸ್ಥೆಯಿಂದಲೇ ಸೂಪರ್ ಸ್ಟಾರ್‌ಗಳನ್ನು ಉತ್ಪಾದಿಸಲು ಸಾಧ್ಯವಿಲ್ಲ.

"ಸ್ಪಾರ್ಟಾಕಿಯಾಡ್‌ಗಳು"

ಪುರಾತನ ಗ್ರೀಸ್ ಕ್ರಾಂತಿಕಾರಿ ಸ್ಪಾರ್ಟಕಸ್‌ನ ಹೆಸರು ಕ್ರಾಂತಿಕಾರಿಗಳೆಲ್ಲರ ಹೃದಯದಲ್ಲಿ ಸದಾ ಹಸಿರು. ಈ ಅಪ್ರತಿಮ ಕ್ರಾಂತಿಕಾರಿಯ ಹೆಸರಿನಲ್ಲಿ ಇಡೀ ಸೋವಿಯೆತ್ ಜರ್ಮನ್ ಜನತೆಯೇ ಭಾಗವಹಿಸುತ್ತಿದೆಯೇನೊ ಎಂಬ ಭಾವನೆ ಹುಟ್ಟಿಸುವ ಕ್ರೀಡಾ ಉತ್ಸವಗಳನ್ನು ಆರಂಭಿಸಿದ್ದಾರೆ. 27ಕೋಟಿ ಜನರ ಸೋವಿಯೆತ್ ದೇಶದಲ್ಲಿ ಏಳುವರೆ ಕೋಟಿ ಜನರು ಭಾಗವಹಿಸುವ ಕ್ರೀಡೋತ್ಸವಗಳವು. 1965ರಲ್ಲಿ ಪೂರ್ವ ಜರ್ಮನಿಯಲ್ಲಿಯೂ ಆರಂಭಿಸಲಾದ ಈ ಸ್ಪಾರ್ಟಾಕಿಯಾಡ್‌ನಲ್ಲಿ 19 ಲಕ್ಷಕ್ಕೂ ಹೆಚ್ಚು ಜನ ಸ್ಪರ್ಧಿಸಿದ್ದರು.

ಜನ ಸಾಮಾನ್ಯರಲ್ಲಿ ಪ್ರತಿಯೊಬ್ಬರನ್ನು ಸೆಳೆದು ಹುಡುಕಿ, ಹೆಕ್ಕಿ ತರಬೇತಿ ನೀಡುವ ಈ ಸಾಮೂಹಿಕ ವ್ಯವಸ್ಥೆ, ನಿಜವಾದ, ಪ್ರಜಾಸತ್ತೆಯೊಂದರ ಜೀವಂತ ನಿದರ್ಶನ ಇದೇ ಸಮಾಜವಾದಿ ದೇಶಗಳ ಕ್ರೀಡಾ ಹಿರಿಮೆಯ ಆಧಾರ.

ಇದು ಸಾಧ್ಯವಾಗುವಂತೆ ಮಾಡಲು ಎಲ್ಲಾ ಶಾಲೆಗಳಲ್ಲಿ, ಎಲ್ಲಾ ಕಾರ್ಖಾನೆ ಹಾಗೂ ಕೃಷಿ ಸಹಕಾರ ಸಂಘಗಳಲ್ಲಿರುವ ಕ್ರೀಡಾ ಕ್ಲಬ್‌ಗಳು, 2746 ಕ್ಕೂ ಹೆಚ್ಚು ಸ್ಟೇಡಿಯಂಗಳು, 5190ಕ್ಕೂ ಹೆಚ್ಚು ಸ್ವಿಮ್ಮಿಂಗ್‌ಪೂಲ್‌ಗಳು, 6360ಕ್ಕೂ ಹೆಚ್ಚು ಶೂಟಿಂಗ್ ರೇಂಜ್‌ಗಳು 830ಕ್ಕೂ ಹೆಚ್ಚು ಈಜು ಕೊಳಗಳು, 11,742ಕ್ಕೂ ಹೆಚ್ಚು ಜಿಮ್ನಾಷಿಯಂಗಳು, 2,60,000ಕ್ಕೂ ಹೆಚ್ಚು ಆಟದ ಮೈದಾನಗಳು, ಕೋರ್ಟ್‌ಗಳು, ಈ ಅನುಕೂಲ ಪ್ರಜಾಸತ್ತಾತ್ಮಕ ಸರ್ಕಾರವೊಂದರ ಪ್ರಜಾಸತ್ತಾತ್ಮಕ ಕ್ರಮ ಇದೇ ಕ್ರೀಡಾ ಹಿರಿಮೆಯ ಗ್ರೀನ್ ರೂಂ.

ಇದಕ್ಕೆ ಹಿನ್ನೆಲೆಯ ಸಂಗೀತವಾಗಿ ಕ್ರೀಡಾ ವಿಜ್ಞಾನ, ಕ್ರೀಡಾ ವೈದ್ಯಕೀಯ ಮೊದಲಾದ ಉಚ್ಚ ತಂತ್ರಜ್ಞಾನ- ವಿಜ್ಞಾನದ ಮಿತಿಯ ದುರುಪಯೋಗಕ್ಕೆ ಪ್ರತಿಯಾಗಿ ಜನಪರ ಕ್ರೀಡೆಯಲ್ಲಿ ಏಣೆಯಿರದ ದುಡಿತ.

ಇವುಗಳೆಲ್ಲದರ ಸಂಗಮವೇ-ಒಟ್ಟಿನಲ್ಲಿ ಸಮಾಜವಾದಿ ಪ್ರಜಾಸತ್ತೆಯ ಉತ್ಕೃಷ್ಟ ರೂಪವೇ ಸಮಾಜವಾದಿ ಒಲಿಂಪಿಕ್ಸ್ ಜ್ಯೋತಿಯ ಪ್ರಕಾಶಮಾನ ಬೆಳಕಿಗೆ ಸುರಿಸುವ ಉಜ್ವಲ ತೈಲ.

ಕಾಂಗ್ರೆಸ್-ಟಿ.ಎನ್.ವಿ. ಒಪ್ಪಂದ ಬಗ್ಗೆ ಪ್ರಧಾನಮಂತ್ರಿಗಳಿಗೆ ನೃಪೇನ್ ಚಕ್ರವರ್ತಿ ಪತ್ರ

ಮಿಜೋರಾಂನ ರಾಜಧಾನಿ ಐಜ್ವಾಲ್‌ನ ಪತ್ರಿಕೆಯೊಂದರಲ್ಲಿ ಪ್ರಕಟವಾದ ಮೂರು ಪತ್ರಗಳು ಎಡರಂಗ ಸರ್ಕಾರವನ್ನು ಉರುಳಿಸಲು ಕಾಂಗ್ರೆಸ್-ಟಿ.ಎನ್.ವಿ. ಒಪ್ಪಂದವನ್ನು ಪೂರ್ಣವಾಗಿ ಬಯಲು ಮಾಡಿದೆ ಎಂದು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಹಾಗೂ ತ್ರಿಪುರಾದ ಮಾಜಿ ಮುಖ್ಯಮಂತ್ರಿ ಕಾಂ. ನೃಪೇನ್ ಚಕ್ರವರ್ತಿ ಪ್ರಧಾನ ಮಂತ್ರಿಗಳು ಬರೆದ ಪತ್ರದಲ್ಲಿ ತಿಳಿಸುತ್ತಾ ಅವರು ಈ ಬಗ್ಗೆ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಕೇಂದ್ರ ಸರ್ಕಾರ ಅಥವಾ ಸಂಬಂಧಪಟ್ಟ ವ್ಯಕ್ತಿಗಳು ಈ ಬಗ್ಗೆ ಇನ್ನೂ ಮೌನವಾಗಿರುವತ್ತಲೂ ಗಮನ ಸೆಳೆದಿದ್ದಾರೆ.

ಸರ್ವಾಧಿಕಾರಿಗೆ ಚಿಲೀ ಜನತೆಯ ನಕಾರ

ತಾನು ಇನ್ನೂ 8 ವರ್ಷಗಳಕಾಲ ಅಧಿಕಾರದಲ್ಲಿ ಮುಂದುವರಿಯಬೇಕೆ, ಬೇಡವೇ ಎಂದು ಜನಾಭಿಪ್ರಾಯ ಸಂಗ್ರಹಿಸಿ, ತನ್ನ ಮಿಲಿಟರಿ ದಬ್ಬಾಳಿಕೆಗೆ ಪ್ರಜಾಪ್ರಭುತ್ವದ ಮೊಹರು ಹಾಕಿಸಿಕೊಂಡು, ಸಾಮ್ರಾಜ್ಯಶಾಹಿಗಳಿಗೂ ತಕ್ಕ ನೆರವು ಮುಂದುವರಿಸಲು ಅವಕಾಶ ಕಲ್ಪಿಸಿಕೊಳ್ಳಬಹುದೆಂಬ ಚಿಲಿಯ ಮಿಲಿಟರಿ ಸರ್ವಾಧಿಕಾರಿ ಪಿನೋಚೆಯ ಯೋಜನೆಗಳು ತಲೆಕೆಳಗಾದಂತಿವೆ.

ಅಕ್ಟೋಬರ್ 5 ರ ಜನಾಭಿಪ್ರಾಯ ಸಂಗ್ರಹಣೆ ಕೇವಲ ಒಂದು ನಾಟಕದ ಮುಕ್ತಾಯವಾಗಿಸುವ ಪಿನೋಚೆ ಕನಸ್ಸುಗಳನ್ನು ನುಚ್ಚುನೂರಿಸಿ ಚಿಲಿಯ 74 ಲಕ್ಷ ಮತದಾರರಲ್ಲಿ 54.68 ಶೇಕಡಾ ಮತದಾರರು "ಬೇಡ" ಎಂದು ಹೇಳಿ ಪಿನೋಚೆಯ ಕಮ್ಯುನಿಸ್ಟ್-ವಿರೋಧಿ ದಬ್ಬಾಳಿಕೆಗೆ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಮಿಲಿಟರಿ ಸರ್ಕಾರ ಜನಾಭಿಪ್ರಾಯ ಸಂಗ್ರಹಣೆ ಸಮೀಪಿಸುತ್ತಿದ್ದಂತೆ ತೀವ್ರ ದಬ್ಬಾಳಿಕೆಯ ಕ್ರಮಗಳಿಲ್ಲದಿದ್ದರೆ ಅತ್ಯಂತ ಬಹುಮತದಿಂದ ಜನ ಪಿನೋಚೆಯನ್ನು ರಾಜೀನಾಮೆ ನೀಡುವಂತೆ ಒತ್ತಾಯಿಸುತ್ತಿದ್ದರೆಂದು ಅಂದಾಜು ಮಾಡಲಾಗಿದೆ.

ಆದರೂ, ಮೊದಲೇ ನಿರೀಕ್ಷಿಸಿದಂತೆ ಪಿನೋಚೆ ತಾನು 1990ರವರೆಗೆ ಅಧಿಕಾರ ತ್ಯಜಿಸುವುದಿಲ್ಲ ಎಂದು ಸಾರಿದ್ದಾರೆ. ಮಿಲಿಟರಿ ಆಳ್ವಿಕೆ ನಿರ್ಮಿಸಿದ ಸಂವಿಧಾನ ಇದಕ್ಕೆ ಅವಕಾಶ ನೀಡುತ್ತದಂತೆ. ಅಭಿಪ್ರಾಯ ಸಂಗ್ರಹಣೆಯ ಫಲಿತಾಂಶ ಪ್ರಕಟವಾದ ಮೇಲೆ ಚಿಲಿಯ ಮಂತ್ರಿ ಮಂಡಳದ ಸದಸ್ಯರು ನೀಡಿದ ರಾಜೀನಾಮೆಗಳನ್ನು ಪಿನೋಚೆ ಹಿಂತಿರುಗಿಸಿದ್ದಾರೆಂದು ವರದಿಯಾಗಿದೆ. ಅಂದರೆ ಜನಾಭಿಪ್ರಾಯ ಸಂಗ್ರಹಣೆಯೊಂದಿಗೆ ಚಿಲಿಯಲ್ಲಿ ಪ್ರಜಾಪ್ರಭುತ್ವ ಮತ್ತೆ ಆರಂಭವಾಲಿದೆ ಎಂದು ಯಾರಾದರೂ ಭಾವಿಸಿದ್ದರೆ ಅದನ್ನು ಮರೆತು ಬಿಡಿ ಎಂದು ಪಿನೋಚೆ ಹೇಳಿದಂತಾಗಿದೆ.

ಜನಾಭಿಪ್ರಾಯ ಸಂಗ್ರಹಣೆಯಲ್ಲಿ ಅಪಾರ ಸಂಖ್ಯೆಯಲ್ಲಿ "ಬೇಡ" ಎಂದು ಹೇಳುವಂತೆ ಜನತೆಯ ನಡುವೆ ತೀವ್ರ ಪ್ರಚಾರ-ಪ್ರಕ್ಷೋಭೆಯನ್ನು ಇತರ ಎಡಶಕ್ತಿಗಳೊಂದಿಗೆ ನಡೆಸಿದ ಚಿಲೀ ಕಮ್ಯುನಿಸ್ಟ್ ಪಕ್ಷ ಅಭಿಪ್ರಾಯ ಸಂಗ್ರಹಣೆಯ ಮೊದಲೇ ಹೇಳಿದಂತೆ ಅಂತಿಮವಾಗಿ ಜನಗಳು ರಸ್ತೆಗಳಿದು, ಈ ಜನಾಭಿಪ್ರಾಯ ಸಂಗ್ರಹಣೆ ವಿಜಯೀ ರಾಷ್ಟ್ರೀಯ ದಂಗೆಯತ್ತ ಸಾಗುವಂತೆ ಮಾಡುವ ಕಿಡಿಯಾಗುವಂತೆ ಮಾಡುತ್ತಾರೆ ಎಂಬ ಮಾತು ನಿಜವಾಗುವಂತೆ ಕಾಣುತ್ತಿದೆ. ಫಲಿತಾಂಶ ಪ್ರಕಟವಾದಂದಿನಿಂದ ಚಿಲಿಯ ಬೀದಿಗಳಲ್ಲಿ ಮತ್ತೊಮ್ಮೆ ಮಿಲಿಟರಿ ದಮನಕ್ಕೆ ತೀವ್ರ ಪ್ರತಿಭಟನೆ ವ್ಯಕ್ತಗೊಳ್ಳುತ್ತಿದೆ.



ಹತ್ತು ತಿಂಗಳ ಹಿಂದೆ ಆರಂಭವಾಗಿ ಈಗಲೂ ಮುಂದುವರಿಯುತ್ತಿರುವ ಪ್ಯಾಲೆಸ್ತೀನ್ ದಂಗೆ ರಾಜಕೀಯ ವಲಯಗಳಲ್ಲಿ ಈಗ 'ಕಲ್ಲುಯುದ್ಧ' ವೆಂದು ಹೆಸರಾಗಿದೆ. ಪ್ಯಾಲೆಸ್ತೀನ್ ಯುವಕರ ಕಲ್ಲುಗಳಿಂದ ತಪ್ಪಿಸಿಕೊಳ್ಳಲು ಇಸ್ರೇಲಿ ಸೈನಿಕರು ಇಲ್ಲಿ ಓಡುತ್ತಿದ್ದಾರೆ.

ಇಸ್ರೇಲಿನ ಹತಾಶ ಕ್ರಮಗಳು

ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ಪ್ಯಾಲೆಸ್ತೀನಿಯನ್ನರ ದಂಗೆ ಆರಂಭವಾಗಿ ಅಕ್ಟೋಬರ್ 9ಕ್ಕೆ ಹತ್ತು ತಿಂಗಳು ಪೂರ್ಣಗೊಳ್ಳುತ್ತಿದ್ದಂತೆ ಕಳೆದ ಕೆಲವು ವಾರಗಳಲ್ಲಿ ಅದನ್ನು ದಮನ ಮಾಡಲು ಇಸ್ರೇಲಿ ಅಧಿಕಾರಿಗಳು ಎರಡು ಹೊಸ ನಿರ್ಣಯಗಳನ್ನು ಕೈಗೊಂಡಿದ್ದಾರೆ. ಒಂದು, ಪ್ಯಾಲೆಸ್ತೈನ್‌ನ ಜನತಾ ಸಮಿತಿಗಳನ್ನೆಲ್ಲಾ ನಿಷೇಧಿಸುವುದು, ಅರ್ಥಾತ್ ಇನ್ನಷ್ಟು ತೀವ್ರ ದಮನ ಎರಡನೆಯದು, ಇಸ್ರೇಲಿ ಆಕ್ರಮಿತ ಪ್ರದೇಶಗಳಿಂದ ಗಡೀಪಾರು ಮಾಡಲಿರುವ ಅರಬ್ ಸಕ್ರಿಯ ಕಾರ್ಯಕರ್ತರ ದೊಡ್ಡ ಪಟ್ಟಿಗಳ ಪ್ರಕಟಣೆ.

ಹಿಂದೆಂದೂ ನರೀವಾರು ಕ್ರಮಗಳನ್ನು ಇಷ್ಟೊಂದು ವ್ಯಾಪಕವಾಗಿ ಬಳಸಿರಲಿಲ್ಲ.

ಈ ಬೆಳವಣಿಗೆಗಳು ಅತ್ಯಂತ ವಿಶಿಷ್ಟ ಎಂದು ಪತ್ರಿಕಾಕರ್ತರು, ವಿಶ್ವಸಂಸ್ಥೆಯ ಭದ್ರತಾ ಸಮಿತಿ ಮತ್ತು ಯೂರೋಪಿಯನ್ ಆರ್ಥಿಕ ಸಮುದಾಯ ಕೂಡಾ ಭಾವಿಸುತ್ತಿವೆ. ಈ ಕ್ರಮಗಳ ಬಗ್ಗೆ ಎಲ್ಲೆಡೆ ಖಂಡನೆ ವ್ಯಕ್ತಗೊಂಡಿದೆ.

ಕಳೆದ ಒಂಭತ್ತು ತಿಂಗಳಲ್ಲಿ ಸುಮಾರು 500 ಪ್ಯಾಲೆಸ್ತೀನಿಯನ್ನರು ತಾಯ್ನಾಡಿಗಾಗಿ ಹೋರಾಟದಲ್ಲಿ ಇಸ್ರೇಲಿ ದಬ್ಬಾಳಿಕೆಗೆ ಆಹುತಿಯಾಗಿದ್ದಾರೆ.

ಅಮೇರಿಕಾದ ದೈತ್ಯ ಮಿಲಿಟರಿ ಬಜೆಟ್

1989ರ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಮಿಲಿಟರಿ ಬಜೆಟ್ 299.6 ಶತಕೋಟಿ ಡಾಲರುಗಳು. ಇದರಲ್ಲಿ 9.01 ಶತಕೋಟಿ ಡಾಲರುಗಳನ್ನು ಕೇವಲ ಬೇರೆ ದೇಶಗಳಲ್ಲಿ ಮಿಲಿಟರಿ ನೆಲೆ ಸ್ಥಾಪಿಸುವುದಕ್ಕೆಂದೇ ಮೀಸಲಿಡಲಾಗಿದೆ. ಇದರಲ್ಲಿ 6.52 ಕೋಟಿ ಡಾಲರುಗಳನ್ನು ದಕ್ಷಿಣ ಕೋರಿಯಾದ ಮಿಲಿಟರಿ ನೆಲೆಗಳಿಗೆ, 5 ಕೋಟಿ ಡಾಲರು ಫಿಲಿಪ್ಪೈನ್ಸ್ ಹಾಗೂ 2.57 ಕೋಟಿ ಡಾಲರು ಜಪಾನಿನ ನೆಲೆಗಳಿಗಾಗಿ ಇಡಲಾಗಿದೆ.

ವಿಶ್ವದಲ್ಲಿ ಈಗ ಅಮೆರಿಕಾದ 1600 ಮಿಲಿಟರಿ ನೆಲೆಗಳು 30 ದೇಶಗಳಲ್ಲಿವೆ. ಒಂದು ಶಕ್ತಿಶಾಲೀ ಪಡೆ ಹಿಂದೂ ಮಹಾಸಾಗರದಲ್ಲಿಯೂ ಇದೆ.

ಇಥಿಯೋಪಿಯಾ ಜನತಾ ಗಣರಾಜ್ಯಕ್ಕೆ ಒಂದು ವರ್ಷ

ಸೆಪ್ಟಂಬರ್ 12ರಂದು ಇಥಿಯೋಪಿಯಾ ಜನತಾ ಗಣರಾಜ್ಯ ತನ್ನ ಮೊದಲ ವಾರ್ಷಿಕೋತ್ಸವವನ್ನು ಆಚರಿಸಿತು. ಇದೇ ದಿನ ಅದು ತನ್ನ ಕ್ರಾಂತಿಯ 14 ನೇ ವಾರ್ಷಿಕೋತ್ಸವವನ್ನು ಕೂಡಾ ಆಚರಿಸಿತು.

1974ರ ಸೆಪ್ಟಂಬರ್ 12ರಂದು ಚಕ್ರಾಧಿಪತ್ಯದ ಊಳಿಗಮಾನ್ಯ ಆಳ್ವಿಕೆ ಕೊನೆಗೊಂಡು ಆಧುನಿಕ ಇಥಿಯೋಪಿಯಾದ ಸ್ಥಾಪನೆಯಾಯಿತು. ಕ್ರಾಂತಿಯಾದತಕ್ಷಣವೇ ಅದರ ಕ್ರೋಢೀಕರಣದ ಪ್ರಯತ್ನ ಸಾಮ್ರಾಜ್ಯಶಾಹಿಗಳ ವಿವಿಧ ಕಿರುಕುಳಗಳನ್ನು ಎದುರಿಸಿಯೂ ಮುಂದುವರೆಯಿತು. 1974ರಲ್ಲಿ ದೇಶದ ಶೇ. 85 ಜನತೆ ಭೂಹೀನ ರೈತರಾಗಿದ್ದರು. ಶೇ. 93 ನಿರಕ್ಷರಿಗಳು. ಶೇ. 85 ಜನಕ್ಕೆ ಯಾವ ವೈದ್ಯಕೀಯ ಸೌಲಭ್ಯವೂ ಇರಲಿಲ್ಲ. ರೈತರು ಬೆಳೆದ ಉತ್ಪನ್ನದಲ್ಲಿ ಶೇ. 75 ಭೂ ಮಾಲಿಕರ ಕಾನೂನು ಬದ್ಧ ಪಾಲಾಗಿತ್ತು. ಈಗ ಇದೆಲ್ಲಾ ಬದಲಾಗಿದೆ. 'ಉಳುವವನೇ ಹೊಲದೊಡೆಯ' ಎಂಬ ಘೋಷಣೆಯನ್ನು ತಕ್ಷಣ ಜ್ಯಾರಿಗೊಳಿಸಲಾಯಿತು. ಎಪ್ಪತ್ತು ಲಕ್ಷ ರೈತರ 20 ಸಾವಿರ ಘಟಕಗಳು ಈಗ ಅವರ ರಾಜಕೀಯ ಪಾಲ್ಗೊಳ್ಳುವಿಕೆಯ ಅಂಗಗಳು ಕೂಡಾ. ಎಂಟೇ ವರ್ಷಗಳಲ್ಲಿ ಸಾಕ್ಷರತೆ ಶೇ. ಏಳರಿಂದ ಶೇ. ಎಪ್ಪತ್ತಕ್ಕೇರಿತು.

ಈ ಪ್ರಕ್ರಿಯೆಯ ಭಾಗವಾಗಿ 1979ರಲ್ಲಿ ಇಥಿಯೋಪಿಯಾ ಕಾರ್ಮಿಕ ಪಕ್ಷ ಕ್ರಾಂತಿಯ ನೇತಾರನಾಗಿ ಮೂಡಿ ಬಂತು. ಇದು ಸ್ಥಾಪಿಸಿದ ಸಂವಿಧಾನ ಕರಡು ರೂಪಿಸುವ ಸಮಿತಿ ವಿವಿಧ ಜನವಿಭಾಗಗಳಲ್ಲಿ ಎರಡು ವರ್ಷಗಳ ಚರ್ಚೆಯ ನಂತರ ರೂಪಿಸಿದ ಕರಡು ಸಂವಿಧಾನವನ್ನು 1987 ಫೆಬ್ರುವರಿಯಲ್ಲಿ ಶೇ. 87 ಜನತೆ ಅನುಮೋದಿಸಿದರು. ಜೂನ್ 1987ರಲ್ಲಿ ಚುನಾವಣೆ ನಡೆದು ಸೆಪ್ಟಂಬರ್ 1987ರಲ್ಲಿ ಇಥಿಯೋಪಿಯಾ ಜನತಾ ಗಣರಾಜ್ಯ ಸ್ಥಾಪನೆಯಾಯಿತು.

ವಿಯೆಟ್ನಾಂ ಯುದ್ಧದ ಅಮೆರಿಕನ್ ದುರಂತ

ಅಮೇರಿಕಾದ ಅಡ್ಮಿರಲ್ ಎಲ್ಮೊ ಝುಮ್‌ವಾಲ್ಟ್‌ರ ಕುಟುಂಬದ ದುರಂತ ವಿಯೆಟ್ನಾಂ ಯುದ್ಧದ ಒಂದು ಭಯಾನಕ ವಿಪರ್ಯಾಸ ಎಂದು ಅಮೆರಿಕನ್ ಪತ್ರಿಕೆಗಳು ಇತ್ತೀಚೆಗೆ ಪ್ರಕಟಿಸಿವೆ. ಝುಮ್‌ವಾಲ್ಟ್ ವಿಯೆಟ್ನಾಂನಲ್ಲಿ ಅಮೆರಿಕಾ ನಾವಿಕ ಪಡೆಗಳ ಮುಖ್ಯ ಸೇನಾಧಿಪತಿಯಾಗಿದ್ದರು. ಮೆಕಾಂಗ್ ಮುಖಜ ಪ್ರದೇಶದಲ್ಲಿ ಏಜೆಂಟ್ ಓರೆಂಜ್ ಎಂಬ ಭಯಾನಕ ರಾಸಾಯನಿಕವನ್ನು ವಿಯೆಟ್ನಾಂ ನಾಗರಿಕರ ಮೇಲೆ ಪ್ರಯೋಗಿಸಲು ಅಜ್ಞೆ ನೀಡಿದವರು ಇದೇ ಅಡ್ಮಿರಲ್. ಇವರ ಮಗ ಇತ್ತೀಚೆಗೆ ಈ ರಾಸಾಯನಿಕದ ಪರಿಣಾಮವಾಗಿ ಉಂಟಾದ ಕ್ಯಾನ್ಸರ್ ರೋಗದಿಂದ ಮರಣ ಹೊಂದಿದರು. ಅವರ ವಯಸ್ಸು 42 ವರ್ಷ. ಅಡ್ಮಿರಲ್ ಝುಮ್‌ವಾಲ್ಟ್‌ನ ಆದೇಶವನ್ನು ಜ್ಯಾರಿ ಮಾಡಿದವರಲ್ಲಿ ಇವರೂ ಒಬ್ಬರಾಗಿದ್ದಾರಂತೆ.

ಪಶ್ಚಿಮ ಬಂಗಾಳ ಬಕ್ರೇಶ್ವರ ಥರ್ಮಲ್ ಯೋಜನೆಗೆ ಅಡ್ಡಿ

ಕೇಂದ್ರ ಸರ್ಕಾರದ ಪಕ್ಷಪಾತ ನಿಲುವಿಗೆ ಇನ್ನೊಂದು ಉದಾಹರಣೆ

ಕಿಶೋರ ವಾಹಿನಿಯ ಪುಟ್ಟ ಮಕ್ಕಳ ವಾದ್ಯವೃಂದದ ನಿನಾದ ಹಾಗೂ ಅಗಾಧ ಜನಸ್ತೋಮದ ಘೋಷಣೆಗಳ ನಡುವೆ ಇದೇ ಸಪ್ಟೆಂಬರ್ 28 ರಂದು ಪಶ್ಚಿಮ ಬಂಗಾಳದ ಮುಥಾಬೆರಿನಾ ಎಂಬಲ್ಲಿ ಬಕ್ರೇಶ್ವರ ತಾಪವಿದ್ಯುತ್ ಯೋಜನೆಗೆ ಮುಖ್ಯಮಂತ್ರಿ ಜ್ಯೋತಿಬಸು ಅಡಿಗಲ್ಲು ಹಾಕಿದರು.

ಆ ದಿನ ನಡೆದ ಸಾರ್ವಜನಿಕ ಸಭೆಯಲ್ಲಿ ರಾಜ್ಯದ ಮೂಲೆಮೂಲೆಯಿಂದ ಜನ ಬಂದು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು. ಕೇಂದ್ರದ ವಿದ್ಯುಚ್ಛಕ್ತಿ ಮಂತ್ರಿ ವಸಂತಸಾಠೆಯವರ ಮೂಲಕ ಪಶ್ಚಿಮಬಂಗಾಳದ ವಿರುದ್ಧ ಕೇಂದ್ರದ ಮಲತಾಯಿ ಧೋರಣೆಯ ಇನ್ನೊಂದು ಉದಾಹರಣೆ ಬಯಲಿಗೆ ಬಂದ ಹಿನ್ನೆಲೆಯಲ್ಲಿ ಈ ಸಮಾರಂಭ ಮಹತ್ವದ್ದಾಗಿತ್ತು.

ಎಡರಂಗದ ಹನ್ನೊಂದು ವರ್ಷಗಳ ಆಳ್ವಿಕೆಯಲ್ಲಿ 1330 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದನೆ ಹೆಚ್ಚಿದರೂ ರಾಜ್ಯ ಮತ್ತೆ 800 ಮೆಗಾವಾಟ್‌ನಷ್ಟು ಕೊರತೆ ಎದುರಿಸಬೇಕಾಗುವುದು ಎಂಬುದನ್ನು ಯೋಜನಾ ಆಯೋಗವೇ ಒಪ್ಪಿಕೊಂಡಿತು. ಆದ್ದರಿಂದ ಇದನ್ನು ಎದುರಿಸಲು ರಾಜ್ಯ ಸರ್ಕಾರ 1983ರಲ್ಲಿ ಬಕ್ರೇಶ್ವರ ವಿದ್ಯುತ್ ಯೋಜನೆಯ ಪ್ರಸ್ತಾಪವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು. ಈ ಪ್ರಸ್ತಾಪಕ್ಕೆ 1985ರಲ್ಲಿ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ ತಾಂತ್ರಿಕ ಅನುಮತಿ ದೊರೆತು ಯೋಜನಾ ಆಯೋಗ ಇದು ರಾಜ್ಯ ಸರ್ಕಾರದ ಯೋಜನೆ ಎಂದೂ ಅನುಮತಿ ನೀಡಿತು.

ಆದರೆ ಹಣಕಾಸಿನ ಸಮಸ್ಯೆಯತ್ತ ಕೊನೆಗೆ ಕೇಂದ್ರ ಸರ್ಕಾರ ತನಗೆ ನೇರವಾಗಿ ನೆರವು ನೀಡಲು ಸಾಧ್ಯವಿಲ್ಲವಾದರೂ 1000 ಕೋಟಿ ರೂ.ಗಳ ಈ ಯೋಜನೆಗೆ 510 ಕೋಟಿರೂ.ಗಳನ್ನು ರಾಜ್ಯ ಸರ್ಕಾರ ಕಲೆ ಹಾಕಿದರೆ ಉಳಿದ ನಾನೂರಾ ತೊಂಬತ್ತು ರೂ.ಗಳನ್ನು ವಿದೇಶೀ ನೆರವನ್ನು ಕೊಡಿಸಲು ಸಾಧ್ಯವೆಂದಿತು. ಈ ಪ್ರಕಾರ ಕೇಂದ್ರ ಸರ್ಕಾರ ಎರಡು ವಿದೇಶೀ ನೆರವುಗಳ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿತು. ರಾಜ್ಯ ಸರಕಾರ ಇವುಗಳನ್ನು ಪರಿಶೀಲಿಸಿ ಸೋವಿಯೆತ್-ಭಾರತ ಕನ್ಸೋರ್ಟಿಯಂನ ಯೋಜನೆಯನ್ನು ಶಿಫಾರಸು ಮಾಡಿತು. ಸೋವಿಯತ್ ಒಕ್ಕೂಟದಿಂದ 700 ಕೋಟಿರೂ.ಗಳ (ಅಂದರೆ 70 ಶೇಕಡಾ ಖರ್ಚು) ನೆರವು ನೀಡಲು ಸಾಧ್ಯ ಎಂದು ಸರ್ಕಾರ ರಾಜ್ಯ ಸರ್ಕಾರಕ್ಕೆ ಏಪ್ರಿಲ್ 1986ರಲ್ಲೇ ತಿಳಿಸಿದರೂ, ಈ ಬಗ್ಗೆ ಕೇಂದ್ರದ ನಿರ್ಣಯ ತಿಳಿಸುವಲ್ಲಿ ಅನಗತ್ಯ ವಿಳಂಬ ಕಂಡು ಬರಲಾರಂಭಿಸಿತು.

ಭಾರತ-ಸೋವಿಯೆತ್ ನೆರವು ಒಪ್ಪಂದಕ್ಕೆ 1987 ಅಕ್ಟೋಬರ 29 ರಂದು ಸಹಿಹಾಕುವ ಹೊತ್ತಿಗೆ ಬಂದ ಕೇಂದ್ರ ಮಂತ್ರಿಗಳ ಟೆಲೆಕ್ಸ್ ಸಂದೇಶ ಜನತೆಯನ್ನು ದಂಗು ಬಡಿಸಿತು. ಈ ಯೋಜನೆಯನ್ನು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ವಲಯಕ್ಕೆ ವರ್ಗಾಯಿಸಿದರೆ ಮಾತ್ರವೇ ಸೋವಿಯೆತ್ ನೆರವು ಸಾಧ್ಯ ಎಂದು ಸೋವಿಯೆತ್ ಸರಕಾರದ ಶರತ್ತು ಇದೆಯೆಂದು ಅದರಲ್ಲಿ ತಿಳಿಸಲಾಯಿತು. ಈ ಬಗ್ಗೆ ಮುಖ್ಯ

(10ನೇ ಪುಟಕ್ಕೆ)

ಕಾಂಗ್ರೆಸ್-ಟಿ.ಎನ್.ವಿ. ಒಪ್ಪಂದ ಬಯಲಿಗೆ ರಾಜೀವ್ ಗಾಂಧಿ ಉತ್ತರಿಸುವರೆ ?

ಈ ಪತ್ರಗಳನ್ನು ಕುರಿತಂತೆ 'ಐಕ್ಯರಂಗ' ಕಳೆದ ಸಂಚಿಕೆಯ ಮುಖಪುಟದಲ್ಲಿ ಪ್ರಕಟವಾದ "ರಾಜೀವ್ ಗಾಂಧಿ ಉತ್ತರಿಸುವರೇ" ಎಂಬ ವರದಿಯ ಮೊದಲ ಪ್ಯಾರಾ ತಪ್ಪಿನಿಂದ ಮುದ್ರಿತವಾಗಿರಲಿಲ್ಲ. ಅದು ಹೀಗಿತ್ತು—

ತ್ರಿಪುರಾದಲ್ಲಿ ಫೆಬ್ರುವರಿಯಲ್ಲಿ ನಡೆದ ಚುನಾವಣೆಗಳ ಬಗ್ಗೆ ಆಗಿನ ಎಡರಂಗ ಸರ್ಕಾರಕ್ಕಿಂತ ಎಷ್ಟೋ ಮೊದಲೇ ಟಿ. ಎನ್. ವಿ. ಪ್ರತ್ಯೇಕತಾವಾದಿಗಳಿಗೆ ಕಾಂಗ್ರೆಸ್ (ಐ) ತಿಳಿಸಿತ್ತೇ ? ಚುನಾವಣೆಗಳ ನಂತರ ಮಾತುಕತೆಯ ಬಗ್ಗೆ ಆಶ್ವಾಸನೆ ಪಡೆದ ಟಿ. ಎನ್. ವಿ. ಕೊಲೆಗಡುಕ ಗ್ಯಾಂಗ್‌ಗಳು ಕಾಂಗ್ರೆಸ್ (ಐ)ನ ಪರೋಕ್ಷ ಪ್ರೋತ್ಸಾಹದಿಂದಲೇ ಸಾಮೂಹಿಕ ಕೊಲೆ ನಡೆಸಿದರೇ ? ಆಗಸ್ಟ್‌ನಲ್ಲಿ ಟಿ. ಎನ್. ವಿ. ಯೊಂದಿಗೆ ನಡೆದ ಒಪ್ಪಂದದ ಮೊದಲಿನ ಗುಪ್ತ ಮಾತುಕತೆಗಳಿಗೆ 1987ರ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಹೂಡಿದ ಸಂಚಿನಲ್ಲೇ ಅಸ್ತಿಭಾರ ಹಾಕಲಾಯಿತೇ ?

ಮಿಜೋರಾಂನ ರಾಜಧಾನಿ ಐಜ್ವಾಲ್‌ನಿಂದ ಪ್ರಕಟವಾಗುವ ಪಾಕ್ಷಿಕ ಪತ್ರಿಕೆ 'ರೈಸೋಟೈಂಗ್'ನ ಆಗಸ್ಟ್ 22ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಈ ಎಲ್ಲಾ ಪ್ರಶ್ನೆಗಳಿಗೆ ಸಿಗುವ ಉತ್ತರ 'ಹೌದು' ಎಂದೇ.

ಕರಮ ರಾಜಕೀಯ ವರದಿ ಸಿದ್ಧ

(ಒಂದನೇ ಪುಟದಿಂದ)

ಜಾತ್ಯಾತೀತ ಪ್ರತಿಪಕ್ಷಗಳ ಐಕ್ಯತೆ-ತುರ್ತು ಅಗತ್ಯ

ಜಾತ್ಯಾತೀತ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಪ್ರಯತ್ನಗಳ ಬಗ್ಗೆ ಹೇಳುತ್ತಾ ಪತ್ರಿಕಾ ಹೇಳಿಕೆ, ತನ್ನ ಐಕ್ಯತೆ ಜನತೆಯ ಆಶೋತ್ತರಗಳನ್ನು ಈಡೇರಿಸಲು ತುರ್ತಾಗಿ ಬೇಕು ಎಂದು ಕೇಂದ್ರ ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿದೆ. ಇಂತಹ ಪ್ರಯತ್ನಗಳು ಯಶಸ್ವಿಯಾಗಬೇಕೆಂದರೆ ವಿಚ್ಛಿದ್ರಕಾರಿ ಮತ್ತು ಕೋಮುಶಕ್ತಿಗಳ ವಿರುದ್ಧ ಯಾವ ರಾಜಿಗೂ ಒಪ್ಪದ ನಿಲುಮೆ ತಳೆಯಬೇಕು ಮತ್ತು ಜನಸಾಮಾನ್ಯರ ಹಕ್ಕುಗಳ ರಕ್ಷಣೆಯ ಒಂದು ಕಾರ್ಯಕ್ರಮಕ್ಕೆ ಬದ್ಧರಾಗಬೇಕು ಎಂಬ ತನ್ನ ಅಭಿಪ್ರಾಯವನ್ನು ಕೇಂದ್ರ ಸಮಿತಿ ಪುನರುಚ್ಚರಿಸಿದೆ.

ಛಿದ್ರಕಾರಿ ಶಕ್ತಿಗಳೊಂದಿಗೆ ಕಾಂಗ್ರೆಸ್(ಐ)

ಕಾಂಗ್ರೆಸ್(ಐ)ನ ಮುಖಂಡತ್ವ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳೊಂದಿಗೆ ಎಲ್ಲಾ ಸಂಬಂಧಗಳನ್ನು ಕಡಿದುಕೊಳ್ಳುವ ಬದಲು, ತಾನು ಅಧಿಕಾರದಲ್ಲಿ ಮುಂದುವರೆಯುವ ದೃಷ್ಟಿಯಿಂದ ಪ್ರತ್ಯೇಕವಾದಿ ಶಕ್ತಿಗಳನ್ನು ಸಂತುಷ್ಟಗೊಳಿಸುವ ಧೋರಣೆಯನ್ನು ಪಟ್ಟಾಗಿ ಹಿಡಿದುಕೊಂಡಿದೆ. ಕೇಂದ್ರ ಸಮಿತಿ ಇದಕ್ಕೆ ಇತ್ತೀಚಿನ ಎರಡು ಉದಾಹರಣೆಗಳನ್ನು ನೀಡಿದೆ. (1) ಕಳೆದ ವಿಧಾನಸಭಾ ಚುನಾವಣೆಗಳ ಮೊದಲು ಎಡರಂಗ ಸರಕಾರವನ್ನು ಬುಡಮೇಲು ಮಾಡಲು ಟಿ.ಎನ್.ವಿ. ಹಾಗೂ ಕಾಂಗ್ರೆಸ್(ಐ) ನಡುವಿನ ಇತ್ತೀಚೆಗೆ ಬಯಲಿಗೆ ಬಂದ ಪಿತೂರಿ ತಮಿಳುನಾಡಿನಲ್ಲಿ ಮುಸ್ಲಿಂಲೀಗ್‌ನ್ನು ಚುನಾವಣಾ ಮೈತ್ರಿಗೆ ಆಹ್ವಾನಿಸುವ ಕಾಂಗ್ರೆಸ್(ಐ) ಮುಖಂಡ ಜಿ.ಕೆ. ಮೂಪನಾರ್‌ರವರ ಘೋಷಣೆ.

ರಾಮ ಜನ್ಮಭೂಮಿ-ಬಾಬ್ರಿ ಮಸೂದೆ ವಿವಾದ ಪರಿಹಾರವಾಗಬೇಕು

ರಾಮಜನ್ಮಭೂಮಿ-ಬಾಬ್ರಿ ಮಸೂದೆ ವಿವಾದ ಇನ್ನೂ ಪರಿಹಾರವಾಗದಿರುವ ಬಗ್ಗೆ ತನ್ನ ಆತಂಕ ವ್ಯಕ್ತಪಡಿಸಿರುವ ಕೇಂದ್ರ ಸಮಿತಿ ಎರಡೂ ಕೋಮುಗಳಲ್ಲಿನ ಶಾಂತಿಪ್ರಿಯ ವಿಭಾಗಗಳು ಅಪೇಕ್ಷಿಸುವ ಒಂದು ಪರಿಹಾರ ಕಂಡು ಹಿಡಿಯುವುದರಲ್ಲಾಗುವ ವಿಳಂಬ ಉತ್ತರಪ್ರದೇಶದಲ್ಲಿ ಮಾತ್ರವೇ ಅಲ್ಲ, ದೇಶದಲ್ಲೆಲ್ಲಾ ಸಾಮಾಜಿಕ ಜೀವನವನ್ನು ಹಾಗೂ ಕೋಮು ಸೌಹಾರ್ದವನ್ನು ಅಸ್ತವ್ಯಸ್ತಗೊಳಿಸುತ್ತದೆ ಎಂದು ಹೇಳಿದೆ. ಈ ವಿವಾದದ ಸೌಹಾರ್ದಯುತ ಪರಿಹಾರಕ್ಕೆ ಸಾಧ್ಯವಾಗಲು ಎಲ್ಲಾ ರಾಜಕೀಯ ಪಕ್ಷಗಳು ನೆರವಾಗಬೇಕೆಂದು ಕೇಂದ್ರಸಮಿತಿ ಬಯಸುವುದಾಗಿ 'ಪತ್ರಿಕಾ ಹೇಳಿಕೆ ಅಳಿಸಿದೆ.

ನಾಥ್‌ದ್ವಾರಾ ದೇವಸ್ಥಾನದಲ್ಲಿ ಹರಿಜನರ ಮೇಲೆ ನಾಚಿಕೆಗೇಡೀ ಹಲ್ಲೆ

ರಾಜಸ್ತಾನದ ನಾಥ್‌ದ್ವಾರಾ ದೇವಸ್ಥಾನವನ್ನು ಪ್ರವೇಶಿಸುವ ಧೈರ್ಯ ಮಾಡಿದ ಹರಿಜನರನ್ನು ಉಚ್ಚವರ್ಣೀಯ ಹಿಂದೂ ಧರ್ಮಾಂಧರು ಥಳಿಸಿರುವ ನಾಚಿಕೆಗೇಡೀ ಕೃತ್ಯವನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ರಾಜಸ್ಥಾನ ಸರಕಾರ ಕಾನೂನು ಮುರಿದವರ ವಿರುದ್ಧ ದೃಢ ಕ್ರಮ ಕೈಗೊಳ್ಳದೆ ಮತ್ತೊಮ್ಮೆ ತನ್ನ ಹೇಡಿತನವನ್ನು ಪ್ರದರ್ಶಿಸಿದೆ ಎಂದು ಕೇಂದ್ರ ಸಮಿತಿ ಹೇಳಿದೆ.

ಪಂಜಾಬಿನಲ್ಲಿ ರಾಜಕೀಯ ದೃಢನಿರ್ಧಾರದ ಅಭಾವ ತೋರ್ಪಡಿಸುತ್ತಿರುವ ಕೇಂದ್ರ ಸರ್ಕಾರದಿಂದಾಗಿ ಪಂಜಾಬ್ ಪರಿಸ್ಥಿತಿಗೆ ಇನ್ನೂ ಪರಿಹಾರ ಕಂಡುಬರುತ್ತಿಲ್ಲ ಎಂಬುದನ್ನು ಕೇಂದ್ರ ಸಮಿತಿ ಆತಂಕದಿಂದ ಗಮನಿಸಿದೆ. ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಆಳುವ ಪಕ್ಷದ ಸ್ವಾರ್ಥಲಾಭಕ್ಕಾಗಿ ಉಪಯೋಗಿಸುವುದನ್ನು ನಿಲ್ಲಿಸಿದರೆ ಮಾತ್ರವೇ ಈ ಸಮಸ್ಯೆ ಪರಿಹಾರ ವಾಗಬಲ್ಲುದು ಎಂದು ಅದು ಹೇಳಿದೆ.

ಪಶ್ಚಿಮ ಬಂಗಾಳದ ಎಡರಂಗದ ಕುರಿತು

ಪಶ್ಚಿಮ ಬಂಗಾಳದ ಪಿ.ಡಬ್ಲ್ಯು.ಡಿ. ಮಂತ್ರಿ, ಜತಿನ್ ಚಕ್ರವರ್ತಿಯ ಎಡರಂಗ-ವಿರೋಧಿ ಚಟುವಟಿಕೆಗಳ ಬಗ್ಗೆ ವರದಿಯನ್ನು ಕೇಂದ್ರ ಸಮಿತಿ ಆಲಿಸಿ, ಚಕ್ರವರ್ತಿಯವರ ಸುಳ್ಳು ಆಪಾದನೆಗಳನ್ನು ಮುಖ್ಯಮಂತ್ರಿ ಹಾಗೂ ಪಕ್ಷ ಸರಿಯಾಗಿಯೇ ತಿರಸ್ಕರಿಸಿದೆ ಎಂದು ಅಭಿಪ್ರಾಯ ಪಟ್ಟಿರುವುದಾಗಿ ಹೇಳಿಕೆ ತಿಳಿಸಿದೆ. ಚಕ್ರವರ್ತಿಯಿಂದಾದ ತೊಂದರೆಯನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳಲು ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿಗೆ ಕೇಂದ್ರ ಸಮಿತಿ ಅಧಿಕಾರ ನೀಡಿದೆ.

ಕೇಂದ್ರ ಸರ್ಕಾರದ ವೈಷಮ್ಯಪೂರ್ಣ ನೀತಿ

ಪಶ್ಚಿಮಬಂಗಾಳ ಮತ್ತು ಕೇರಳ ರಾಜ್ಯಗಳ ಕಾಂಗ್ರೆಸ್ಸೇತರ ಸರಕಾರಗಳ ಬಗ್ಗೆ ಕೇಂದ್ರ ಸರ್ಕಾರ ತಾಳುತ್ತಿರುವ ವೈಷಮ್ಯಪೂರ್ಣ ನಿಲುವಿನ ಬಗ್ಗೆ ವರದಿಗಳನ್ನು ಕೇಂದ್ರ ಸಮಿತಿ ಆಲಿಸಿತು. ಬಕ್ರೇಶ್ವರ ತಾಪವಿದ್ಯುತ್ ಯೋಜನೆಯ ಪಶ್ಚಿಮಬಂಗಾಳದ ಬೇಡಿಕೆಯನ್ನು ಮತ್ತು ಕೇಂದ್ರದಿಂದ ಹಣಕಾಸು ನೆರವಿನ ಬಗ್ಗೆ ಕೇರಳದ ಬೇಡಿಕೆಯನ್ನು ನಿರಾಕರಿಸಿರುವುದು ಅನ್ಯಾಯಪೂರ್ಣ ಎಂದು ಕೇಂದ್ರ ಸಮಿತಿ ವರ್ಣಿಸಿದೆ. ರಾಜ್ಯದ ಭವಿಷ್ಯದ ವಿದ್ಯುಚ್ಛಕ್ತಿ ಅವಶ್ಯಕತೆಗಳನ್ನು ಈಡೇರಿಸಲು ಅತ್ಯಗತ್ಯವಾದ ಬಕ್ರೇಶ್ವರ ಯೋಜನೆಯನ್ನು ಅನುಷ್ಠಾನಕ್ಕೆ ತಂದೇ ತೀರಬೇಕೆಂಬ ಎಡರಂಗದ ನಿರ್ಧಾರವನ್ನು ಕೇಂದ್ರ ಸಮಿತಿ ಬೆಂಬಲಿಸಿದೆ.

ತ್ರಿಪುರಾ ಮುಖ್ಯಮಂತ್ರಿ ರಾಜೀನಾಮೆಗೆ ಪಾಲಿಟ್‌ಬ್ಯೂರೋ ಒತ್ತಾಯ

ಅಕ್ಟೋಬರ್ 13ರಂದು ತ್ರಿಪುರಾದ ಬೆಲೋನಿಯಾ ಸಬ್-ಡಿವಿಜನ್ನಿನಲ್ಲಿ ಕಾಂಗ್ರೆಸ್(ಐ) ಗೂಂಡಾಗಳು ಸಿ.ಪಿ.ಐ.(ಎಂ) ಮೆರವಣಿಗೆಯ ಮೇಲೆ ದಾಳಿ ಮಾಡಿ 16 ಸಿ.ಪಿ.ಐ(ಎಂ) ಕಾರ್ಯಕರ್ತರ ಸಾಮೂಹಿಕ ಹತ್ಯೆ ಮಾಡಿದ್ದಾರೆ.

ಇದನ್ನು ಪ್ರತಿಭಟಿಸಿ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಒಂದು ಹೇಳಿಕೆ ನೀಡಿ ತ್ರಿಪುರಾ ಮುಖ್ಯಮಂತ್ರಿ ಸುಧೀರ್ ರಂಜನ್ ಮಜುಂದಾರ್ ಹಾಗೂ ಗೃಹಮಂತ್ರಿ ಸಮೀರ್ ಬರ್ಮನ್ ರಾಜೀನಾಮೆಗಾಗಿ ಒತ್ತಾಯಿಸಿದೆ.

ಇದನ್ನು ಸಿ.ಪಿ.ಐ.(ಎಂ)- ಕಾಂಗ್ರೆ ಕಾರ್ಯಕರ್ತರ ನಡುವಿನ ತಿಕ್ಕಾಟ ಎಂದು ತ್ರಿಪುರಾ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಮಾಧ್ಯಮಗಳು ಚಿತ್ರಿಸಲು ಪ್ರಯತ್ನಿಸಿರುವುದನ್ನು ಖಂಡಿಸುತ್ತಾ ಇದು ಪೂರ್ವಯೋಚಿತ, ಕ್ರೂರಹಲ್ಲೆ ಎಂದು ಪಾಲಿಟ್‌ಬ್ಯೂರೋ ರಾಜ್ಯದಲ್ಲಿ ಕಾಂಗ್ರೆಸ್(ಐ) ಮುಖಂಡತ್ವ ತನ್ನ ಕಾರ್ಯಕರ್ತರಿಗೆ ಕೊಡುತ್ತಿರುವ ಕುಮ್ಮಕ್ಕಿನಿಂದಾಗಿಯೇ ಇಂತಹ ಹಲ್ಲೆಗಳು ನಡೆಯುತ್ತಿವೆ ಎಂದಿದೆ. ಕೇಂದ್ರ ಸರ್ಕಾರದ, ಕೇಂದ್ರ ಗೃಹ ಸಚಿವಾಲಯದ ಮೌನ ತ್ರಿಪುರಾದಲ್ಲಿ ಎಡವಿರೋಧಿ ಹಿಂಸಾಚಾರಕ್ಕೆ ತುಪ್ಪ ಸುರಿಯುತ್ತಿದೆ.

ತ್ರಿಪುರಾದಲ್ಲೀಗ 1500 ಸಿ.ಪಿ.ಐ.(ಎಂ) ಕಾಯಕರ್ತರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿ ಕಿರುಕುಳ ನೀಡಲಾಗುತ್ತಿದೆ. 400 ಮಂದಿ ಕಾಂಗ್ರೆ ರೌಡಿಗಳ ಆಕ್ರಮಣಕ್ಕೊಳಗಾಗಿದ್ದಾರೆ. 200 ಕಾರ್ಯಕರ್ತರು ಬಂಧನದಲ್ಲಿದ್ದಾರೆ ಮತ್ತು 40 ಕಾರ್ಯಕರ್ತರು ಪೊಲೀಸ್ ಲಾಕಪ್‌ಗಳಲ್ಲಿ ಅಮಾನುಷ ಹಿಂಸೆ ಎದುರಿಸುತ್ತಿದ್ದಾರೆ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ಅಕ್ಟೋಬರ್ 15ರಂದು ಸಿ.ಪಿ.ಐ.(ಎಂ) ದೆಹಲಿ ರಾಜ್ಯ ಸಮಿತಿಯ ನೇತೃತ್ವದಲ್ಲಿ ಪ್ರಧಾನಮಂತ್ರಿಗಳ ನಿವಾಸದೆದುರು ತ್ರಿಪುರಾದ ಈ ಸಾಮೂಹಿಕ ಹತ್ಯೆಗಳನ್ನು ಪ್ರತಿಭಟಿಸಿ ಬೃಹತ್ ಮತ ಪ್ರದರ್ಶನ ನಡೆಯಿತು.

ಸಾಮೂಹಿಕ ಹೋರಾಟಗಳಿಗೆ ಅಭಿನಂದನೆ-ಬೆಂಬಲ

ಎಡ ನೇತೃತ್ವದ ರೈತ ಮತ್ತು ಕೃಷಿಕೂಲಿಕಾರ ಸಂಘಟನೆಗಳು ಜಂಟಿಯಾಗಿ ಸೆಪ್ಟಂಬರ್‌ನಲ್ಲಿ ನಡೆಸಿದ ಅಖಿಲಭಾರತ ಹೋರಾಟಗಳ ವರದಿಗಳನ್ನು ಆಲಿಸಿದ ಕೇಂದ್ರ ಸಮಿತಿ ಈ ಅಖಿಲಭಾರತ ಕಾರ್ಯಾಚರಣೆಯ ದೊಡ್ಡ ಸಫಲತೆಯನ್ನು ಗಮನಿಸಿದೆ ಹಾಗೂ ಈ ಆಂದೋಲನದಲ್ಲಿ ಭಾಗವಹಿಸಿದ 20 ಲಕ್ಷ ರೈತರು ಮತ್ತು ಕೃಷಿ ಕೂಲಿಕಾರರನ್ನು ಇದಕ್ಕಾಗಿ ಅಭಿನಂದಿಸಿದೆ.

ಹೊಸ ಶಿಕ್ಷಣ ನೀತಿ ವಿರುದ್ಧ ಸೆಪ್ಟಂಬರ್ 26ರ ಅಖಿಲಭಾರತ ಮುಷ್ಕರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಕೇಂದ್ರ ಸಮಿತಿ ಅಭಿನಂದಿಸಿದೆ.

ಮುಷ್ಕರ ಹೂಡಿರುವ ಬಿಹಾರದ ರಾಜ್ಯ ಸರ್ಕಾರೀ ನೌಕರರಿಗೆ ತನ್ನ ಸೌಹಾರ್ದತೆಯನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿರುವುದಾಗಿ ಪತ್ರಿಕಾ ಹೇಳಿಕೆ ತಿಳಿಸಿದೆ.

ಪ್ರವಾಹ ಪರಿಸ್ಥಿತಿ ಗಂಭೀರ ಕ್ರಮವಿಲ್ಲ

ಅಸ್ಸಾಂ ಮತ್ತು ಬಿಹಾರ್, ಹಾಗೂ ಇನ್ನು ಇತ್ತೀಚೆಗೆ ಪಂಜಾಬ್, ಜಮ್ಮು-ಕಾಶ್ಮೀರ, ಹಿಮಾಚಲಪ್ರದೇಶ ಮತ್ತು ಹರ್‍ಯಾಣಾದಲ್ಲಿ ಗಂಭೀರ ಪ್ರವಾಹದಿಂದಾಗಿ ತೀವ್ರ ತೊಂದರೆಗೊಳಗಾದ ಸಾವಿರಾರು ಕುಟುಂಬಗಳಿಗೆ ಕೇಂದ್ರ ಸಮಿತಿ ತನ್ನ ಆಳವಾದ ಸಹಾನುಭೂತಿಯನ್ನು ವ್ಯಕ್ತಪಡಿಸಿತು. ಈ ಆಪತ್ತಿನಿಂದಾಗಿ ದೊಡ್ಡ ಜೀವಹಾನಿ ಹಾಗೂ ಆಸ್ತಿಹಾನಿಯಾಗಿದೆ. ಪ್ರವಾಹ ಪೀಡಿತರಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ಹಾಗೂ ನೆರವು ಒದಗಿಸಲು ಕೇಂದ್ರ ಸರ್ಕಾರ ಯಾವುದೇ ಗಂಭೀರ ಕ್ರಮ ಕೈಗೊಂಡಿಲ್ಲ ಎಂದು ಕೇಂದ್ರಸಮಿತಿ ಹೇಳಿದೆ.

ಪ್ರಧಾನಿಯ ಚೀಣಾ ಭೇಟಿ ಸಂಬಂಧಗಳನ್ನು ಉತ್ತಮಪಡಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಭಾರತ ಮತ್ತು ಚೀಣಾ ನಡುವಿನ ಸಂಬಂಧಗಳಲ್ಲಿ ಸುಧಾರಣೆ ಕಾಣಬರುತ್ತಿದೆ ಎಂದು ಗಮನಿಸಿದ ಕೇಂದ್ರ ಸಮಿತಿ ಪ್ರಧಾನಮಂತ್ರಿ ರಾಜೀವ ಗಾಂಧಿಯವರ ಮುಂಬರುವ ಚೀಣಾ ಭೇಟಿ ಈ ಸಂಬಂಧಗಳನ್ನು ಮತ್ತಷ್ಟು ಸುಧಾರಿಸುತ್ತದೆ ಎಂದು ಆಶಿಸಿದೆ.

ಈ ಭೇಟಿಯನ್ನು ವಿರೋಧಿಸುತ್ತಿರುವ ಕೆಲವು ಮಂದಿ ದೇಶದಲ್ಲಿನ ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿನಿಧಿಸುತ್ತಿಲ್ಲ ಎಂದು ಹೇಳಿರುವ ಅದು ಎರಡು ದೊಡ್ಡ ನೆರೆ-ಹೊರೆ ದೇಶಗಳ ನಡುವೆ ಮಿತ್ರತ್ವಪೂರ್ಣ ಸಂಬಂಧ ಏರ್ಪಡಬೇಕೆಂದು ಈ ದೇಶದ ಜನ ಬಯಸುತ್ತಾರೆ ಎಂದು ಅಭಿಪ್ರಾಯ ಪಟ್ಟಿದೆ.

ಏಶ್ಯಾ-ಶಾಂತಸಾಗರ ಪ್ರದೇಶದಲ್ಲಿ ನಿಶ್ಶಸ್ತ್ರೀಕರಣ ಹಾಗೂ ವೈಷಮ್ಯಗಳನ್ನು ಸಡಿಲಿಸಲು ಸೆಪ್ಟಂಬರ್ 16ರಂದು ಗೊರ್ಬಚೆವ್ ಮುಂದಿಟ್ಟ ಪ್ರಸ್ತಾಪಗಳನ್ನು ಕೇಂದ್ರಸಮಿತಿಯ ಈ ಸಭೆ ಸ್ವಾಗತಿಸಿದೆ. ಅಫಘಾನಿಸ್ತಾನ ಬಗ್ಗೆ ಜಿನೀವಾ ಒಪ್ಪಂದವಾಗಿ ಹಲವು ತಿಂಗಳಾದರೂ, ಸೋವಿಯತ್ ಸಶಸ್ತ್ರ ಪಡೆಗಳ ವಾಪಾಸಾತಿ ಸರಾಗವಾಗಿ ನಡೆಯುತ್ತಿದ್ದರೂ, ಈ ಒಪ್ಪಂದದಲ್ಲಿ ಭಾಗಿಗಳಾಗಿರುವ ಪಾಕಿಸ್ತಾನ ಹಾಗೂ ಅಮೇರಿಕಾ ಇದನ್ನು ಬುಡಮೇಲು ಮಾಡಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಗಮನಿಸಿರುವ ಕೇಂದ್ರ ಸಮಿತಿ ಒಪ್ಪಂದವನ್ನು ರಕ್ಷಿಸಲು ಎಲ್ಲಾ ಪ್ರಯತ್ನ ನಡೆಸುತ್ತಿರುವ ಅಫಘಾನಿಸ್ತಾನ ಹಾಗು ಸೋವಿಯತ್ ಒಕ್ಕೂಟಕ್ಕೆ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಪಾಕಿಸ್ತಾನದಲ್ಲಿ ಹಾಗೂ ಬರ್ಮಾದಲ್ಲಿ ಕೂಡಾ ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಹೋರಾಡುತ್ತಿರುವ ಪ್ರಜಾಪ್ರಭುತ್ವ ಶಕ್ತಿಗಳಿಗೆ ಕೇಂದ್ರ ಸಮಿತಿ ತನ್ನ ಸೌಹಾರ್ದತೆ ಹಾಗೂ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತಾ ಬರ್ಮಾದಲ್ಲಿ ವಿರೋಧಿ ಪ್ರಜಾಪ್ರಭುತ್ವ ಶಕ್ತಿಗಳು ಏಕ-ಪಕ್ಷ ಮಿಲಿಟರಿ ಆಳ್ವಿಕೆಯ ವಿರುದ್ಧ ಹೋರಾಡುತ್ತಿದ್ದಾರೆ ಎಂದು ಹೇಳಿದೆ.

......ಮುನ್ನಡೆ

(ಒಂದನೇ ಪುಟದಿಂದ) ಕೇರಳ, ಪ.ಬಂಗಾಳ, ತ್ರಿಪುರಗಳಲ್ಲಿ ಮಾತ್ರ ಎಡಪಕ್ಷಗಳಿಗೆ ಹೆಚ್ಚು ಶಕ್ತಿಯಿದ್ದರೂ ಬೇರೆ ರಾಜ್ಯಗಳಲ್ಲಿ ಸಾಧಾರಣ ರೀತಿಯಲ್ಲಿದೆ. ಈ ರಾಜ್ಯಗಳಲ್ಲಿ ಪ್ರಜಾ ಸತ್ತಾತ್ಮಕ ವಿರೋಧ ಪಕ್ಷಗಳಿಗೆ ಹೆಚ್ಚು ಶಕ್ತಿಯೆಂಬುದು ನಮಗೆ ತಿಳಿದಿದೆ.

ಆದರೆ ಒಂದು ವಿಷಯವನ್ನಿಲ್ಲಿ ಬಹಿರಂಗವಾಗಿ ಹೇಳಬೇಕಾಗಿದೆ. ಇತರ ಜಾತ್ಯಾತೀತ ವಿರೋಧ ಪಕ್ಷಗಳ ನಿಲುವು ಏನೇ ಇದ್ದರೂ ಎಡಪಕ್ಷಗಳು ಬಿ.ಜೆ.ಪಿ. ಮತ್ತು ಮುಸ್ಲಿಂಲೀಗ್ ಸೇರಿದಂತಹ ಕೋಮುವಾದಿ ಬಲಪಂಥೀಯ ಪಕ್ಷಗಳ ಜೊತೆಯಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಅಷ್ಟೇ ಅಲ್ಲ ಈ ಪ್ರತಿಗಾಮಿ ಶಕ್ತಿಗಳನ್ನು ಎದುರಿಸುವ ಸ್ವಾತಂತ್ರವನ್ನು ಮೊಟಕುಗೊಳಿಸುವ ಯಾವ ಸಂಬಂಧವನ್ನೂ ನಾವು ಏರ್ಪಡಿಸಿ ಕೊಳ್ಳುವುದಿಲ್ಲ.

ಮೇಲೆ ಸೂಚಿಸಿದಂತೆ ಎಡ ಪಕ್ಷಗಳು ಬೆಂಬಲಿಸುತ್ತಿರುವ ವಿರೋಧ ಪಕ್ಷಗಳ ಐಕ್ಯತೆಯನ್ನು ಉಂಟು ಮಾಡುವುದು, ಪ್ರತಿಗಾಮಿ ಪಕ್ಷಗಳನ್ನು ದೂರವಿರಿಸಿ ಎಡಪಕ್ಷಗಳ ಜೊತೆಯಲ್ಲಿ ಸಹಕರಿಸಿದರೆ ಮುಂದಿನ ಚುನಾವಣೆಯಲ್ಲಿ ರಾಜೀವ್ ಗಾಂಧಿ ಸರ್ಕಾರವನ್ನು ಪದಚ್ಯುತಗೊಳಿಸಲು ಮತ್ತು ಬಿ.ಜೆ.ಪಿ. ಮುಸ್ಲಿಂಲೀಗ್‌ಗಳಂತ ಪ್ರತಿಗಾಮಿ ಶಕ್ತಿಗಳನ್ನು ಪ್ರತ್ಯೇಕಗೊಳಿಸಲು ಸಾಧ್ಯವಾಗುತ್ತದೆ. ಇದೇ ಭಾರತದ ರಾಜಕೀಯದಲ್ಲಿ ಒಂದು ಪ್ರಗತಿಪರ ಬದಲಾವಣೆಯನ್ನು ತರುವುದಕ್ಕೆ ಇರುವ ಏಕೈಕ ಮಾರ್ಗವಾಗಿದೆ.

ವಿಶ್ವದ ಮಟ್ಟದಲ್ಲಿ

ಪ್ರಪಂಚದ ಮಟ್ಟದಲ್ಲಿ ಕಮ್ಯುನಿಸ್ಟ್ ಚಳವಳಿಯ ಐಕ್ಯತೆ, ಸಮಾಜವಾದೀ ದೇಶಗಳೊಳಗಿನ ಮೈತ್ರಿ 1960 ರಿಂದೀಚೆಗಿನ ತೀವ್ರ ಭಿನ್ನಾಭಿಪ್ರಾಯದ ನಂತರ ಇಷ್ಟೊಂದು ಬಲಿಷ್ಟವಾಗಿ ಹಿಂದೆಂದೂ ಬೆಳೆದುಬಂದಿರಲಿಲ್ಲ. ಇದು ನಮಗೆ ಸಂತೋಷ ಮತ್ತು ಅಭಿಮಾನವನ್ನುಂಟು ಮಾಡಿದೆ.

ಆದರೆ ಎರಡನೆಯ ಜಾಗತಿಕ ಮಹಾಯುದ್ಧದ ಮೊದಲು ಮತ್ತು ಯುದ್ಧ ಸಮಯದಲ್ಲೂ ಏರ್ಪಟ್ಟಿದ್ದ ಐಕ್ಯತೆ ಮತ್ತೆ ಸ್ಥಾಪನೆಯಾಗಲಿಲ್ಲವೆಂಬ ಸತ್ಯವನ್ನು ನಾವು ಒಪ್ಪಿಕೊಳ್ಳಬೇಕಾಗಿದೆ.

ಅಕ್ಟೋಬರ್ ಕ್ರಾಂತಿಯ ಎಪ್ಪತ್ತನೇ ವಾರ್ಷಿಕೋತ್ಸವವನ್ನು ಆಚರಿಸಲು ಸಮಾವೇಶಗೊಂಡ ಮಹಾ ಸಮ್ಮೇಳನವು ಒಂದು ವಿಷಯವನ್ನು ಸ್ಪಷ್ಟಗೊಳಿಸಿದೆ. ಅದು ಯುದ್ಧ ಅಪಾಯವನ್ನಷ್ಟೇ ಪ್ರಧಾನವಾಗಿ ಪರಿಗಣಿಸುವ, ಉಳಿದೆಲ್ಲಾ ಪ್ರಶ್ನೆಗಳನ್ನು ಅಪ್ರಧಾನವಾಗಿ ಕಾಣುವ ಪಕ್ಷಗಳು, ತಮ್ಮ ದೇಶದ ವರ್ಗ ಹೋರಾಟದಲ್ಲಿಯೂ ಮತ್ತು ರಾಜಕೀಯ ಹೋರಾಟಗಳಲ್ಲಿಯೂ ಗಟ್ಟಿಯಾಗಿ ನಿಂತೇ ಅಣು ಯುದ್ಧ ಅಪಾಯಕ್ಕೆದುರಾದ ಜಾಗತಿಕ ಚಳುವಳಿ ಯಲ್ಲಿ ತಮ್ಮ ದೇಶದ ಜನತೆಯನ್ನು ಅಣಿನೆರೆಸಲು ಶ್ರಮಿಸುವ ಪಕ್ಷಗಳು ಹೀಗೆ ಎರಡು ವಿಭಾಗಗಳು ಇಂದಿನ ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲಿ ಇದೆ. ಆದರೆ ಈ ಪಕ್ಷಗಳು ಯಾವುವೂ ಇತರ ಸಹೋದರ ಪಕ್ಷಗಳ ಮೇಲೆ ಒತ್ತಾಯ ಹೇರುವ ಪ್ರಯತ್ನವನ್ನು ಈಗ ಮಾಡುವುದಿಲ್ಲ. ಪ್ರಪಂಚದ ಕಮ್ಯುನಿಸ್ಟ್ ಚಳವಳಿಯ ಒಳಗಿನ ಒಂದು ಹೊಸ ಸಂಬಂಧದ ರೂಪವಾಗಿದೆ ಇದು.

ಇದಕ್ಕೆ ಒಂದು ನಿದರ್ಶನವೆಂದರೆ ಭಾರತದ ರಾಜೀವ್ ಸರ್ಕಾರಕ್ಕೆ ಸಂಬಂಧಿಸಿದಂತೆ ಸೋವಿಯತ್ ಕಮ್ಯುನಿಸ್ಟ್ ಪಕ್ಷವೂ ಇಲ್ಲಿನ ಎಡಪಕ್ಷಗಳೂ ತೆಗೆದುಕೊಳ್ಳುವ ನಿಲುವುಗಳಲ್ಲಿನ ವ್ಯತ್ಯಾಸ. ಅದು ಯುದ್ಧದ ಅಪಾಯ ಇವತ್ತಿನ ಒಂದು ಸಮಸ್ಯೆಯಾಗಿದ್ದು ಅದಕ್ಕೆ ಸಂಬಂಧಿಸಿದಂತೆ ರಾಜೀವ್ ಸರ್ಕಾರದ ನಿಲುವು ಅನುಕೂಲಕರ ವಾಗಿದ್ದರಿಂದ ಸರ್ಕಾರದ ಜೊತೆಗೆ ಸಂಬಂಧವಿರುವ ಧೋರಣೆಯನ್ನು ಸೋವಿಯತ್ ಪಕ್ಷ ಅನುಸರಿಸುತ್ತಿದೆ. ಈ ವಿಷಯದಲ್ಲಿ ಪ್ರತ್ಯಕ್ಷವಾಗಿ ರಾಜೀವ್ ಸರ್ಕಾರ ತೆಗೆದುಕೊಳ್ಳುವ ನಿಲುವುಗಳನ್ನು ಬೆಂಬಲಿಸುವುದರೊಂದಿಗೆ ಭಾರತದ ಜನತೆಗೆ ವಿರುದ್ಧವಾಗಿ ಆಕ್ರಮಣ ನಡೆಸುವ ರಾಜೀವ್ ಸರ್ಕಾರವನ್ನು ಕೆಳಗಿಳಿಸಿ ಎಡಪಕ್ಷಗಳ ಜಾತ್ಯಾತೀತ ಶಕ್ತಿಗಳ ಒಂದು ಬದಲೀ ಸರ್ಕಾರವನ್ನು ರಚಿಸುವ ಪ್ರಯತ್ನವನ್ನು ಸಿ.ಪಿ.ಐ(ಎಂ) ಮಾಡುತ್ತಿದೆ.

Printed & Published by P. Ramachandra Rao on behalf of the Communist Party of India (Marxist) Karnataka State Committee, K.V. Temple Street, Sulthanpet, Bangalore-560053. Editorial and Managerial Office; L-56, K.V. Temple Street, Sulthanpet, B-53, Phone:75331. Editor: P.Ramachandra Rao, Managing Editor: N.K.Upadhayaya.